ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 26 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 131 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಗುಡ್ಡ ಕುಸಿತ ಹಿನ್ನೆಲೆ: ಪಶ್ಚಿಮಘಟ್ಟದಲ್ಲಿನ ಅಕ್ರಮ ರೆಸಾರ್ಟ್, ಹೋಂ ಸ್ಟೇ, ತೋಟ, ಬಡಾವಣೆಗಳ

ತೆರವಿಗೆ ಸರ್ಕಾರದ ಆದೇಶ

ಬೆಂಗಳೂರು, ಆ.25– **ಉತ್ತರ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ನಡೆದ ಭೂಕುಸಿತ ಪ್ರಕರಣದ ಬೆನ್ನಲ್ಲೇ ಎಚ್ಚೆತ್ತ ರಾಜ್ಯ ಸರ್ಕಾರ ಪಶ್ಚಿಮಘಟ್ಟದ ಅರಣ್ಯ ಪ್ರದೇಶದಲ್ಲಿರುವ ಅನಧಿಕೃತ ಹೋಂ ಸ್ಟೇ, ರೆಸಾರ್ಟ್‌ಗಳ ತೆರವಿಗೆ ಮುಂದಾಗಿದೆ.**


ಸಾಂದರ್ಭಿಕ ಚಿತ್ರ

ಅರಣ್ಯ ಸಚಿವ ಈಶ್ವರ್ ಖಂಡ್ರೆ ಈ ಸಂಬಂದ ಸುತ್ತೋಲೆ ಹೊರಡಿಸಿದ್ದು, ಪಶ್ಚಿಮಘಟ್ಟದಲ್ಲಿ 2015ರಿಂದ ಈಚೆಗೆ ಆಗಿರುವ ಎಲ್ಲಾ ಅರಣ್ಯ ಒತ್ತುವರಿ ತೆರವುಗೊಳಿಸುವಂತೆ ಸೂಚನೆ ನೀಡಿದ್ದಾರೆ.


ಇದೀಗ ಎಲ್ಲ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ / ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಪತ್ರ ಬರೆದಿರುವ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಭೂ ದಾಖಲೆ) ವಸ್ತು ನಿಷ್ಠ ಮಾಹಿತಿಯನ್ನು ಕೂಡಲೇ ಸಲ್ಲಿಸುವಂತೆ ಸೂಚಿಸಿದ್ದಾರೆ. ಸ್ವಾಭಾವಿಕ, ಪ್ರಕೃತಿದತ್ತವಾದ ಪಶ್ಚಿಮಘಟ್ಟದ ಗುಡ್ಡಗಳು ಮತ್ತು ಶೋಲಾ ಅರಣ್ಯಗಳ ತಲೆ ಕಡಿದು ಕಾಫಿ ತೋಟ,


ಈಶ್ವರ್ ಖಂಡ್ರೆ

ಮನೆ, ಹೋಂಸ್ಟೇ, ರೆಸಾರ್ಟ್ ಮಾಡುತ್ತಿರುವುದರಿಂದ ಹಾಗೂ ಬೇರಿನಿಂದ ಗಟ್ಟಿಯಾಗಿ ಮಣ್ಣು ಹಿಡಿದಿಡುವ ಬೃಹತ್ ಮರಗಳ ಕಡಿತಲೆ, ಅವೈಜ್ಞಾನಿಕವಾಗಿ ಗುಡ್ಡ ಕತ್ತರಿಸಿ ನಿರ್ಮಿಸುವ ರಸ್ತೆಗಳಿಂದ ಇಂತಹ ದುರಂತ ಮರುಕಳಿಸುತ್ತಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಅಂತೆಯೇ 2015ರ ನಂತರದಲ್ಲಿ ರಾಜ್ಯದ ಪಶ್ಚಿಮಘಟ್ಟ ಮತ್ತು ಇತರ ಘಟ್ಟ ಪ್ರದೇಶದಲ್ಲಿ ಅರಣ್ಯ ಒತ್ತುವರಿ ಮಾಡಿ ನಿರ್ಮಿಸಿರುವ ಅಕ್ರಮ ರೆಸಾರ್ಟ್, ಹೋಂ ಸ್ಟೇ, ತೋಟ, ಬಡಾವಣೆ ಹಾಗೂ ಇನ್ನಿತರ ಅರಣ್ಯ ಒತ್ತುವರಿ ಪ್ರಕರಣಗಳಿಗೆ ಸಂಬಂಧಿಸಿ ದಂತೆ ವೈಯಕ್ತಿಕ ಗಮನಹರಿಸಿ ಪರಿಶೀಲಿಸಿ

ವಸ್ತು ನಿಷ್ಠ ಮಾಹಿತಿಯನ್ನು ಕೂಡಲೇ ಸಲ್ಲಿಸಲು ನೀಡಿರುವ ನಿರ್ದೇಶನಗಳನ್ನು ಪುನರುಚ್ಚರಿಸಲಾಗಿದೆ. ಚಿಕ್ಕಮಗಳೂರು, ಶಿವಮೊಗ್ಗ, ಮೈಸೂರು, ಚಾಮರಾಜಗರ, ಬೆಳಗಾವಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು ಹಾಗೂ ಹಾಸನ ಸೇರಿದಂತೆ ರಾಜ್ಯದ ಪಶ್ಚಿಮಘಟ್ಟದ ಎಲ್ಲಾ ಗಿರಿ ಪ್ರದೇಶಗಳಲ್ಲಿ ಅನಧಿಕೃತವಾಗಿ ಮತ್ತು ಅರಣ್ಯ ಪ್ರದೇಶ ಒತ್ತುವರಿ ಮಾಡಿ ನಿರ್ಮಿಸಲಾಗಿರುವ ಬಡಾವಣೆ, ತೋಟ, ಹೋಂ ಸ್ಟೇ ಮತ್ತು ರೆಸಾರ್ಟ್‌ಗಳ ತೆರವಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಆಗಸ್ಟ್ 2ರಂದು ಸೂಚಿಸಿದ್ದರು. ■ 8ನೇ ಪುಟಕ್ಕೆ

ದಸರಾ ಗಜಪಡೆಯ ಮೊದಲ ದಿನದ ತಾಲೀಮು ಯಶಸ್ವಿ


ದಸರಾ ಗಜಪಡೆಗೆ ಭಾನುವಾರ ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನದವರೆಗೂ ತಾಲೀಮು ನಡೆಸಲಾಯಿತು.

ಮೈಸೂರು, ಆ.25(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಅಂಬಾರಿ ಆನೆ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ ಎಂಟು ಆನೆಗಳು ಭಾನುವಾರ ಜಂಬೂಸವಾರಿ ಮಾರ್ಗದಲ್ಲಿ ಮೊದಲ ತಾಲೀಮನ್ನು ಯಶಸ್ವಿಯಾಗಿ ನಡೆಸಿ, ಸಾರ್ವಜನಿಕರ ಗಮನ ಸೆಳೆದವು.

ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಮೊದಲ ತಂಡದ 9 ಆನೆಗಳಲ್ಲಿ ಇದೇ ಮೊದಲ ಬಾರಿಗೆ ಜಂಬೂಸವಾರಿ ಸಾಗುವ ಮಾರ್ಗದಲ್ಲಿ 8 ಆನೆಗಳು ತಾಲೀಮು ನಡೆಸಿ ದಸರಾ ಚಟುವಟಿಕೆ ಗರಿಗೆದರುವಂತೆ ಮಾಡಿದವು. ನಾಡಹಬ್ಬ ದಸರಾ ಮಹೋತ್ಸವ ಅ.3(ನವರಾತ್ರಿ) ಆರಂಭವಾಗಿ ಅ.12ರಂದು ವಿಜಯದಶಮಿ ಮೆರವಣಿಗೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಆ.21ರಂದು ಗಜಪಯಣದ ಮೂಲಕ ಮೈಸೂರಿಗೆ ಆಗಮಿಸಿದ್ದ ಗಜಪಡೆಯ ಮೊದಲ ತಂಡಕ್ಕೆ ಇಂದಿನಿಂದ ತಾಲೀಮು ಆರಂಭಿಸಲಾಯಿತು.

ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಮುಂಭಾಗದಿಂದ ಬೆಳಗ್ಗೆ 7.03ಕ್ಕೆ ತಾಲೀಮು ಆರಂಭಿಸಲು ಕಾಲ್ನಡಿಗೆ ಆರಂಭಿಸಿದ ಅಭಿಮನ್ಯು ನೇತೃತ್ವದ ಗಜಪಡೆ ಬಲರಾಮ ದ್ವಾರದಿಂದ ಹೊರಬಂದು ಕೆ.ಆರ್.ವೃತ್ತ, ಸಯ್ಯಾಜಿ ರಾವ್ ರಸ್ತೆಯಲ್ಲಿ ಸರ್ಕಾರಿ ಆಯುರ್ವೇದ ಆಸ್ಪತ್ರೆ, ಹಳೇ ಆರ್‌ಎಂಸಿ ವೃತ್ತ, ಬಂಬೂಬಜಾರ್ ವೃತ್ತ, ಹೈವೇ ವೃತ್ತ,

ಪ್ರಬುದ್ಧ ವರ್ತನೆ

ದಸರಾ ಗಜಪಡೆಯ ಮೊದಲ ತಂಡದ 9 ಆನೆಗಳಲ್ಲಿ ಕಂಜನ್ ಆನೆಯನ್ನು ಹೊರತುಪಡಿಸಿ 8 ಆನೆಗಳಿಗೆ ಇಂದು ಮೊದಲ ದಿನದ ತಾಲೀಮು ಯಶಸ್ವಿಯಾಗಿ ನಡೆಸಲಾಗಿದೆ. ಹಂತ ಹಂತವಾಗಿ ಆನೆಗಳಿಗೆ ಭಾರ ಹೊರಿಸುವ ತರಬೇತಿಯನ್ನೂ ನೀಡಲಾಗುತ್ತದೆ. ಹೊಸ ಆನೆಗಳಾದ ಏಕಲವ್ಯ, ರೋಹಿತ ಆನೆಯ ವರ್ತನೆ ಭರವಸೆ ಮೂಡಿಸಿದೆ. ಅವುಗಳು ಪ್ರಬುದ್ಧವಾಗಿ ವರ್ತಿಸುತ್ತಿವೆ. ಇದನ್ನು ಕಂಡರೆ ಆಶ್ಚರ್ಯವಾಗುತ್ತದೆ. ಇದು ಆಶಾದಾಯಕ ಬೆಳವಣಿಗೆ. ಗಜಪಡೆಯ ಆರೋಗ್ಯ ಕುರಿತು ಹೆಚ್ಚಿನ ಗಮನ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಆನೆಗಳಿಗೆ ಭಾರ ಹೊರುವ ತಾಲೀಮು ಆರಂಭಿಸಲಾಗುತ್ತದೆ.

– ಡಾ.ಐ.ಬಿ.ಪ್ರಭುಗೌಡ,
ಡಿಸಿಎಫ್, ವನ್ಯಜೀವಿ ವಿಭಾಗ

ನೆಲ್ಸನ್ ಮಂಡೇಲಾ ರಸ್ತೆಯ ಮೂಲಕ ಬನ್ನಿಮಂಟಪದ ಪಂಜಿನ ಕವಾಯತು ಮೈದಾನವನ್ನು ಬೆಳಗ್ಗೆ 8.25ಕ್ಕೆ ತಲುಪಿದವು. ಮಾರ್ಗದುದ್ದಕ್ಕೂ 3 ಕಡೆ ಲದ್ದಿ ಹಾಕಲು ಎರಡು ನಿಮಿಷ ವಿರಮಿಸಿದ ಆನೆಗಳು, ನಂತರ ಯಾವುದೇ ಅಡೆತಡೆ, ಅಳುಕಿಲ್ಲದೆ ಸರಾಗವಾಗಿ ಸಾಗಿ ಗಮನ ಸೆಳೆದವು. ಗಜಪಡೆಯ ನಾಯಕ ಆನೆ ಅಭಿಮನ್ಯು ನೇತೃತ್ವದಲ್ಲಿ ■ 8ನೇ ಪುಟಕ್ಕೆ

ಯುವಕರೇ ರಾಜಕೀಯಕ್ಕೆ ಬನ್ನಿ

ನವದೆಹಲಿ, ಆ.25– ಸ್ವಾತಂತ್ರ್ಯ ದಿನಾಚರಣೆ ಭಾಷಣದಲ್ಲಿ ಅಭಿವೃದ್ಧಿ ಹೊಂದಿದ ಭಾರತ ಹಾಗೂ ಬಲಿಷ್ಠ ಪ್ರಜಾ ಪ್ರಭುತ್ವಕ್ಕಾಗಿ ಒಂದು ಲಕ್ಷದಷ್ಟು ಯುವ ಜನತೆ ರಾಜಕೀಯಕ್ಕೆ ಪ್ರವೇಶಿಸಲು ಕರೆ ನೀಡಿದ್ದೆ. ಇದಕ್ಕೆ ವ್ಯಾಪಕ ಪ್ರತಿಕ್ರಿಯೆ ದೊರಕುತ್ತಿದೆ. ಸ್ವಾತಂತ್ರ್ಯ ಚಳವಳಿಯಲ್ಲಿ ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದ ■ 8ನೇ ಪುಟಕ್ಕೆ



ಸರ್ಕಾರದಿಂದ ಒಂದೇ ವರ್ಷದಲ್ಲಿ ಲಕ್ಷಾಂತರ ರೂ. ಮೆಡಿಕಲ್ ಬಿಲ್ ಕ್ಲೇಮ್ ಮಾಡಿಕೊಂಡ ಶಾಸಕರು

ಬೆಂಗಳೂರು, ಆ.25– ಮುಡಾ, ವಾಲ್ಮೀಕಿ ಹಗರಣ, ಎಸ್‌ಸಿ–ಎಸ್‌ಟಿ ಇಲಾಖೆಯ ಹಣ ದುರುಪಯೋಗ ಸೇರಿದಂತೆ ಸರ್ಕಾರದ ವಿರುದ್ಧ ದಿನಕ್ಕೊಂದು ಹೊಸ ಆರೋಪಗಳು ಹೊರಬರುತ್ತಿದ್ದು, ಸಿಎಂ ವಿರುದ್ಧವೇ ಮುಡಾ ಕೇಸ್‌ನಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ಸಿಕ್ಕಿದೆ. ಇದರ ನಡುವೆ ಅನಾರೋಗ್ಯದ ಹೆಸರಿನಲ್ಲಿ ಒಂದೇ ವರ್ಷದಲ್ಲಿ ಕೋಟ್ಯಂತರ ರೂ.ಗಳನ್ನು ಶಾಸಕರು ಕ್ಲೇಮ್ ಮಾಡಿಸಿಕೊಂಡಿರುವುದು ಬೆಳಕಿಗೆ ಬಂದಿದೆ.

ಹೆಚ್ಚು ಮೆಡಿಕಲ್ ಬಿಲ್ ಕ್ಲೇಮ್ ಮಾಡಿದವರು


ಹರೀಶ್ ಕುಮಾರ್	: 2 ಲಕ್ಷ ರೂ.
ಮರಿತಿಬ್ಬೇಗೌಡ	: 1,54,995 ರೂ.
ಎನ್.ವೈ.ನಾರಾಯಣಸ್ವಾಮಿ	: 3 ಲಕ್ಷ ರೂ.
ಅಬ್ದುಲ್ ಜಬ್ಬಾರ್	: 1,1,345 ರೂ.
ಸುಧಾಮ್ ದಾಸ್	: 2,04,542 ರೂ.
ಸುನೀಲ್ ವಲ್ಯಾಪುರೆ	: 2,75,000 ರೂ.
ಛಲವಾದಿ ನಾರಾಯಣಸ್ವಾಮಿ	:1,18,828 ರೂ.
ವೈಎಂ ಸತೀಶ್	: 2,77,559 ರೂ.
ಮಧು ಮಾದೇಗೌಡ	: 2,46,233 ರೂ.
ರಘುನಾಥ್ ಮಲ್ಕಾಪುರೆ	:1,34,823 ರೂ.
ಎಂ ಜಿ ಮೂಳೆ	: 2,24,282 ರೂ.

ಅನಾರೋಗ್ಯ ಕಾರಣಕ್ಕಾಗಿ ಮೆಡಿಕಲ್ ಬಿಲ್ ಪಡೆದಿರುವ ವಿಧಾನ ಪರಿಷತ್ ಸದಸ್ಯರು ಹಾಗೂ ಶಾಸಕರ ಪಟ್ಟಿಯನ್ನು ಆರ್‌ಟಿಐ ಮಾಹಿತಿ ನೀಡಿದ್ದು, 2023ರ ಮೇ 1 ರಿಂದ 2024ರ ಜುಲೈವರೆಗೆ ವಿಧಾನಪರಿಷತ್ ಸದಸ್ಯರು ಹಾಗೂ ಶಾಸಕರು ಲಕ್ಷಾಂತರ ರೂಪಾಯಿ ಹಣವನ್ನು ಕ್ಲೇಮ್ ಮಾಡಿಕೊಂಡಿದ್ದಾರೆ. ಅನಾರೋಗ್ಯಕ್ಕಾಗಿ ಸರ್ಕಾರದಿಂದ ಹಣ ಕ್ಲೇಮ್ ಮಾಡಲು ಅವಕಾಶವಿದೆ. ಇದರಂತೆ ವಿಧಾನ ■ 8ನೇ ಪುಟಕ್ಕೆ

ತಮ್ಮ 14 ಸೈಟ್‌ಗೆ 62 ಕೋಟಿ ಕೇಳುವ ಸಿಎಂ ಸಿದ್ದರಾಮಯ್ಯ ಕೇವಲ 52 ಕೋಟಿಗೆ 3,667 ಎಕರೆ ಗಣಿ ಭೂಮಿ ಜಿಂದಾಲ್‌ಗೆ ಮಾರಾಟ ಮಾಡಿದ್ದಾರೆ


ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಕಿಡಿ

ಮೈಸೂರು, ಆ.25(ಜಿಎ)– ತಮ್ಮ 14 ಸೈಟ್‌ಗಳಿಗೆ 62 ಕೋಟಿ ರೂ. ಕೇಳುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸರ್ಕಾರದ ಫಲವತ್ತಾದ 3,667 ಎಕರೆ ಗಣಿಗಾರಿಕೆ ಭೂಮಿಯನ್ನು ಕೇವಲ 52 ಕೋಟಿ ರೂ.ಗೆ ಜಿಂದಾಲ್ ಕಂಪನಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಕಿಡಿಕಾರಿದ್ದಾರೆ.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 3667 ಎಕರೆ ಗಣಿ ಭೂಮಿಯನ್ನು ಎಕರೆಗೆ 1.20 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ. ಆ ಭೂಮಿಯಲ್ಲಿ ಬೆಲೆ ಬಾಳುವ ಐರನ್, ಮಿನರಲ್ಸ್ ಸೇರಿದಂತೆ ಹಲವು ಖನಿಜಗಳಿವೆ. ಬೆಸ್ಟ್ ಓರಲ್ಸ್ ಸಿಗುವ ಶೇ.62ರಷ್ಟು ಈಲ್ಡ್ ಬರುವ ಭೂಮಿಯನ್ನು ಜಿಂದಾಲ್ ಕಂಪನಿಗೆ ಏಕಪಕ್ಷೀಯವಾಗಿ ಮಾರಾಟ ಮಾಡಿದ್ದಾರೆ. ಈ ಭೂಮಿಗೆ ಯಾವುದೇ ಬೆಲೆಯನ್ನು ಕಟ್ಟೋಕೆ ಆಗುವುದಿಲ್ಲ. 2017ರಲ್ಲಿ ಭೂಮಾಪನ ಹಾಗೂ ಕಾನೂನು ಇಲಾಖೆಯ ಅನ್ವಯ ಭೂಮಿಗೆ ಇರುವ ಬೆಲೆಯನ್ನು ಆಧರಿಸಿ, ಭೂಮಿಯಲ್ಲಿರುವ ಅದಿರು ಪ್ರಮಾಣವನ್ನು ನೋಡಿ ಭೂಮಿ ಮಾರಾಟ ಮಾಡಬೇಕು ಎಂದು ವರದಿ ನೀಡಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ತಮ್ಮ ಅನುಕೂಲಕ್ಕೆ ತಕ್ಕಂತೆ ಸರ್ಕಾರದ ಭೂಮಿಯನ್ನು ಪರಭಾರೆ ಮಾಡಿದೆ. ■ 8ನೇ ಪುಟಕ್ಕೆ

ಮುಡಾ ಪ್ರಕರಣ: ಸಿಎಂ ಬೆನ್ನಿಗೆ ನಿಂತ ಮಠಾಧೀಶರು


ಬೆಂಗಳೂರಿನ ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಯಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಮಠಾಧೀಶರು ಬೆಂಬಲ ವ್ಯಕ್ತಪಡಿಸಿದರು.

ಬೆಂಗಳೂರು, ಆ.25– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನ ಹಂಚಿಕೆ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಹಲವು ಸಂಘಟನೆಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಬೆನ್ನಿಗೆ ನಿಂತಿದ್ದು, ಈಗ ಹಿಂದುಳಿದ ವರ್ಗ, ದಲಿತ ಹಾಗೂ ಶೋಷಿತ ಸಮುದಾಯಗಳ ಸ್ವಾಮೀಜಿಗಳ ಒಕ್ಕೂಟ ಕೂಡಾ ಅವರಿಗೆ ನೈತಿಕ ಬೆಂಬಲ ನೀಡಿದೆ. ಸಿದ್ದರಾಮಯ್ಯ ಅವರನ್ನು 'ಕಾವೇರಿ' ನಿವಾಸದಲ್ಲಿ ಭಾನುವಾರ ಭೇಟಿ ಮಾಡಿದ 10 ಸ್ವಾಮೀಜಿಗಳನ್ನು ಒಳಗೊಂಡ ನಿಯೋಗ, ಸಿದ್ದರಾಮಯ್ಯ ಅವರಿಗೆ ಆತ್ಮಸ್ಥೈರ್ಯ ತುಂಬಿತು. ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಖಾಸಗಿ ದೂರು ಆಧರಿಸಿ ವಿಚಾರಣೆಗೆ ಅನುಮತಿ ನೀಡಿದ ರಾಜ್ಯಪಾಲರ ಕ್ರಮವನ್ನು ನಿಯೋಗದಲ್ಲಿದ್ದ ಸ್ವಾಮೀಜಿಗಳು ಖಂಡಿಸಿದರು.


ಪ್ರಜಾಸತ್ತಾತ್ಮಕ ರೀತಿಯಲ್ಲಿ ಜನರಿಂದ ಚುನಾಯಿತವಾದ ಸರ್ಕಾರವನ್ನು ಅಸ್ಥಿರಗೊಳಿಸುವ ಕೆಲಸವನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಮಾಡುತ್ತಿವೆ. ಕೇಂದ್ರ ಸರ್ಕಾರ ಹಾಗೂ ರಾಜಭವನ ಷಡ್ಯಂತ್ರ ನಡೆಸಿವೆ. ಸರ್ಕಾರ ಪತನಗೊಳಿಸುವ, ಸಿದ್ದರಾಮಯ್ಯ ಅವರನ್ನು ಕೆಳಗಿಳಿಸುವ ಪ್ರಯತ್ನ ಮುಂದುವರಿಸಿದರೆ ಹೋರಾಟ ನಡೆಸಲಾಗುತ್ತದೆ ಎಂದು ಎಚ್ಚರಿಸಿದರು.

ಮಾದರ ಚನ್ನಯ ಗುರುಪೀಠದ ಬಸವಮೂರ್ತಿ ಮಾದರ ಚನ್ನಯ್ಯ ಸ್ವಾಮೀಜಿ, ಕಾಗಿನೆಲೆ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಈಶ್ವರಾನಂದಪುರಿ ಮಹಾಸ್ವಾಮೀಜಿ, ಕನಕ ಗುರುಪೀಠ ಕುಂಚಿಟಿಗ ಮಹಾ ಸಂಸ್ಥಾನ ಮಠದ ಶಾಂತವೀರ ಸ್ವಾಮೀಜಿ, ■ 2ನೇ ಪುಟಕ್ಕೆ

ಸಿದ್ದರಾಮಯ್ಯ ಸರ್ಕಾರ ಕೆಡವಲು ಬಿಜೆಪಿಯಿಂದ ಕಾಂಗ್ರೆಸ್ ಶಾಸಕರಿಗೆ 100 ಕೋಟಿ ಆಫರ್

- ಹೆಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಪ್ರಹ್ಲಾದ್ ಜೋಷಿ, ಬಿ.ಎಲ್.ಸಂತೋಷ್ ಸಂಚು
- ಮಂಡ್ಯ ಶಾಸಕ ಗಣಿಗ ರವಿಕುಮಾರ್ ಆರೋಪ

ಮಂಡ್ಯ, ಆ.25– ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೆಡವಲು ಬಿಜೆಪಿ ಸಂಚು ರೂಪಿಸಿದ್ದು, ಕಾಂಗ್ರೆಸ್ ಶಾಸಕರಿಗೆ 100 ಕೋಟಿ ರೂ. ಆಫರ್ ನೀಡಲಾಗುತ್ತಿದೆ ಎಂದು ಮಂಡ್ಯ ಶಾಸಕ ಗಣಿಗ ರವಿಕುಮಾರ್ ಆರೋಪಿಸಿದರು.



ಮಂಡ್ಯದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ರಾಷ್ಟ್ರೀಯ ನಾಯಕ ಬಿ.ಎಲ್. ಸಂತೋಷ್, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಪ್ರಹ್ಲಾದ್ ಜೋಷಿ, ಹೆಚ್.ಡಿ.ಕುಮಾರಸ್ವಾಮಿ ಅವರು ಕರ್ನಾಟಕ ಸರ್ಕಾರವನ್ನು ಕೆಡವಿ ಬಿಜೆಪಿಯನ್ನು ಅಧಿಕಾರಕ್ಕೆ ತರುವುದಾಗಿ ಪ್ರಧಾನಿ ಮೋದಿ ಅವರಿಗೆ ಮಾತು ಕೊಟ್ಟಿದ್ದಾರೆ. ಆದರೆ ಅವರ ಪ್ರಯತ್ನ ವಿಫಲವಾಗಲಿದೆ ಎಂದರು.

ನನಗೂ ಕೂಡ ಮಧ್ಯವರ್ತಿಯೋರ್ವ ಕರೆ ಮಾಡಿ 100 ಕೋಟಿಗೆ ಆಫರ್ ಮಾಡಿದ್ದರು ಎಂದ ಅವರು, ನಮ್ಮ ಶಾಸಕರಿಗೆ ಹಣದ ಆಮಿಷ ಒಡ್ಡುತ್ತಿರುವ ಮಧ್ಯವರ್ತಿಗಳ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದೇವೆ. ಆಡಿಯೋ ಹಾಗೂ ವಿಡಿಯೋ ರೆಕಾರ್ಡ್ ಮಾಡಿಕೊಂಡು, ಅವರು ನೀಡುವ ಹಣದೊಂದಿಗೆ ಮಾಧ್ಯಮಗಳಿಗೆ ಮಾಹಿತಿ ನೀಡುತ್ತೇವೆ. ಜೊತೆಗೆ ಜಾರಿ ನಿರ್ದೇಶನಾಲಯ (ಇಡಿ)ಕ್ಕೆ ದೂರು ಸಲ್ಲಿಸುತ್ತೇವೆ ಎಂದು ಅವರು ಹೇಳಿದರು. ■ 8ನೇ ಪುಟಕ್ಕೆ

ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 109ನೇ ಜಯಂತ್ಯುತ್ಸವ

ಜನಸಾಮಾನ್ಯರ ರಾಜ್ಯಪಾಲನಾಗಿ ರಾಜಭವನದ ಪಾವಿತ್ರ್ಯತೆ ಕಾಪಾಡುವೆ

ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಭರವಸೆ

- ರಾಜಭವನದಲ್ಲಿ ಮಾಂಸಾಹಾರ, ಮದ್ಯ ನಿಷಿದ್ಧ
- ಮೈಸೂರು–ಮೇಘಾಲಯದ ನಡುವೆ ಸೇತುವೆಯಾಗಬೇಕು
- ಸೋತಾಗ ಶ್ರೀಗಳು ಧೈರ್ಯ ತುಂಬಿದರು

ಮೈಸೂರು, ಆ.25(ಬಿಎಲ್‌ಯು)– ಜನಸಾಮಾನ್ಯರ ರಾಜ್ಯಪಾಲನಾಗಿ ರಾಜಭವನದ ಪಾವಿತ್ರ್ಯತೆ ಕಾಪಾಡುತ್ತೇನೆ ಎಂದು ಮೈಸೂರಿನವರೇ ಆದ ಮೇಘಾಲಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಭರವಸೆ ನೀಡಿದರು.

ಮೈಸೂರಿನ ಚಾಮುಂಡಿಬೆಟ್ಟದ ಪಾದದ ಬಳಿಯ ಸುತ್ತೂರು ಶಾಖಾ ಮಠದಲ್ಲಿ ಇಂದು ನಡೆದ ಸುತ್ತೂರು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 109 ನೇ ಜಯಂತಿ ಮಹೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೇಘಾಲಯ ರಾಜ್ಯದ ಜನರ ಸಮಸ್ಯೆ ಪರಿಹಾರ ಮಾಡುವ ನಿಟ್ಟಿನಲ್ಲಿ ಶಕ್ತಿ ಮೀರಿ ಪ್ರಯತ್ನಿಸುವೆ ಎಂದು ಅಭಯ ನೀಡಿದರು.

ರಾಜ್ಯಪಾಲರಾಗಿ ಅಧಿಕಾರ ಸ್ವೀಕಾರ ಮಾಡಿದ ನಂತರ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಅವರು ಕೆಲವು ಸಲಹೆಗಳನ್ನು ನೀಡಿದರು. ಮೇಘಾಲಯದಲ್ಲಿ ಆದಿವಾಸಿಗಳೇ ಹೆಚ್ಚಾಗಿದ್ದು, ನೀವು ರಾಜಭವನ ಬಿಟ್ಟು ಹೊರಗೆ ಬಂದು ಗ್ರಾಮಗಳಿಗೆ ಭೇಟಿ ನೀಡಬೇಕು, ಈ ಮೂಲಕ ಅವರ ಸಮಸ್ಯೆ ಪರಿಹಾರ ಮಾಡಬೇಕು ಎಂದು ಕಿವಿಮಾತು ಹೇಳಿದರು. ನರೇಂದ್ರ ಮೋದಿ ಅವರ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿದ್ದೇನೆ. ನಾನು ಜನಸಾಮಾನ್ಯರ ರಾಜ್ಯಪಾಲನಾಗಿ ಜನರ ಸಮಸ್ಯೆ ಪರಿಹಾರ ಮಾಡುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು.


ನಾನು ರಾಜ್ಯಪಾಲನಾಗಿ ಅಧಿಕಾರ ಸ್ವೀಕಾರ ಮಾಡಿದ ನಂತನ ರಾಜಭವನದ ಉನ್ನತ ಮಟ್ಟದ ಅಧಿಕಾರಿಗಳ ಸಭೆ ನಡೆಸಿದೆ. ರಾಜಭವನ ಮಾಂಸಾಹಾರ ಹಾಗೂ ಮದ್ಯದಿಂದ ಮುಕ್ತವಾಗಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದೆ ಎಂದರು.

ರಾಜಭವನ ಮಂದಿರವಿದ್ದಂತೆ. ದೇವಸ್ಥಾನದ ಪಾವಿತ್ರ್ಯತೆ ಇರುವ ಆ ಸ್ಥಳಕ್ಕೆ ಯಾವುದೇ ಸಂದರ್ಭದಲ್ಲಿ ಧಕ್ಕೆ ತರಬಾರದು. ಈ ನಿಟ್ಟಿನಲ್ಲಿ ರಾಜಭವನದ ಪಾವಿತ್ರ್ಯತೆ ಕಾಪಾಡುವ ನಿಟ್ಟಿನಲ್ಲಿ ಮೊದಲ ತೀರ್ಮಾನ ಕೈಗೊಂಡೆ ಎಂದು ವಿಜಯಶಂಕರ್ ವಿವರಿಸಿದರು. ಎತ್ತಿಂದೆತ್ತ ಸಂಬಂಧ ಎಂಬಂತೆ ಮೈಸೂರಿನವನಾದ ನನ್ನನ್ನು ದೂರದ ಮೇಘಾಲಯದ ರಾಜ್ಯಪಾಲರಾಗಿ ನೇಮಕ ಮಾಡಲಾಗಿದೆ. ಎಂದೂ ಕೂಡ ನನ್ನ ಹುದ್ದೆಗೆ ಚ್ಯುತಿ ಬರದಂತೆ ಕೆಲಸ ನಿರ್ವಹಿಸುತ್ತೇನೆ ಎಂದು ಹೇಳಿದರು.

ಹುಣಸೂರಿನ ಶಾಸಕರಾಗಿ ಕೆಲಸ ಮಾಡಿದ್ದೀರಾ, ಮೈಸೂರು ಸಂಸದರಾಗಿ ಕೆಲಸ ನಿರ್ವಹಿಸಿದ್ದೀರಾ, ರಾಜ್ಯದ ಸಚಿವರಾಗಿ ಅಧಿಕಾರ ನಡೆಸಿದ್ದೀರಾ. ಈಗ ರಾಜ್ಯಪಾಲರ ಉನ್ನತ ಹುದ್ದೆ ದೊರಕಿದೆ. ಆದರೆ ಅಧಿಕಾರ ಪೂರ್ಣಗೊಳಿಸಿ ಬರುವಾಗ ಬರುವಾಗ ಒಳ್ಳೆಯ ಹೆಸರು ತೆಗೆದುಕೊಂಡು ಬನ್ನಿ ಎಂದು ನನ್ನ ಪತ್ನಿ ಸಲಹೆ ನೀಡಿದ್ದಾರೆ. ಅದರಂತೆ ನಾನು ನನ್ನ ಹುದ್ದೆಗೆ ಕಪ್ಪುಚುಕ್ಕೆ ತರದೆ ಕರ್ತವ್ಯ ನಿರ್ವಹಿಸುತ್ತೇನೆ ಎಂದು ಆಶ್ವಾಸನೆ ನೀಡಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ನನಗೆ ತಾಯಿ ಹಾಗೂ ಗುರುವಿನ ಪ್ರೀತಿ ತೋರಿದರು. ನಾನು ಚುನಾವಣೆಯಲ್ಲಿ ಸೋತ ಸಂದರ್ಭದಲ್ಲಿ ನನಗೆ ನೈತಿಕ ಬಲ ತುಂಬಿದರು. ■ 2ನೇ ಪುಟಕ್ಕೆ

ರಾಜಕೀಯ ಜೀವನ ಮುಗಿದೋಯ್ತು ಎನ್ನುವಾಗ ಅರಸಿ ಬಂದ ಹುದ್ದೆ

ರಾಜಕೀಯ ಜೀವನ ಮುಗಿದೇ ಹೋಯಿತು ಎನ್ನುವಾಗ ಸಿ.ಹೆಚ್.ವಿಜಯಶಂಕರ್ ಅವರಿಗೆ ರಾಜ್ಯಪಾಲ ಹುದ್ದೆ ಅರಸಿ ಬಂದಿದೆ ಎಂದು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಹೇಳಿದರು. ಸಂಸದರಾಗಿದ್ದ ವಿಜಯಶಂಕರ್ ಅವರ ರಾಜಕೀಯ ಜೀವನ ಮುಗಿದೇ ಹೋಯಿತು ಎನ್ನುತ್ತಿದ್ದರು. ಆದರೆ ಗುರು, ಹಿರಿಯರ ಕೃಪೆ ಇದ್ದರೆ ಅವಕಾಶ ಸಿಗುತ್ತದೆ ಎಂಬುದಕ್ಕೆ ವಿಜಯಶಂಕರ್ ಸ್ಪಷ್ಟ ಉದಾಹರಣೆ ಎಂದರು. ವಿಜಯಶಂಕರ್ ಅವರಿಗೆ ಈಗ ರಾಜ್ಯಪಾಲ ಹುದ್ದೆ ಅರಸಿ ಬಂದಿದೆ. ಅವರು ಮೇಘಾಲಯದ ರಾಜ್ಯಪಾಲರಾಗಿ ಉತ್ತಮವಾಗಿ ಕೆಲಸ ಮಾಡುತ್ತಾರೆ ಎಂಬ ವಿಶ್ವಾಸವಿದೆ ಎಂದು ಶ್ರೀಗಳು ಹೇಳಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಸಮಾರಂಭದಲ್ಲಿ ಶಾಸಕರಾದ ತನ್ವೀರ್ ಸೇಠ್ ಹಾಗೂ ಕೆ.ಹರೀಶ್ ಗೌಡ ಉಪಸ್ಥಿತರಿದ್ದರು.


ಮೈಸೂರಿನ ಚಾಮುಂಡಿಬೆಟ್ಟದ ಪಾದದ ಬಳಿಯ ಸುತ್ತೂರು ಶಾಖಾ ಮಠದಲ್ಲಿ ಭಾನುವಾರ ನಡೆದ ಸುತ್ತೂರು ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 109 ನೇ ಜಯಂತಿ ಮಹೋತ್ಸವದಲ್ಲಿ ಮೇಘಾಲಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ನಮಿಸಿದರು. (ಎಡದಿಂದ) ಗೋವಾ ರಾಜ್ಯಪಾಲ ಪಿ.ಎಸ್.ಶ್ರೀಧರ್ ಪಿಳ್ಳೈ, ಸತ್ಯ ಸಾಯಿ ಗ್ರಾಮದ ಆಧ್ಯಾತ್ಮಿಕ ಹಾಗೂ ಸಾಮಾಜಿಕ ನೇತಾರ ಮಧುಸೂದನ ಸಾಯಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ತುಮಕೂರಿನ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ದಿನೇಶ್ ಕೋಚಿಂಗ್ ಸೆಂಟರ್‌ನಿಂದ ಮಕ್ಕಳಿಗೆ ಕನ್ನಡ ಚರ್ಚಾ ಸ್ಪರ್ಧೆ



ಮೈಸೂರಿನ ದಿನೇಶ್ ಕೋಚಿಂಗ್ ಸೆಂಟರ್‌ನಿಂದ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ ಕಾರ್ಯಕ್ರಮವನ್ನು ಹಿರಿಯ ಪತ್ರಿಕಾ ಛಾಯಾಗ್ರಾಹಕ ಪ್ರಗತಿ ಗೋಪಾಲಕೃಷ್ಣ ಉದ್ಘಾಟಿಸಿದರು.

ಮೈಸೂರು: ದಿನೇಶ್ ಕೋಚಿಂಗ್ ಸೆಂಟರ್‌ನಿಂದ ನಗರದ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ 'ಸಾಮಾಜಿಕ ಜಾಲತಾಣಗಳು ವಾಸ್ತವದಲ್ಲಿ ಜನರನ್ನು ಸಮಾಜದಿಂದ ದೂರ ಮಾಡುತ್ತಿವೆ' ಎಂಬ ವಿಷಯ ಕುರಿತ ಜಿಲ್ಲಾ ಮಟ್ಟದ ಅಂತರ್ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ ಆಯೋಜಿಸಲಾಗಿತ್ತು.


ಕಾರ್ಯಕ್ರಮವನ್ನು ಉದ್ಘಾಟಿಸಿದ ಹಿರಿಯ ಪತ್ರಿಕಾ ಛಾಯಾಗ್ರಾಹಕ ಪ್ರಗತಿ ಗೋಪಾಲಕೃಷ್ಣ ಮಾತನಾಡಿ, ಜ್ಞಾನ ವಿದ್ಯೆಯನ್ನು ಯಾರಿಂದಲೂ ಕಸಿಯಲು ಸಾಧ್ಯವಿಲ್ಲ. ಮುಂದೆ ತಮ್ಮ ಜೀವನ ಅತ್ಯುತ್ತಮಗೊಳಿಸಿಕೊಳ್ಳಲು ಇಂತಹ ಚರ್ಚಾ ಸ್ಪರ್ಧೆಗಳು ಪೂರಕವಾಗಿವೆ ಎಂದರು.

ಇಂತಹ ಪರಂಪರೆಯನ್ನು ಮಕ್ಕಳಲ್ಲಿ ಬೆಳೆಸಬೇಕು. ಕುಟುಂಬಗಳಲ್ಲಿ ಯಾವ ರೀತಿಯ ಚರ್ಚೆ ಆಗಬೇಕು. ಶಿಸ್ತಿನಲ್ಲಿ ಹೇಗೆ ಬದುಕು ರೂಪಿಸಿಕೊಳ್ಳಬೇಕೆಂದು ಇಲ್ಲಿ ಕಲಿಯಬಹುದಾಗಿದೆ. ಸೀಮಿತ ಅವಧಿಯಲ್ಲಿ ನಿಮ್ಮ ಸಂಪೂರ್ಣ ವಿಷಯ ಮಂಡನೆ ಮಾಡಬೇಕಿದೆ. ಪರ ಹಾಗೂ ವಿರೋಧ ಆರೋಗ್ಯಕರ ಚರ್ಚೆಗಳು ನಡೆಯಬೇಕಿದೆ. ಸೈದ್ಧಾಂತಿಕ ಹಾಗೂ ವಾಸ್ತವಿಕ ನೆಲೆಗಟ್ಟಿನಲ್ಲಿ ನಿಮ್ಮ ಚರ್ಚೆಗಳು ಆಗಬೇಕಿದೆ ಎಂದು ತಿಳಿಸಿದರು.

ದಿನೇಶ್ ಕೋಚಿಂಗ್ ಸೆಂಟರ್‌ನ ಮುಖ್ಯಸ್ಥ ದಿನೇಶ್ ವೆಂಕಟರಮಣ ಭಟ್, ವೆಂಕಟಾಚಲ, ವಿಶ್ವನಾಥ್, ಚರ್ಚಾ ಸ್ಪರ್ಧೆ ವಿಶೇಷ ಸೂಚಕರು ಇನ್ನಿತರರಿದ್ದರು.

ಜಿಂದಾಲ್‌ಗೆ 3,667 ಎಕರೆ ಭೂಮಿ ಮಾರಾಟ ನಿರ್ಧಾರ ಖಂಡಿಸಿ

ಮೈಸೂರಲ್ಲಿ ವಾಟಾಳ್ ನಾಗರಾಜ್ ಪ್ರತಿಭಟನೆ



ಮೈಸೂರಿನ ಹಾರ್ಡಿಂಜ್ ಸರ್ಕಲ್ ಬಳಿ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಭಾನುವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಆ.25(ಜಿಎ)–ರಾಜ್ಯ ಸರ್ಕಾರ ಜಿಂದಾಲ್ ಕಂಪನಿಗೆ 3,667 ಎಕರೆ ಭೂಮಿ ಮಾರಾಟ ಮಾಡಲು ನಿರ್ಧರಿಸಿರುವುದನ್ನು ಖಂಡಿಸಿ, ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಮೈಸೂರಿನ ಹಾರ್ಡಿಂಜ್ ಸರ್ಕಲ್ ಬಳಿ ಭಾನುವಾರ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಜಿಂದಾಲ್ ವಿಚಾರವಾಗಿ 2006 ರಿಂದಲೂ ಪರ–ವಿರೋಧ ಚರ್ಚೆ ನಡೆಯುತ್ತಲೇ ಇದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಜಿಂದಾಲ್‌ಗೆ ಭೂಮಿ ಕೊಡಲು ತೀರ್ಮಾನಿಸಿದಾಗ ಅಂದೇ ಭಾರಿ ಹೋರಾಟ ಮಾಡಿದ್ದೆ. ಆಗ ಯಡಿಯೂರಪ್ಪನವರ ಸರ್ಕಾರ ಈ ಪ್ರಸ್ತಾವನೆಯನ್ನು ಹಿಂಪಡೆದಿತ್ತು. ಆಗ ಕಾಂಗ್ರೆಸ್‌ನವರು ಜಿಂದಾಲ್‌ಗೆ ಭೂಮಿ ಕೊಡಬೇಡಿ ಎಂದು ಹೋರಾಟ ಮಾಡಿದ್ದರು. ಈಗ ಮತ್ತೆ ಕಾಂಗ್ರೆಸ್ ಸರ್ಕಾರ ಜಿಂದಾಲ್‌ಗೆ 3,677 ಎಕರೆ ಜಮೀನು ಮಾರಾಟ ಮಾಡಲು ಮುಂದಾಗಿದೆ. ಒಂದು ಎಕರೆಗೆ 30ರಿಂದ 40 ಲಕ್ಷ ರೂಪಾಯಿ ಬೆಲೆಬಾಳುವ ಜಾಗವನ್ನು ಒಂದು ಲಕ್ಷ ರೂಪಾಯಿಗೆ ಮಾರಾಟ ಮಾಡಲಾಗುತ್ತಿದೆ. ಈಗಾಗಲೇ 6,000 ಎಕರೆಗೂ ಮೇಲ್ಪಟ್ಟ ಜಮೀನನ್ನು ಜಿಂದಾಲ್‌ಗೆ ಕೊಡಲಾಗಿದೆ. ಇದರಿಂದ ಎಂದೂ ಕಂಡರಿಯದಂತಹ ಭಾರಿ ಗಣಿ ಸಂಪತ್ತಿನ ನಷ್ಟವನ್ನು ರಾಜ್ಯ ಅನುಭವಿಸಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಜಿಂದಾಲ್ ಕಂಪನಿಗೆ ಭೂಮಿ ಮಾರಾಟ ಮಾಡುವುದನ್ನು ರೈತರು, ಬುದ್ಧಿ ಜೀವಿಗಳು, ವಿರೋಧ ಪಕ್ಷದವರು ವಿರೋಧ ಮಾಡಬೇಕು. ಬೆಂಗಳೂರಿನಲ್ಲಿ ಜಿಂದಾಲ್ ಕಂಪನಿ ಪ್ರೆಸ್ಟೀಜ್ ಕಂಪನಿಯ ಜೊತೆಗೂಡಿ ಲಕ್ಷಾಂತರ ರೂಪಾಯಿಗೆ ಭೂಮಿ ಮಾರಾಟ ಮಾಡುತ್ತಿದೆ. ಸಿದ್ದರಾಮಯ್ಯನವರೇ ನಿಮ್ಮ ಸಚಿವ ಸಂಪುಟದ ನಿಯಂತ್ರಣ ತಪ್ಪಿದೆ ಹುಷಾರಾಗಿರಿ, ಕೆಲವು ಮಂತ್ರಿಗಳು ವಿಧಾನಸೌಧವನ್ನೇ ಮಾರಲು ಹೊರಟಿದ್ದಾರೆ ಎಂದು ಸಚಿವರ ವಿರುದ್ಧ ಕಿಡಿಕಾರಿದರು.

ದಸರಾ ಬರುತ್ತಿದೆ. ಆನೆಗಳು ಮೈಸೂರಿಗೆ ಬಂದಿವೆ. ಚಾಮುಂಡಿ ಬೆಟ್ಟ ಪುರಾತನ ಐತಿಹಾಸಿಕ ಸ್ಥಳವಾಗಿದ್ದು, ನಂದಿ ಬೆಟ್ಟಕ್ಕೆ ಸೇರುವ ಎಲ್ಲಾ ರಸ್ತೆಗಳು ದುರಸ್ತಿ ಮಾಡಿ ದೇಶ ವಿದೇಶಗಳಿಂದ ಬರುವ ಜನರಿಗೆ ಅನುಕೂಲ ಮಾಡಿಕೊಡಬೇಕು. ನಂದಿ ರಸ್ತೆ ಕಾಮಗಾರಿ ಎರಡು ವರ್ಷಗಳಿಂದಲೂ ಮಾಡುತ್ತಲೇ ಇದ್ದಾರೆ. ಒಂದು ವಾರದ ಒಳಗಾಗಿ ದುರಸ್ತಿ ಮಾಡದಿದ್ದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಚ್ಚರಿಸಿದರು.


ಚಾಮುಂಡಿ ಬೆಟ್ಟದ ಪ್ರಾಧಿಕಾರ ರಚನೆ ಬೇಡ ಎನ್ನುವುದು ಅಷ್ಟು ಸಮಂಜಸ ಅಲ್ಲ. ಅರಮನೆ, ಚಾಮುಂಡಿಬೆಟ್ಟ ಸಾರ್ವಜನಿಕರ ಆಸ್ತಿ. ಅದು ಖಾಸಗಿ ಆಸ್ತಿ ಅಲ್ಲ. ಅಭಿವೃದ್ಧಿಗಾಗಿ ಪ್ರಾಧಿಕಾರದ ಅವಶ್ಯಕತೆ ಇದೆ. ರಾಜಮಾತೆ ಆಕ್ಷೇಪ ಎತ್ತಿರುವುದು ಸರಿಯಲ್ಲ. ಸಂಸ್ಕೃತಿ, ಇತಿಹಾಸ ಆಚರಣೆಗೆ ಧಕ್ಕೆಯಾಗದ ರೀತಿಯಲ್ಲಿ ಪ್ರಾಧಿಕಾರ ಮಾಡಲಿ ಎಂದು ಹೇಳಿದರು.

ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಕಾಗಿದ್ದಾರೆ. ರಾಜ್ಯಪಾಲರ ಧೋರಣೆ ಅನ್ಯಾಯ. ಮುಂದಿನ ದಿನಗಳಲ್ಲಿ ರಾಜ್ಯಪಾಲರ ತೀರ್ಮಾನವನ್ನು ತೀವ್ರವಾಗಿ ವಿರೋಧಿಸುತ್ತೇವೆ. ಸಿದ್ದರಾಮಯ್ಯ ಕಾನೂನು ಹೋರಾಟ ಮಾಡಬೇಕು ಎಂದು ವಾಟಾಳ್ ನಾಗರಾಜ್ ಸಲಹೆ ನೀಡಿದರು.

ಜೇನುಕುರುಬ ಜನಾಂಗಕ್ಕೆ ಅರಿವು ಕಾರ್ಯಕ್ರಮ

ಮೈಸೂರು: ಪ್ರಧಾನ ಮಂತ್ರಿ ಜನ್ ಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ ಯೋಜನೆಯಡಿ ಮೈಸೂರು ಜಿಲ್ಲೆಯಲ್ಲಿ ಮೂಲನಿವಾಸಿಗಳಾದ ಜೇನು ಕುರುಬ ಜನಾಂಗದವರಿಗೆ ಸೆ.10ರವರೆಗೆ ಆಧಾರ್ ನೋಂದಣಿ, ಜನ್ ಆನ್ ಬ್ಯಾಂಕ್ ಖಾತೆ, ಆಯುಷ್ಮಾನ್ ಭಾರತ ಆರೋಗ್ಯ ಕಾರ್ಡ್, ಜಾತಿ ಪ್ರಮಾಣ ಪತ್ರ, ಸಿಕಲ್ ಸೆಲ್ ಅನಿಮೀಯ ಸ್ಕ್ರೀನಿಂಗ್, ಪಡಿತರ ಚೀಟಿ, ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. PM JANMAN ಕಾರ್ಯಕ್ರಮದ ನೋಡೆಲ್ ಅಧಿಕಾರಿಗಳಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲೂಕು ಮಟ್ಟದಲ್ಲಿ ತಾಲೂಕು ಮಟ್ಟದ ನೋಡೆಲ್ ಅಧಿಕಾರಿಗಳನ್ನು ನೇಮಕ ಮಾಡಿದ್ದು, ಸದರಿ ಅಧಿಕಾರಿಗಳು, ಕಾರ್ಯಕ್ರಮದ ನೋಡೆಲ್ ಅಧಿಕಾರಿಗಳಾಗಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಪಡುವಾರ ಹಳ್ಳಿಯಲ್ಲಿರುವ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿಗಳ ದೂ.ಸಂ: 9880 541164 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇಘಾಲಯ ರಾಜ್ಯಪಾಲರ ಅಭಿನಂದಿಸಿದ ಜಿಟಿಡಿ



ಮೇಘಾಲಯದ ರಾಜ್ಯಪಾಲರಾದ ಸಿ.ಹೆಚ್.ವಿಜಯಶಂಕರ್ ಅವರನ್ನು ಶಾಸಕ ಜಿ.ಟಿ. ದೇವೇಗೌಡರು ಭೇಟಿಯಾಗಿ ಅಭಿನಂದಿಸಿದರು. ಈ ವೇಳೆ ತಾಪಂ ಮಾಜಿ ಉಪಾಧ್ಯಕ್ಷ ಎನ್.ಬಿ.ಮಂಜು, ವಿಜಯನಗರ ಮಂಜು, ಕಾಮಗೆರೆ ರವಿ ಮತ್ತಿತರರು ಉಪಸ್ಥಿತರಿದ್ದರು.

ಮೃತ್ಯುಪ್ರಜ್ಞೆಯಿಂದ ಬದುಕಬೇಕು: ವಸಂತಕುಮಾರ್

ಮೈಸೂರು,ಆ.25– ನಿತ್ಯಜೀವನದಲ್ಲಿ ಮೃತ್ಯುಪ್ರಜ್ಞೆಯನ್ನು ಇಟ್ಟುಕೊಂಡು ಬದುಕು ಸಾಗಿಸಬೇಕು ಎಂದು ಮಹಾರಾಣಿ ಕಲಾ ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ.ವಸಂತ ಕುಮಾರ್, ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಶ್ರಾವಣ ಮಾಸದ ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕುರಿತು ಪ್ರವಚನ ನೀಡುತ್ತಾ ತಿಳಿಸಿದರು.


ಶಿವತತ್ತ್ವ ಚಿಂತಾಮಣಿಯ ಕಾಲ ದಹನ ಲೀಲೆಯಲ್ಲಿ ಶ್ವೇತ ಮಹಾರಾಜನಿಗೆ ಯಮನು ನಾನೇ ಕರ್ತೃ ಮತ್ತು ನಾನೇ ಭರ್ತೃ.ಈ ಲೋಕದ ಹುಟ್ಟಿಗೆ ಮತ್ತು ಸಾವಿಗೆ ನಾನೇ ಕಾರಣ. ಆ ಶಿವ ನಿನ್ನನ್ನು ಹೇಗೆ ಕಾಪಾಡುತ್ತಾನೊ ಕಾಪಾಡಲಿ ಎಂದು ಹೇಳುತ್ತಾನೆ. ಶ್ವೇತ ಮಹಾರಾಜ ಇದರಿಂದ ವಿಚಲಿತನಾಗದೆ ನನ್ನ ಹುಟ್ಟು ಮತ್ತು ಸಾವು ಶಿವನ ಕೈಯ್ಯಲ್ಲಿದೆ. ಅಂತಹ ಸಂದರ್ಭದಲ್ಲಿಯೂ ಆತ ಸಾವಿನ ಬಗ್ಗೆ ಯೋಚಿಸದೇ ಶಿವನನ್ನು ಸ್ತುತಿಸುತ್ತಾನೆ.



ಯಮ ಶ್ವೇತ ಮಹಾರಾಜನ ಪ್ರಾಣವನ್ನು ತೆಗೆಯಲು ಮುಂದಾಗುತ್ತಿದ್ದಂತೆ ಶಿವ ರುದ್ರಭಯಂಕರನಾಗಿ ತನ್ನ ಭಕ್ತನ ರಕ್ಷಣೆಗಾಗಿ ಧಾವಿಸಿ ಬರುತ್ತಾನೆ. ಯಮನನ್ನು ಸುಟ್ಟುಹಾಕುತ್ತಾನೆ. ಸಾವನ್ನು ದಹನ ಮಾಡುತ್ತಾನೆ. ಮುಂದೆ ಯಮನ ಸಾವಿನ ನಂತರ ಭೂಮಿಯಲ್ಲಿ ಜನ ಹುಟ್ಟುತ್ತಿದ್ದಾರೆ, ಸಾಯುತ್ತಿಲ್ಲ. ಜನಸಂಖ್ಯೆ ಹೆಚ್ಚುತ್ತಿದೆ, ಭೂಮಿ ಭಾರವಾಗುತ್ತಿದೆ.ಈ ವಿಷಯವನ್ನು ದೇವತೆಗಳು ಯಮನನ್ನು ಬದುಕಿಸಿ ಕೊಡು ಎಂದು ಶಿವನಲ್ಲಿ ತೋಡಿಕೊಳ್ಳುತ್ತಾರೆ. ಆಗ ಶಿವನು ನನ್ನ ಭಕ್ತರು ನನಗಿಂತಲೂ ಏಳು ಪಟ್ಟು ಶ್ರೇಷ್ಠರು. ಅವರನ್ನು ನಿಂದಿಸಿದರೆ ನರಕಕ್ಕೆ ಬೀಳುತ್ತಾರೆ. ನನ್ನದು ಅವರದು ಹಸು–ಕರುವಿನ ಸಂಬಂಧ. ನನಗೆ ನನ್ನ ಭಕ್ತರಿಗಿಂತ ಕೈಲಾಸ ದೊಡ್ಡದಲ್ಲ ಎನ್ನುತ್ತಾನೆ. ಪಾಪಿಗಳನ್ನು ಉದ್ಧರಿಸುವುದಕ್ಕಾಗಿ ಯಮನಿಗೆ ಜೀವ ನೀಡು. ಇಲ್ಲದಿದ್ದರೆ ಭೂಮಿಯ ಮೇಲಿನ ಪ್ರಾಣಿಗಳಿಗೆ ಭಯವಿರುವುದಿಲ್ಲ, ಮುಪ್ಪಿರುವುದಿಲ್ಲ, ಸಾವಿರುವುದಿಲ್ಲ ಎಂದು ದೇವತೆಗಳು ಬೇಡಿಕೊಳ್ಳುತ್ತಾರೆ ಎಂದು ಹೇಳಿದರು.

ವಿದುಷಿ ವಸಂತ ವೆಂಕಟೇಶ್ ವಾಚನ ಮಾಡಿದರು. ಸಾಮೂಹಿಕ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಭಕ್ತಾದಿಗಳು ಹಾಗೂ ಆಧ್ಯಾತ್ಮಿಕ ಜಿಜ್ಞಾಸುಗಳು ಪಾಲ್ಗೊಂಡಿದ್ದರು.

ಮೇಘಾಲಯ ರಾಜ್ಯಪಾಲ ಸಿ.ಎಚ್.ವಿಜಯಶಂಕರ್‌ಗೆ ಅಭಿನಂದನೆ



ಮೇಘಾಲಯದ ರಾಜ್ಯಪಾಲರಾಗಿ ನೇಮಕಗೊಂಡಿರುವ ಸಿ.ಎಚ್.ವಿಜಯಶಂಕರ್ ಅವರನ್ನು ಅವರ ನಿವಾಸದಲ್ಲಿ ಸನ್ಮಾನಿಸಲಾಯಿತು. ಈ ವೇಳೆ ಮೈಸೂರು 44ನೇ ವಾರ್ಡ್ ಜೆಡಿಎಸ್ ಮುಖಂಡ ಸುರೇಶ್, ಆರೋಗ್ಯ ಅಧಿಕಾರಿ ನಾಗರಾಜು, ತೋಂಟದಾರ್ಯ, ಜಯಪ್ರಕಾಶ್, ಸುನಿಲ್, ಕುಮಾರ್ ಉಪಸ್ಥಿತರಿದ್ದರು.

ಅಣಕು ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಿದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಬೆಂಗಳೂರು, ಆ.25– ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್, ಎಂಜಿನಿಯರಿಂಗ್ ಸೇರಿದಂತೆ ಎಲ್ಲ ವೃತ್ತಿಪರ ಕೋರ್ಸ್‌ಗಳ ಪ್ರವೇಶದ ಮೊದಲ ಸುತ್ತಿನ ಅಣಕು ಸೀಟು ಹಂಚಿಕೆ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಆ.27ರ ಬೆಳಿಗ್ಗೆ 11ರವರೆಗೆ ಅಭ್ಯರ್ಥಿಗಳು ಕಾಲೇಜು, ಕೋರ್ಸ್‌ಗಳನ್ನು ಬದಲಿಸಿಕೊಳ್ಳಬಹುದು. ನಿಗದಿಯಂತೆ ಮೊದಲ ಸುತ್ತಿನ ನೈಜ ಸೀಟು ಹಂಚಿಕೆ ಫಲಿತಾಂಶವನ್ನು ಸೆ.1ರಂದು ಪ್ರಕಟಿಸಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ವಾಸ್ತುಶಿಲ್ಪಶಾಸ್ತ್ರ, ಯೋಗ ಮತ್ತು ನ್ಯಾಚುರೋಪತಿ, ಕೃಷಿ ವಿಜ್ಞಾನ, ವೆಟರಿನರಿ, ಬಿಎಸ್‌ಸಿ (ನರ್ಸಿಂಗ್), ಬಿ–ಫಾರ್ಮ, ಫಾರ್ಮ್–ಡಿ, ಎಂಜಿನಿಯರಿಂಗ್ ಸೇರಿದಂತೆ ಎಲ್ಲ ಕೋರ್ಸುಗಳ ಸೀಟು ಹಂಚಿಕೆ ಮಾಡಲಾಗಿದೆ. ಆಯ್ಕೆಗಳನ್ನು ದಾಖಲಿಸದೇ ಇರುವ ಅರ್ಹ ಅಭ್ಯರ್ಥಿಗಳು ಆ.27ರ ಬೆಳಿಗ್ಗೆ 11ರೊಳಗೆ ಮೊದಲನೆ ಸುತ್ತಿನ ಸೀಟು ಹಂಚಿಕೆಗೆ ಕಾಲೇಜು ಮತ್ತು ಕೋರ್ಸುಗಳ ಆಯ್ಕೆಗಾಗಿ ಆದ್ಯತಾ ಕ್ರಮದಲ್ಲಿ ದಾಖಲಿಸಬಹುದು. ಮಾಹಿತಿಗೆ http://kea.kar.nic.in ಸಂಪರ್ಕಿಸಬೇಕು ಎಂದು ಮಾಹಿತಿ ನೀಡಿದ್ದಾರೆ.

ಮಾವಿನಹಳ್ಳಿ ಸಿದ್ದೇಗೌಡರಿಗೆ ಮರೀಗೌಡರ ವಿರುದ್ಧ ಮಾತನಾಡುವ ನೈತಿಕತೆ ಇಲ್ಲ

ಕಾಂಗ್ರೆಸ್ ಮುಖಂಡರ ವಾಗ್ದಾಳಿ



ಮುಡಾ ಅಧ್ಯಕ್ಷ ಕೆ.ಮರೀಗೌಡರ ವಿರುದ್ಧ ಮಾವಿನಹಳ್ಳಿ ಸಿದ್ದೇಗೌಡ ಹೇಳಿಕೆ ನೀಡುವುದನ್ನು ಕಾಂಗ್ರೆಸ್ ಮುಖಂಡರು ಸುದ್ದಿಗೋಷ್ಠಿಯಲ್ಲಿ ಖಂಡಿಸಿದರು.

ಮೈಸೂರು, ಆ.25–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಅಧ್ಯಕ್ಷ ಕೆ.ಮರೀಗೌಡರ ವಿರುದ್ಧ ಮಾತನಾಡುತ್ತಿರುವ ಮಾವಿನಹಳ್ಳಿ ಸಿದ್ದೇಗೌಡರಿಗೆ ನೈತಿಕತೆ ಇದೆಯೇ ಎಂದು ಕಾಂಗ್ರೆಸ್ ಮುಖಂಡರು ಪ್ರಶ್ನಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಪಂ ಮಾಜಿ ಸದಸ್ಯ ಅರುಣ್‌ಕುಮಾರ್, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಪಡೆದು ಚುನಾವಣೆಗೆ 3 ದಿನ ಮುಂಚೆ ನಾಪತ್ತೆಯಾಗುವ ಮೂಲಕ ಮಾವಿನಹಳ್ಳಿ ಸಿದ್ದೇಗೌಡ ಪಕ್ಷಕ್ಕೆ ದ್ರೋಹ ಬಗೆದಿದ್ದಾರೆ. ಅಲ್ಲದೆ ಚುನಾವಣೆಯ ಕೊನೆ ಹಂತದವರೆಗೂ ಪ್ರಚಾರ ನಡೆಸಿದ ಮರೀಗೌಡರ ವಿರುದ್ಧವೇ ಆರೋಪ ಮಾಡಿದ್ದರು. ಈಗಲೂ ತಮ್ಮ ಚಾಳಿ ಮುಂದುವರೆಸಿ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಉಂಟು ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ಸೇವಾದಳದ ಮಾಜಿ ಅಧ್ಯಕ್ಷ ಜಯರಾಮೇಗೌಡ ಮಾತನಾಡಿ, ಕಳೆದ 10 ವರ್ಷಗಳಿಂದ ಚಾಮುಂಡೇಶ್ವರಿ ಕ್ಷೇತ್ರದ ಜನರ ಕಷ್ಟಸುಖಗಳಿಗೆ ಮರೀಗೌಡರು ಸ್ಪಂದಿಸುತ್ತಿದ್ದಾರೆ. ಚುನಾವಣೆ ಹೊಸ್ತಿಲಲ್ಲಿ ಜೆಡಿಎಸ್‌ನಿಂದ ಬಂದು, ನಮ್ಮ ಪಕ್ಷಕ್ಕೆ ದ್ರೋಹ ಬಗೆದ ಸಿದ್ದೇಗೌಡರಿಗೆ ಮಾತನಾಡುವ ಯೋಗ್ಯತೆಯಿಲ್ಲ ಎಂದರು.

ಕಾಂಗ್ರೆಸ್ ಮುಖಂಡ ನಾಡನಹಳ್ಳಿ ರವಿ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮರೀಗೌಡರೇ ಅಭ್ಯರ್ಥಿಯಾಗಬೇಕಾಗಿತ್ತು. ಆದರೆ ಎಲ್ಲಿಂದಲೋ ಬಂದ ಸಿದ್ದೇಗೌಡರಿಗೆ ಸಿದ್ದರಾಮಯ್ಯರವರು ಟಿಕೆಟ್ ನೀಡಿದರು. ಆದರೂ ಸಿದ್ದರಾಮಯ್ಯನವರಿಗೇ ದ್ರೋಹ ಮಾಡಿದರು. 83 ಸಾವಿರ ಮತ ನೀಡಿದ ಮತದಾರರಿಗೂ ಮೋಸ ಮಾಡಿದರು ಎಂದು ಆರೋಪಿಸಿದರು.

ಕಾಂಗ್ರೆಸ್ ಮುಖಂಡ ಹೊಸಕಾಮನ ಕೊಪ್ಪಲು ಸ್ವಾಮಿ, ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬಿ. ಫಾರಂ ಅನ್ನು ಮರೀಗೌಡರ ಕೈಗೆ ಕೊಟ್ಟು ಸಿದ್ದೇಗೌಡನನ್ನು ಗೆಲ್ಲಿಸಿಕೊಂಡು ಬರಬೇಕು ಎಂದರು. ಆದರೆ ಈ ಸಿದ್ದೇಗೌಡರು ಚುನಾವಣೆ ಹಿಂದಿನ ದಿನವೇ ನಾಪತ್ತೆಯಾಗಿ ಪಕ್ಷಕ್ಕೆ ಮೋಸ ಮಾಡಿದರು. ಈಗ ಮರೀಗೌಡರ ವಿರುದ್ಧ ಮಾತನಾಡಲಾರಂಭಿಸಿದ್ದಾರೆ. ಇದು ನಿಲ್ಲದಿದ್ದರೆ ಅವರ ಮನೆ ಮುಂದೆ ಪ್ರತಿಭಟನೆ ನಡೆಸಲಿದ್ದೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಬಿ.ರವಿ, ಜಿಪಂ ಮಾಜಿ ಸದಸ್ಯ ಜವರಪ್ಪ, ಧನಗಳ್ಳಿ ಬಸವರಾಜು, ಸ್ವಾಮಿಗೌಡ, ಹಿನಕಲ್ ಉದಯ್ ಮತ್ತಿತರರು ಹಾಜರಿದ್ದರು.

ನಿಧನ

ಶ್ರೀಮತಿ ಬಸಮ್ಮ



ಮೈಸೂರು: ಮೈಸೂರಿನ ಗಾಂಧಿನಗರದ ಶ್ರೀ ದುರ್ಗಾದೇವಿ ದೇವಸ್ಥಾನದ ರಸ್ತೆ ನಿವಾಸಿ ಮತ್ತು ಲೇಟ್ ಮರಿಯಪ್ಪ ಅವರ ಪತ್ನಿ ಶ್ರೀಮತಿ ಬಸಮ್ಮ (62) ಅವರು ಶನಿವಾರ ರಾತ್ರಿ ನಿಧನರಾದರು. ಮೃತರು ಮಕ್ಕಳಾದ ದಿನಕರ, ಜ್ಯೋತಿ, ಮಂಜುಳ, ಶಿಲ್ಪ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ರುಕ್ಮಿಣಿ ಬಾಯಿ



ಹುಣಸೂರು, ಆ.25– ಹುಣಸೂರು ತಾಲೂಕಿನ ರತ್ನಪುರಿ ಗ್ರಾಮದ ನಿವಾಸಿ ಶ್ರೀಮತಿ ರುಕ್ಮಿಣಿ ಬಾಯಿ (80) ಭಾನುವಾರ ನಿಧನರಾದರು. ಮೃತರು ಪುತ್ರ ಟೈಲ್ಸ್ ಕೃಷ್ಣ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಆ.26) ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಸಿಎಂ ಬೆನ್ನಿಗೆ ನಿಂತ ಮಠಾಧೀಶರು

ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಭಗೀರಥ ಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ನಾರಾಯಣ ಗುರುಪೀಠ ರೇಣುಕಾನಂದ ಸ್ವಾಮೀಜಿ, ಮಡಿವಾಳ ಗುರುಪೀಠದ ಬಸವ ಮಾಚಿದೇವ ಸ್ವಾಮೀಜಿ, ಹಡಪದ ಅಪ್ಪಣ್ಣ ಗುರುಪೀಠದ ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ, ಸರೂರು ಪೀಠದ ಶಾಂತಮ್ಮಯ್ಯ ಸ್ವಾಮೀಜಿ ನಿಯೋಗದಲ್ಲಿದ್ದರು.


ರಾಜಭವನದ ಪಾವಿತ್ರ್ಯತೆ ಕಾಪಾಡುವೆ

ಬಿದ್ದೋದಾಗ ಎದೆಗುಂದಬೇಡಿ, ಸೋಲಿಗೆ ಹೆದರಬೇಡಿ ಎಂದು ನನಗೆ ಧೈರ್ಯ ತುಂಬಿದರು ಎಂದು ಶ್ರೀಗಳು ಹೇಳಿದ ಮಾತನ್ನು ನೆನೆದರು. ಸುತ್ತೂರು ಶ್ರೀಗಳು ಮೇಘಾಲಯದ ಶಿಲ್ಲಾಂಗ್ ನಲ್ಲಿರುವ ರಾಜ್ಯಭವನಕ್ಕೆ ಬರುವಂತೆ ಆಹ್ವಾನ ನೀಡಿದ ಸಿ.ಹೆಚ್.ವಿಜಯಶಂಕರ್, ಮೈಸೂರು ಹಾಗೂ ಮೇಘಾಲಯದ ನಡುವೆ ಸೇತುವ ಕಟ್ಟಬೇಕು ಎಂದು ಮನವಿ ಮಾಡಿದರು. ಜಯಂತಿ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಗೋವಾ ರಾಜ್ಯಪಾಲ ಪಿ.ಎಸ್.ಶ್ರೀಧರನ್ ಪಿಳ್ಳೈ, ವಿಜ್ಞಾನದಲ್ಲಿ ಎಷ್ಟೆ ಕ್ರಾಂತಿಯಾದರೂ ವಿಶ್ವದಲ್ಲಿ ಆಧ್ಯಾತ್ಮಿಕತೆ ಬಗ್ಗೆ ಜನರ ಒಲವು ಹೆಚ್ಚಾಗುತ್ತಿದೆ. ಅದರಲ್ಲೂ ಭಾರತದಲ್ಲಿ ಧರ್ಮದ ಬಗ್ಗೆ ನಂಬಿಕೆ ಹೆಚ್ಚಾಗಿದೆ ಎಂದು ಅಭಿಪ್ರಾಯಪಟ್ಟರು.

ಸಾವಿರ ವರ್ಷಕ್ಕೂ ಹೆಚ್ಚು ಇತಿಹಾಸವಿರುವ ಸುತ್ತೂರು ಮಠ ಜನಪರವಾದ ಬಹಳಷ್ಟು ಕೆಲಸ ಮಾಡುತ್ತಿದೆ. ಸಮಾಜಕ್ಕೆ ಮಠದ ಕೊಡುಗೆ ಅಪಾರವಾಗಿದೆ. ಅದರಲ್ಲೂ ಶೈಕ್ಷಣಿಕ ಸಂಸ್ಥೆಗಳ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳಿಗೆ ವಿದ್ಯೆ ನೀಡುತ್ತಿದೆ ಎಂದರು. ಆಶೀರ್ವಚನ ನೀಡಿದ ತುಮಕೂರಿನ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಸಾವಿರ ವರ್ಷಗಳ ಪರಂಪರೆ ಇರುವ ಸುತ್ತೂರು ಮಠ ಯುದ್ಧ ನಿಲ್ಲಿಸಿ ರಾಜರಿಗೆ ಶಾಂತಿ ಮಂತ್ರ ಬೋಧಿಸಿದ್ದರು. ಅದರಲ್ಲೂ ಡಾ.ರಾಜೇಂದ್ರ ಸ್ವಾಮೀಜಿ ತ್ರಿವಿಧ ದಾಸೋಹದ ಮೂಲಕ ಮಠದ ಜನಪರ ಕಾರ್ಯವನ್ನು ಮತ್ತಷ್ಟು ಹೆಚ್ಚು ಮಾಡಿದರು ಎಂದರು.

ಈ ವೇಳೆ ಮಾತನಾಡಿದ ಮುದ್ದೇನಹಳ್ಳಿಯ ಸತ್ಯ ಸಾಯಿ ಗ್ರಾಮದ ಆಧ್ಯಾತ್ಮಿಕ ಮತ್ತು ಸಾಮಾಜಿಕ ನೇತಾರ ಮಧುಸೂದನ ಸಾಯಿ, ತ್ರಿವಿಧ ದಾಸೋಹ ನಡೆಯುತ್ತಿರುವುದಕ್ಕೆ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಕರುಣೆಯೇ ಕಾರಣ ಎಂದು ಅಭಿಪ್ರಾಯಪಟ್ಟರು. ಎಲ್ಲಾ ಕಾರ್ಯವನ್ನು ಸರ್ಕಾರವೇ ಮಾಡಲು ಸಾಧ್ಯವಿಲ್ಲ. ಸರ್ಕಾರದ ಜೊತೆ ಸಂಘ ಸಂಸ್ಥೆಗಳು ಹಾಗೂ ಮಠಗಳು ಕೈ ಜೋಡಿಸಿ ಕೆಲಸ ಮಾಡಬೇಕು. ಆಗ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ. ಎಲ್ಲರೂ ಸಂತೋಷವಾಗಿದ್ದರೆ ಭಾರತ ಅಭಿವೃದ್ಧಿ ಹೊಂದಿದ ದೇಶವಾಗುತ್ತದೆ ಎಂದು ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.08.2024 ಸೋಮವಾರ, ಮಳೆ ನಕ್ಷತ್ರ: ಮಖ 17.08.2024 ರಿಂದ 30.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಕೃತ್ತಿಕ, ರಾಹುಕಾಲ : ಬೆಳಗ್ಗೆ 7.30ರಿಂದ 9ರವರೆಗೆ

■ **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜಯಂತ್ಯುತ್ಸವ, ಮಹಾರಥೋತ್ಸವ ಹಾಗೂ ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ ಸಂಜೆ 4.30ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಅವಧೂತ ದತ್ತ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶ್ರೀ ಸಚ್ಚಿದಾನಂದ ಸ್ವಾಮಿಗೆ ಶ್ರಾವಣ ಮಾಸದ ಪ್ರಯುಕ್ತ ಏಕಾದಶಿ ರುದ್ರಾಭಿಷೇಕ, ಅನಘಾಷ್ಟಮಿ ವ್ರತ, ಶ್ರೀ ಕೃಷ್ಣಾಷ್ಟಮಿ ಗೋ ಪೂಜೆ, ಗೋಪಾಲಕರಿಗೆ ಸನ್ಮಾನ, ಜನ್ಮಾಷ್ಟಮಿ ಪ್ರಯುಕ್ತ ನಿಶೀಥಿ ಪೂಜೆ, ಸ್ಥಳ: ಆಶ್ರಮದ ಸಭಾಂಗಣ, ನಂಜನಗೂಡು ರಸ್ತೆ, ಬೆಳಗ್ಗೆಯಿಂದ.

■ **ಬಸವ ಭಾರತ ಪ್ರತಿಷ್ಠಾನ, ನಾಡಿನ ಸಮಸ್ತ ಬಸವಪರ ಸಂಘಟನೆಗಳ ಸಹಭಾಗಿತ್ವ :** ಬಸವ ಧರ್ಮ ಜಾಗೃತಿ ಅಭಿಯಾನ, ಇಷ್ಟಲಿಂಗ ಧಾರಣೆ ಶಿವಯೋಗ, ವಚನ ಪಠಣ ಹಾಗೂ ಶ್ರಾವಣ ಮಾಸದ ಪ್ರವಚನ ಸಮಾರೋಪ ಕಾರ್ಯಕ್ರಮ, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ.

■ **ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ಪ್ರಾದೇಶಿಕ ಜಾನಪದ ಅಧ್ಯಯನ ಮತ್ತು ಜನಪದ ಕಲಿಕಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಏಕತಾರಿ ಸಾಂಸ್ಕೃತಿಕ ಸಂಘಟನೆ :** ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಜನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರ, ಸ್ಥಳ: ಕಿರು ರಂಗಮಂದಿರ ಆವರಣ, ಕಲಾಮಂದಿರ, ಸಂಜೆ 4ರಿಂದ 6ರವರೆಗೆ.

■ **ಶರಣ ಸಾಹಿತ್ಯ ಪರಿಷತ್ತು (ಮೈಸೂರು ನಗರ ಘಟಕ) ಕದಳಿ ಮಹಿಳಾ ವೇದಿಕೆ :** ವಚನ–ಶ್ರಾವಣ, ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಜೆಎಸ್‌ಎಸ್ ಪದವಿ ಕಾಲೇಜಿನ ಪ್ರಾಧ್ಯಾಪಕ ಪ್ರೊ. ಡಿ.ಎಸ್.ಸದಾಶಿವ ಮೂರ್ತಿ ಅವರಿಂದ 'ಕೃತಯುಗದಲ್ಲಿ ಶ್ರೀ ಗುರುಶಿಷ್ಯರಿಗೆ ಬಡಿದು ಬುದ್ಧಿಯ ಕಲಿಸದೆಡೆ ಆಗಲಿ ಮಹಾಪ್ರಸಾದ ವಂದನಯ್ಯ' ವಿಷಯ ಕುರಿತು ಉಪನ್ಯಾಸ, ಸ್ಥಳ: ಶ್ರೀಮತಿ ಸೌಮ್ಯ ಸೌಗಂಧ, ನಂ.14, ದೊಡ್ಮನೆ, ಮೇನ್‌ರೋಡ್, ನೇತಾಜಿನಗರ, ಸಂಜೆ 5.30ಕ್ಕೆ.

■ **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್ (ಗೀತಾ ಮಂದಿರ):** ಶ್ರೀ ಕೃಷ್ಣ ಜನ್ಮಾಷ್ಟಮಿ ಪೂಜಾ ಕಾರ್ಯಕ್ರಮ, ಸಂಜೆ 5ರಿಂದ ಸ್ವಾಮಿಗೆ ಅಭಿಷೇಕ, ಅಲಂಕಾರ, ಸಂಜೆ 6.15ರಿಂದ ಶ್ರೀ ಸಾಯಿ ಪ್ರಣತಿ ಸೇವಾ ಟ್ರಸ್ಟ್ ವತಿಯಿಂದ ಶ್ರೀ ಕೃಷ್ಣ ಭಜನೆ, ಸಂಜೆ 7.15ರಿಂದ ಶ್ರೀ ವಿದ್ಯಾ ವಿಷ್ಣು ಸಭಾ ಟ್ರಸ್ಟ್‌ನಿಂದ ವಿಷ್ಣು ಸಹಸ್ರನಾಮ ಪಾರಾಯಣ, ರಾತ್ರಿ 8.15ಕ್ಕೆ ಗೋಪೂಜೆ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಟ್ರಸ್ಟ್ ಆವರಣ, ಶ್ರೀ ಗೀತಾ ಮಂದಿರದ ರಸ್ತೆ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿದುಷಿ ಧರಿತ್ರಿ ಆನಂದರಾವ್ ಅವರಿಂದ ವಾಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಪ್ರವಚನ, ಸಂಜೆ 6ಕ್ಕೆ ಸಾಮೂಹಿಕ ಪ್ರಾರ್ಥನೆ, ಸಂಜೆ 6.30ಕ್ಕೆ ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ರಿಂದ.

■ **ಶ್ರೀ ವಾಸುದೇವ ಮಹಾರಾಜ್ ಫೌಂಡೇಶನ್:** ಶ್ರೀ ವಾಸುದೇವ ಮಹಾರಾಜ್ ಅವರ 18ನೇ ಆರಾಧನಾ ಮಹೋತ್ಸವ, ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿ–2024 ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ, ಉದ್ಘಾಟನೆ: ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳು, ಭಾವಚಿತ್ರಕ್ಕೆ ಪುಷ್ಪಾರ್ಚನೆ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಶ್ರೀ ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿ ಭಾಜನರು: ಅಂತಾರಾಷ್ಟ್ರೀಯ ಲೈಂಗಿಕ ಮತ್ತು ಗರ್ಭದಾರಣೆ ತಜ್ಞ ವೈದ್ಯ ಡಾ.ಸಿ.ಶರತ್‌ಕುಮಾರ್, ಸಂಧ್ಯಾ ಸುರಕ್ಷಾ ಟ್ರಸ್ಟ್ ಸಂಸ್ಥಾಪಕ ಡಾ.ಬಿ.ಆರ್.ನಟರಾಜ್ ಜೋಯಿಸ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ

■ **ನಾಟ್ಯ ಸಂಸ್ಥೆ, ಬಿಎಂ ಹ್ಯಾಬಿಟ್ಯಾಟ್ ಮಾಲ್:** ಶ್ರೀ ಕೃಷ್ಣಜನ್ಮಾಷ್ಟಮಿಯ ಅಂಗವಾಗಿ ರಾಧ–ಕೃಷ್ಣ, ಛದ್ಮವೇಷ ಸ್ಪರ್ಧೆ, ಸ್ಥಳ: ಬಿ.ಎಂ. ಹ್ಯಾಬಿಟ್ಯಾಟ್ ಮಾಲ್, ಜಯಲಕ್ಷ್ಮಿಪುರಂ, ಸಂಜೆ 6 ಗಂಟೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಡಾ.ಎಸ್.ತುಕರಾಂ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ–ಅಂಕನ–ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್. ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಹಂಸಿನಿ. ಎಸ್.ಕುಮಾರ್, ವ್ಯಾಖ್ಯಾನ: ಡಾ.ಪ್ರದೀಪ್‌ಕುಮಾರ್ ಹೆಬ್ರಿ, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 8.30–ಕೃಷ್ಣಂ ವಂದೇ ಜಗದ್ಗುರುಂ–ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ವಿಶೇಷ ಕಾರ್ಯಕ್ರಮ, ರಚನೆ–ಆರ್.ಆರ್.ಜನಾರ್ಧನ್, ಸಹ ನಿರೂಪಣೆ– ಬಿ.ಜಿ.ಕವಿತಾ, ನಿರ್ಮಾಣ–ಆರ್.ಲೋಕೇಶ್ವರಿ, 9.00–ರಾಷ್ಟ್ರೀಯ ಬಾಹ್ಯಾಕಾಶ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ– "ಬಾಹ್ಯಾಕಾಶ ವಿಸ್ಮಯ", 9.05–'ಆಚಾರ್ಯ ಐಐಟಿ–ವೃತ್ತಿ ಮಾರ್ಗದರ್ಶನ' ಕಾರ್ಯಕ್ರಮ 'ಆರ್ಕಿಟೆಕ್ಚರ್ ಮತ್ತು ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಇರುವ ಹೊಸ ಕೋರ್ಸ್‌ಗಳು–ವೇದಿಕ್ ಆರ್ಕಿಟೆಕ್ಚರ್, ಡಿಜಿಟಲ್ ಆರ್ಕಿಟೆಕ್ಚರ್, ಸೈಬರ್ ಸೆಕ್ಯುರಿಟಿ, ಡೇಟಾ ಸೈನ್ಸ್, ಆರ್ಟಿಫೀಶಿಯಲ್ ಇಂಟೆಲಿಜೆನ್ಸ್, ಮಶೀನ್ ಲರ್ನಿಂಗ್ ಇತ್ಯಾದಿ' ಕುರಿತು ತಿಳಿಸಿಕೊಡಲಿದ್ದಾರೆ ಆಚಾರ್ಯ ಐಐಟಿಯ ಸಂಸ್ಥಾಪಕ ನಿರ್ದೇಶಕರಾದ ಪ್ರೊಫೆಸರ್ ಸುಧೀರ್ ಆಚಾರ್ಯ ಮತ್ತು ಪ್ರಾಂಶುಪಾಲರಾದ ಸುಜಾತಾ ಜೋಷಿ ಅವರು. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್ ಈ ಕಾರ್ಯಕ್ರಮದ ಪ್ರಾಯೋಜಕರು: ಆಚಾರ್ಯ ಐಐಟಿ, ಮೈಸೂರು, 9.35 ಚಿತ್ರಗೀತೆಗಳು, 10.00, ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಜೆ.ಶ್ರೀನಿವಾಸ ಅಯ್ಯಂಗಾರ್–ವೀಣಾ ವಾದನ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ– ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಮತ್ತು ಚಿನ್ಮಯಿ. ಕೆ.ಎಸ್, 12.05 –ವನಿತಾ ವಿಹಾರ, 12.30–ದೇವರನಾಮ–ವಾಸವಿ. ಜಿ.ಎಸ್, 12.45–ನಮ್ಮ ಆರೋಗ್ಯ: ರಾಷ್ಟ್ರೀಯ ದೃಷ್ಟಿದಾನ ಪಾಕ್ಷಿಕದ ಸಂದರ್ಭದಲ್ಲಿ 'ನೇತ್ರದಾನದ ಮಹತ್ವ ಮತ್ತು ಅಗತ್ಯ' ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನೇತ್ರಭಂಡಾರ ಅಧಿಕಾರಿ ಡಾ.ಚಂದ್ರಕಲಾ. ಪಿ ಅವರು. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಚಿತ್ರಗೀತೆಗಳು, 1.20–ಭಾವಗೀತೆಗಳು, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಎ.ಅನಂತಪದ್ಮನಾಭನ್–ವೀಣಾ ವಾದನ, 4.00–ಮಹಿಳಾರಂಗ: "ನಾನು ನನ್ನ ಕಂಪನಿ" ಆಹಾರೋತ್ಪನ್ನ ತಯಾರಿಸುವ ಸುಧಾಮಣಿ. ಡಿ.ಎಸ್. ಅವರೊಂದಿಗೆ ಮಾತುಕತೆ, ಪ್ರಸ್ತುತಿ: ಕೆ.ಬಿ. ಮೀನಾ, 4.45–ಹಿಂದಿ ಪಾಠ–ಡಾ.ಮಾಧವಿ ಭಂಡಾರಿ, 6.50–ಕೃಷಿರಂಗ: ಸಂಸ್ಕೃತ ಸಾಹಿತ್ಯದಲ್ಲಿ ಕೃಷಿಯ ಉಲ್ಲೇಖ. ಈ ಕುರಿತು ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯ ಸಂಶೋಧನಾ ಸಹಾಯಕರಾದ ಡಾ.ದಿಡಗಿ ವಂಶಿಕೃಷ್ಣ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45–ಕನ್ನಡದಲ್ಲಿ ಭಾಷಣ, 9.30–"ಹಾದಿಯಲ್ಲಿ ಕಂಡ ಮುಖ" –ಬಾನುಲಿ ಸರಣಿ, ಮೂಡಲಪಾಯ ಯಕ್ಷಗಾನ ಭಾಗವತರಾದ ಟಿ.ಎಸ್.ರವೀಂದ್ರ ಅವರೊಂದಿಗೆ ಮಾತುಕತೆ, ಪ್ರಸ್ತುತಿ: ಅಬ್ದುಲ್ ರಶೀದ್, 10.00–ನಾಟಕ, 10.30–ಸವಿನೆನಪು.

ಶರಣ ಕ್ಷೇತ್ರಗಳ ದರ್ಶನದಿಂದ ಸಕಾರಾತ್ಮಕ ಚಿಂತನೆ

ವಚನ ಕುಮಾರಸ್ವಾಮಿ ಅಭಿಮತ



ದೇವಲಾಪುರದ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಆಯೋಜಿಸಿದ್ದ ವಿಶೇಷ ಪ್ರವಚನ ಕಾರ್ಯಕ್ರಮವನ್ನು ಸ್ವಾಮೀಜಿಗಳು ಉದ್ಘಾಟಿಸಿದರು.

ಮೈಸೂರು, ಆ.25(ಎಸ್‌ಬಿಡಿ)– ಮೈಸೂರು ತಾಲೂಕು ದೇವಲಾಪುರದ ಶ್ರೀ ಗುರು ಮಲ್ಲೇಶ್ವರ ದಾಸೋಹ ಮಠದಲ್ಲಿ ಶ್ರಾವಣ ಮಾಸದ ಪ್ರಯುಕ್ತ ವಿಶೇಷ ಪ್ರವಚನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.


ಕಾರ್ಯಕ್ರಮ ಉದ್ಘಾಟಿಸಿದ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಮಾತನಾಡಿ, ಶರಣ ಕ್ಷೇತ್ರಗಳ ದರ್ಶನದಿಂದ ಸಕಾರಾತ್ಮಕ ಚಿಂತನೆ ಉಂಟಾಗುತ್ತದೆ. ಈ ನಿಟ್ಟಿನಲ್ಲಿ ವಿಶ್ವ ಸಾಹಿತ್ಯಕ್ಕೆ ಕನ್ನಡದ ವಚನ ಸಾಹಿತ್ಯವನ್ನು ಕಾಣಿಕೆಯಾಗಿ ನೀಡಿದ ವಚನಕಾರರ ಜನ್ಮಸ್ಥಳ, ಕಾರ್ಯಕ್ಷೇತ್ರ ಮತ್ತು ಐಕ್ಯ ಕ್ಷೇತ್ರಗಳ ದರ್ಶನವನ್ನು ಜೀವನದಲ್ಲಿ ಒಮ್ಮೆಯಾದರೂ ಮಾಡಬೇಕು ಎಂದರು.

ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ಶರಣರ ವಿಚಾರಧಾರೆ ಕುರಿತು ಉಪನ್ಯಾಸ ನೀಡಿ, ಕಲ್ಯಾಣದಲ್ಲಿ ಭಕ್ತಿಯ ಸಾಕಾರ ಮೂರ್ತಿ ಬಸವಣ್ಣನವರ ಮುಂದಾಳತ್ವದಲ್ಲಿ ಎಲ್ಲಾ ಶರಣರು ಕಾಯಕ ಮತ್ತು ದಾಸೋಹ ತತ್ವವನ್ನು ರೂಢಿಸಿಕೊಂಡಿದ್ದರು. ಅನುಭವ ಮಂಟಪ ಭಕ್ತಿ ಮತ್ತು ಜ್ಞಾನವನ್ನು ಪ್ರತಿಬಿಂಬಿಸುವ ತಾಣವಾದರೆ, ಮಹಾಮನೆ ದಾಸೋಹದ ಮಹತ್ವವನ್ನು ಎತ್ತಿ ಹಿಡಿಯಿತು. ಶರಣರ ದಾಸೋಹವನ್ನು ದೇವನೂರಿನ ಶ್ರೀ ಗುರುಮಲ್ಲೇಶ್ವರರು ಮುಂದುವರೆಸಿ ನೂರಾರು ಗ್ರಾಮಗಳಲ್ಲಿ ದಾಸೋಹ ಮಠ ಸ್ಥಾಪಿಸಿದರು ಎಂದು ನಮನ ಸಲ್ಲಿಸಿದರು.

ಶ್ರೀ ಗುರುಮಲ್ಲೇಶ್ವರ ದಾಸೋಹ ಮಠಾಧ್ಯಕ್ಷ ಶ್ರೀ ಜಡೇಸ್ವಾಮೀಜಿ ಮಾತನಾಡಿದರು. ದಂಡಿಕೆರೆಯ ಶ್ರೀ ಬಸವಲಿಂಗಸ್ವಾಮಿಗಳು ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಕೂಡನಹಳ್ಳಿ ಮಠದ ಶ್ರೀ ಮರಿಸ್ವಾಮೀಜಿ, ಸೋಮೇಶ್ವರ ಮಠದ ಶ್ರೀ ಗುರುಸ್ವಾಮೀಜಿ, ಹೊಸಕೋಟೆ ಶ್ರೀ ಗುರುಸ್ವಾಮೀಜಿ ಮತ್ತಿತರರು ಉಪಸ್ಥಿತರಿದ್ದರು. ಇದೇ ವೇಳೆ ಶ್ರೀ ಗುರುಮಲ್ಲೇಶ್ವರ ಭಜನಾ ಸಂಘ ಮತ್ತು ಶ್ರೀ ಶಿವರಾತ್ರೀಶ್ವರ ರಾಜೇಂದ್ರ ಅಕ್ಕನ ಬಳಗದವರು ಭಜನೆ ನಡೆಸಿಕೊಟ್ಟರು.

ಅರಸು ಜನಾಂಗದ ಅಭಿವೃದ್ಧಿ, ಸಂಘಟನೆಗೆ ಯುವಕರು ಮುಂದಾಗಬೇಕು

ಶ್ರೀ ವರ್ಚಸ್ವಿ ಶ್ರೀಕಂಠಸಿದ್ಧಲಿಂಗರಾಜೇ ಅರಸ್ ಸಲಹೆ



ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ವೇಣುಗೋಪಾಲಸ್ವಾಮಿ ದೇವಾಲಯದ ಚಾಮರಾಜೇಂದ್ರ ಸಭಾಂಗಣದಲ್ಲಿ ಕರ್ನಾಟಕ ಅರಸು ಮಹಾಮಂಡಲಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಜನ್ಮೋತ್ಸವ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಅವರು 'ಯಶೋಗಾಥೆ– ಅರಸು ಜನಾಂಗದ ಸಾಧಕರು' ಕೃತಿ ಬಿಡುಗಡೆ ಮಾಡಿದರು.

ಮೈಸೂರು, ಆ.25(ಎಂಟಿವೈ)– ಕಡಿಮೆ ಜನಸಂಖ್ಯೆಯಿರುವ ಕಾರಣದಿಂದಾಗಿ ಮೈಕ್ರೋ ಕಮ್ಯುನಿಟಿಗಿಂತಲೂ ಕಡಿಮೆಯಾಗಿ ನ್ಯಾನೋ ಕಮ್ಯೂನಿಟಿ ಆಗಿರುವ ಅರಸು ಜನಾಂಗದ ಅಭಿವೃದ್ಧಿ ಮತ್ತು ಸಂಘಟನೆಗೆ ಸಮುದಾಯ ಯುವಕರು ಮುಂದಾಗಬೇಕು ಎಂದು ಕಪ್ಪಡಿ ಹಾಗೂ ಹೊನ್ನಾಯಕನಹಳ್ಳಿಯ ಪೀಠಾಧಿಪತಿ ಶ್ರೀ ವರ್ಚಸ್ವಿ ಶ್ರೀಕಂಠಸಿದ್ದ ಲಿಂಗರಾಜೇ ಅರಸ್ ಸಲಹೆ ನೀಡಿದ್ದಾರೆ.

ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ವೇಣುಗೋಪಾಲಸ್ವಾಮಿ ದೇವಾಲಯದ ಚಾಮರಾಜೇಂದ್ರ ಸಭಾಂಗಣದಲ್ಲಿ ಕರ್ನಾಟಕ ಅರಸು ಮಹಾಮಂಡಲಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಜನ್ಮೋತ್ಸವ, 'ಯಶೋಗಾಥೆ– ಅರಸು ಜನಾಂಗದ ಸಾಧಕರು' ಕೃತಿ ಬಿಡುಗಡೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದ ಅವರು, ಬೆಂಗಳೂರು, ಮೈಸೂರು ಸೇರಿದಂತೆ ರಾಜ್ಯದಲ್ಲಿ ಅರಸು ಜನಾಂಗದವರು ಕೇವಲ 50 ರಿಂದ 60 ಸಾವಿರ ಮಂದಿ ಇರಬಹುದು. ನಮ್ಮ ಸಮುದಾಯ ಸೂಕ್ಷ್ಮಾತಿಸೂಕ್ಷ್ಮ ವರ್ಗಕ್ಕೂ ಬರುವುದಿಲ್ಲ. ನ್ಯಾನೋ ಕಮ್ಯೂನಿಟಿಯಂತೆ ಇದ್ದೇವೆ. ಇಂತಹ ಜನಾಂಗದ ಬೆಳವಣಿಗೆಗೆ ಡಿ. ದೇವರಾಜ ಅರಸು ಕಾರಣ. ಅವರು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಸಮುದಾಯ ಗುರುತಿಸಿಕೊಳ್ಳುವಂತೆ ಮಾಡಿದರು. ಅಲ್ಲದೆ, ಸಮುದಾಯದ ಹಲವು ಹಿರಿಯರು ಜನಾಂಗದ ಏಳಿಗೆಗೆ ಶ್ರಮಿಸುತ್ತಿದ್ದು, ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಮುದಾಯದ ಯುವಕರು ನಡೆಯುವ ಮೂಲಕ ಜನಾಂಗದ ಏಳಿಗೆಗೆ ಶ್ರಮಿಸಬೇಕು ಎಂದು ಕರೆ ನೀಡಿದರು.

ವಿವಿಧ ಕಾರಣಗಳಿಂದ ಅರಸು ಜನಾಂಗದ ವಿವಿಧ ಸಂಘಟನೆಗಳು ಅಸ್ತಿತ್ವದಲ್ಲಿವೆ. ಅವುಗಳನ್ನು ಒಂದೇ ವೇದಿಕೆಯಲ್ಲಿ ತರುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಅರಸು ಜನಾಂಗ ಅಮೇರಿಕಾ, ಯುರೋಪ್ ಸೇರಿದಂತೆ ವಿವಿಧ ದೇಶಗಳಲ್ಲೂ ನೆಲೆಸಿವೆ. ಆದರೆ, ಒಂದುಗೂಡಿಸಲು ಸಂವಹನದ ಕೊರತೆ ಎದ್ದು ಕಾಣುತ್ತಿದೆ. ಯುವ ಜನತೆ ಸಾಮಾಜಿಕ ಜಾಲತಾಣ ಹಾಗೂ ಅರಸು ಸಮುದಾಯದವರು ನಡೆಸುವ ಪತ್ರಿಕೆಗಳಲ್ಲಿ ಪ್ರಕಟಿಸುವ ನೀಡುವ ಮೂಲಕ ಜನಾಂಗವನ್ನು ಸಂಘಟಿಸುವ ಕೆಲಸ ಮಾಡಬೇಕು ಎಂದರು.

ಸಮುದಾಯ ಟ್ರಸ್ಟ್ ಹಾಗೂ ಸಂಘಟನೆಗಳು ಸಮುದಾಯದ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವ ನಿಟ್ಟಿನಲ್ಲಿ ನೆರವಾಗಬೇಕು. ದೇವರಾಜ ಅರಸು ಅವರ ಕಾಲದಲ್ಲಿಯೇ ವಿದ್ಯಾರ್ಥಿಗಳ ನೆರವಿಗಾಗಿ ದತ್ತಿ ಸ್ಥಾಪಿಸಲಾಗಿತ್ತು. ಇದುವರೆಗೂ ಸಾವಿರಾರು ವಿದ್ಯಾರ್ಥಿಗಳು ನೆರವು ಪಡೆದಿದ್ದಾರೆ. ಇದಕ್ಕೆ ಮತ್ತಷ್ಟು ನೆರವು ನೀಡುವ ಅಗತ್ಯವಿದೆ. ಜನಾಂಗದಲ್ಲಿ ಒಗ್ಗಟ್ಟು, ಉತ್ತಮ ಸಂಪರ್ಕ ಅನಿವಾರ್ಯ. ಸಾಮಾಜಿಕ, ಶೈಕ್ಷಣಿಕ ಯೋಜನೆಗಳ ಜೊತೆಗೆ ಆರೋಗ್ಯಕ್ಕೆ ಸಂಬಂಧಿಸಿದ ಯೋಜನೆಗಳನ್ನು ರೂಪಿಸಬೇಕು. ಯುವ ಘಟಕ ಸ್ಥಾಪಿಸಿ, ಹಾಸ್ಟೆಲ್, ವಿದ್ಯಾರ್ಥಿ ವೇತನ ಮತ್ತಿತರ ಸೌಲಭ್ಯ ಕಲ್ಪಿಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಅರಸು ಮಹಾಮಂಡಲಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಡಾ.ಎಂಜಿಆರ್ ಅರಸು ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಮರಣೋತ್ತರವಾಗಿ 'ಭಾರತರತ್ನ' ನೀಡಬೇಕು. ರಾಮಕೃಷ್ಣ ನಗರ ವೃತ್ತದ ಬಳಿ ಅರ್ಧ ಎಕರೆ ಪ್ರದೇಶದಲ್ಲಿ ಡಿ. ದೇವರಾಜ ಅರಸು ಭವನ ಬರಲಿದೆ ಇದಕ್ಕಾಗಿ ರಾಜ್ಯ ಸರ್ಕಾರ 1.5 ಕೋಟಿ ರೂ. ಮಂಜೂರು ಮಾಡಿದ್ದು, ಈಗಾಗಲೇ ನಿರ್ಮಿತಿ ಕೇಂದ್ರಕ್ಕೆ 30 ಲಕ್ಷ ರೂ. ಬಿಡುಗಡೆ ಮಾಡಿದೆ ಎಂದು ಅವರು ಹೇಳಿದರು.

ಟ್ರಸ್ಟಿನ ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್ ಮಾತನಾಡಿ, ನಾವು ಮಾಡುವ ಕೆಲಸದಲ್ಲಿ ಸ್ವಾರ್ಥ ಇರಬಾರದು. ಅರಸು ಜನಾಂಗ ಜಾತ್ಯತೀತ ಮನೋಭಾವದ ಸಮುದಾಯ. ಇತರೆ ಯಾವುದೇ ಜನಾಂಗವನ್ನು ದ್ವೇಷಿಸದೇ ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗುವ ಪ್ರಯತ್ನ ಮಾಡುವವರು ನಾವಾಗಿದ್ದೇವೆ. ಅವಕಾಶ, ಜವಾಬ್ದಾರಿ ಸಿಕ್ಕಾಗ ಹಿಂದೆ ಸರಿಯಬಾರದು. ಹೊಣೆ ಹೊತ್ತುಕೊಂಡಲ್ಲಿ ನಾಯಕರಾಗಿ ಬೆಳೆಯಬಹುದು. ಇದೇ ರೀತಿ ನಾನು ಹೋದೆಡೆಯೆಲ್ಲಾ ಕಾರ್ಯನಿರ್ವಹಿಸುತ್ತಿದ್ದೇನೆ. ಎಲ್ಲರ ಸಹಕಾರದಿಂದ ಕಾರ್ಯಗಳು ಸುಗಮವಾಗಿ ಸಾಗುತ್ತಿವೆ. ವೇಣುಗೋಪಾಲ ಸ್ವಾಮಿ ದೇವಸ್ಥಾನ ಆವರಣವನ್ನು ಇನ್ನೂ ಸುಸಜ್ಜಿತಗೊಳಿಸಲು ಹಂತ ಹಂತವಾಗಿ ಕ್ರಮವಹಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ತಮಿಳುನಾಡು ಬರಗೂರು ಬೆಟ್ಟದ ಶ್ರೀ ಅಶೋಕ ರಾಜೇಂದ್ರಸ್ವಾಮಿ, ಟ್ರಸ್ಟಿನ ಗೌರವಾಧ್ಯಕ್ಷ ಎಂ.ಎಲ್. ಬಸವರಾಜೇ ಅರಸ್, ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಕೃತಿಯ ಸಂಪಾದಕ ಕೆ.ಪಿ. ಲಕ್ಷ್ಮೀಕಾಂತರಾಜೇ ಅರಸ್, ಉಪಾಧ್ಯಕ್ಷ ಎಚ್‌ಎಂಟಿ ಲಿಂಗರಾಜೇ ಅರಸ್, ಟ್ರಸ್ಟ್ ಕಾರ್ಯದರ್ಶಿ ವೈ.ಎಂ. ಕಿರಣ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಎಂಜಿನಿಯರಿಂಗ್, ವೈದ್ಯಕೀಯ. ದಂತ ವೈದ್ಯಕೀಯ, ಸಿಎ ಮತ್ತಿತರ ಕೋರ್ಸುಗಳಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿರುವ 56 ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ, ನಗದು ನೀಡಿ ಪುರಸ್ಕರಿಸಲಾಯಿತು. ದೇವಸ್ಥಾನದ ಪುನರುಜ್ಜೀನ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಕೃಷ್ಣಪ್ಪ ಅವರನ್ನು ಸನ್ಮಾನಿಸಲಾಯಿತು.

ಆಕಾಶವಾಣಿ 'ಚುರುಮುರಿ'ಯಲ್ಲಿ ಹಾಸ್ಯದ ಹೊನಲು ಮುಂದುವರೆಯಲಿ...



ಮೈಸೂರು ಆಕಾಶವಾಣಿಯ 'ಚುರುಮುರಿ' ಲಘು ಹಾಸ್ಯ ಕಾರ್ಯಕ್ರಮದ ನಿರ್ಮಾತೃ ಆಕಾಶವಾಣಿ ಹಿರಿಯ ಉದ್ಘೋಷಕ ಪ್ರಭುಸ್ವಾಮಿ ಮಳಿಮಠ ಅವರನ್ನು ಸಮುದ್ಯತಾ ಶ್ರೋತೃ ಬಳಗದ ವತಿಯಿಂದ ಅಭಿನಂದಿಸಲಾಯಿತು.

> ಮುದ್ರಾ ಹಾಗೂ ದೃಶ್ಯ ಮಾಧ್ಯಮದ ಅಬ್ಬರದ ನಡುವೆ ಧ್ವನಿ ಮಾಧ್ಯಮ ನಿಲ್ಲುತ್ತಾ... ಇರಲು ಸಾಧ್ಯವಾ... ಎಂದುಕೊಂಡಿದ್ದೆ. ಆದರೆ, ಆಕಾಶವಾಣಿ ಎಂದಿಗೂ ತನ್ನ ಸ್ಥಾನ, ಹಿರಿಮೆ–ಗರಿಮೆಯನ್ನು ಬಿಟ್ಟುಕೊಟ್ಟಿಲ್ಲ. ಅಪಾರ ಶ್ರೋತೃ ಬಳಗವನ್ನೊಳಗೊಂಡಿದೆ.
> **- ಸತೀಶ್ ತಿಪಟೂರು,**
> **ನಿರ್ದೇಶಕ, ರಂಗಾಯಣ, ಮೈಸೂರು**

ಮೈಸೂರು, ಆ.25(ಎಂಕೆ)– ಮನಸ್ಸಿಗೆ ಹಾಸ್ಯದ ಹೊನಲು ಹರಿಸಿದ ಮೈಸೂರು ಆಕಾಶವಾಣಿಯ 'ಚುರುಮುರಿ' ಲಘು ಹಾಸ್ಯ ಕಾರ್ಯಕ್ರಮ ಇನ್ನಷ್ಟು ವರ್ಷಗಳು ಮುಂದುವರೆಯಲಿ ಎಂದು ಶ್ರೋತೃ ಬಳಗ ಪ್ರೀತಿ ಪೂರ್ವಕವಾಗಿ ಮನವಿ ಮಾಡಿತು.

ಮೈಸೂರು ರಂಗಾಯಣದ ಬಿ.ವಿ. ಕಾರಂತ ರಂಗಚಾವಡಿಯಲ್ಲಿ ಆಕಾಶವಾಣಿ ಮೈಸೂರು ಹಾಗೂ ಸಮುದ್ಯತಾ ಶ್ರೋತೃ ಬಳಗದ ಸಂಯುಕ್ತಾಶ್ರಯದಲ್ಲಿ ಮೈಸೂರು ಆಕಾಶವಾಣಿಯಿಂದ ಬಿತ್ತರಗೊಂಡ 'ಚುರುಮುರಿ' ಲಘು ಹಾಸ್ಯ ಕಾರ್ಯಕ್ರಮದ 10ನೇ ವರ್ಷಾಚರಣೆಯ 'ಚುರುಮುರಿ ಸಂಭ್ರಮ' ಕಾರ್ಯಕ್ರಮದಲ್ಲಿ ಇನ್ನಷ್ಟು ವರ್ಷಗಳು 'ಚುರುಮುರಿ' ಹಾಸ್ಯದ ಹೊನಲು ಹರಿಯಬೇಕು ಎಂದು ಮನವಿ ಮಾಡಲಾಯಿತು.

'ಚುರುಮುರಿ' ಎಂಬುದೇ ವಿಶೇಷ. ಮೈಸೂರಿಗರ ಮನೆ ಮಾತಾಗಿರುವ 'ಚುರುಮುರಿ' ಲಘು ಹಾಸ್ಯ ಕಾರ್ಯಕ್ರಮ ಮುಂದುವರೆಯಬೇಕು. ಹಾಸ್ಯ ರಸವಿಲ್ಲದಿದ್ದರೆ ಜೀವನ ನೀರಸ. ವಾಣಿಯೂ ದೇವರು ಪ್ರಕೃತಿ, 'ಚುರುಮುರಿ' ಆಕಾಶವಾಣಿ ಶ್ರೋತೃಗಳಿಗೆ ಸೃಷ್ಟಿಸಿದ ಪ್ರಕೃತಿ ಎನ್ನುತ್ತಲೇ ಆಕಾಶವಾಣಿ ಆಲಿಸದೆ ದಿನ ಆರಂಭಿಸುವುದಿಲ್ಲ ಎಂದು ಶ್ರೋತೃಗಳು ಅಭಿಮಾನದ ಮಾತುಗಳನ್ನಾಡಿದರು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿದ ಮೈಸೂರು ಸಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ಮೊದಲಿನಿಂದಲೂ ಆಕಾಶವಾಣಿ ಕೇಳಿಕೊಂಡು ಬೆಳೆದಿದ್ದೇನೆ. ಧ್ವನಿ ಮಾಧ್ಯಮವಾಗಿರುವ ಆಕಾಶವಾಣಿ ಕೇಳುಗರಲ್ಲಿ ಕಲ್ಪನಾ ಶಕ್ತಿ ಹೆಚ್ಚಿಸುತ್ತದೆ. ರಂಗಭೂಮಿಯಲ್ಲಿ ಅಭಿನಯದ ಮೂಲಕ ಹಾಸ್ಯವನ್ನು ಹೊಮ್ಮಿಸಿದರೆ, ಧ್ವನಿ ಮೂಲಕ ಆಕಾಶವಾಣಿ ಹಾಸ್ಯದ ಹೊಸಲು ಹರಿಸುತ್ತಿದೆ. ಇದೊಂದು ಸವಾಲಿನ ಕೆಲಸ ಅದರಲ್ಲೂ ಕಳೆದ ಹತ್ತು ವರ್ಷಗಳಿಂದ ಜನರನ್ನು ರಂಜಿಸುತ್ತಾ ಮುನ್ನಡೆಯುತ್ತಿರುವುದು ಸಾಧನೆಯೇ ಆಗಿದೆ ಎಂದು ಶ್ಲಾಘಿಸಿದರು.

ಜನರಿಗಾಗಿ, ಜನರಿಗೋಸ್ಕರ ಆಕಾಶವಾಣಿ: ಆಕಾಶವಾಣಿ ಮೈಸೂರು ಉಪ ನಿರ್ದೇಶಕ ಎಸ್.ಎಸ್.ಉಮೇಶ್ ಮಾತನಾಡಿ, ಪ್ರತಿಯೊಂದು ಲಘು ಹಾಸ್ಯ ಕಾರ್ಯಕ್ರಮ ನಿರ್ಮಾಣದಲ್ಲಿ ನಿಮ್ಮನೆಲ್ಲಾ ನಕ್ಕು–ನಗಿಸುವ ಹಿಂದೆ ಶ್ರಮದ ನೋವಿದೆ. 10 ವರ್ಷಗಳ ಕಾಲ ಪ್ರಸಾರಗೊಂಡಿರುವ 'ಚುರುಮುರಿ' ಕಾರ್ಯಕ್ರಮ ಯಾವುದೇ ರಾಜಿ ಇಲ್ಲದೆ ನಿರಂತರವಾಗಿ ಕೇಳುಗರನ್ನು ರಂಜಿಸುತ್ತಾ ಬಂದಂತಹ ಅದ್ಭುತ ಕಾರ್ಯಕ್ರಮವಾಗಿದೆ. ಜನರಿಂದ, ಜನರಿಗಾಗಿ, ಜನರಿಗೋಸ್ಕರವೇ ಇರುವ ಆಕಾಶವಾಣಿಯಲ್ಲಿ ಮಾತ್ರ 10 ವರ್ಷಗಳ ಒಂದು ಕಾರ್ಯಕ್ರಮ ಪ್ರಸಾರ ಮಾಡುವ ಮೂಲಕ ಕೇಳುಗರ ಮನಗೆದ್ದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ 'ಚುರುಮುರಿ' ಲಘು ಹಾಸ್ಯ ಕಾರ್ಯಕ್ರಮದ ಪರಿಕಲ್ಪನೆ ಮತ್ತು ನಿರ್ಮಾಣ ಮಾಡಿದ ಆಕಾಶವಾಣಿ ಹಿರಿಯ ಉದ್ಘೋಷಕ ಪ್ರಭುಸ್ವಾಮಿ ಮಳಿಮಠ ಅವರನ್ನು ಅಭಿನಂದಿಸಲಾಯಿತು. ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಎನ್.ಕೇಶವಮೂರ್ತಿ, ಸಮುದ್ಯತಾ ಶ್ರೋತೃ ಬಳಗದ ಅಧ್ಯಕ್ಷ ಕಣ್ಣೂರು ವಿ.ಗೋವಿಂದಾಚಾರಿ, ಸುಧಾರಾಜ್, ಟಿ.ಎನ್.ರಾಜೇಶ್ವರಿ, ಚಂದ್ರಕಲಾ ಕುಮಾರ್, ಕಲಾಪ್ರಸಾದ್, ವಿ.ಭಾಗ್ಯಲಕ್ಷ್ಮಿ, ಪಿ.ಶ್ರೀಧರ್ ಮತ್ತಿತರರಿದ್ದರು.

ವಚನಗಳ ಅಧ್ಯಯನದಿಂದ ಸತ್ಯದ ದರ್ಶನ



ಮನೆಮನೆಗೆ ವಚನ ಶ್ರಾವಣ ಸಂದೇಶ ಕಾರ್ಯಕ್ರಮದಲ್ಲಿ ಸದ್ವಿದ್ಯಾ ಪಿಯು ಕಾಲೇಜಿನ ಅಧ್ಯಾಪಕಿ ಶೋಭಾ ಎಲ್. ಆನಂದ ಮಾತನಾಡಿದರು.

ಮೈಸೂರು,ಆ.25(ಎಸ್‌ಪಿಎನ್)– ವಚನಗಳು ಮೇಲ್ನೋಟಕ್ಕೆ ಸರಳ. ಅವುಗಳ ಸಮಗ್ರ ಅಧ್ಯಯನ ನಡೆಸಿದಾಗ ಮಾತ್ರ ಅದರ ವಿರಾಟ್ ರೂಪ ದರ್ಶನವಾಗುತ್ತದೆ ಎಂದು ಸದ್ವಿದ್ಯಾ ಪಿಯು ಕಾಲೇಜಿನ ಅಧ್ಯಾಪಕಿ ಶೋಭಾ ಎಲ್. ಆನಂದ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣ ನಗರದಲ್ಲಿ ಶರಣ ಸಾಹಿತ್ಯ ಪರಿಷತ್ ಮೈಸೂರು ಘಟಕ, ಕದಳಿ ಮಹಿಳಾ ವೇದಿಕೆ ಸಹಯೋಗದೊಂದಿಗೆ ನಡೆದ ವಚನ ಶ್ರಾವಣ: ಮನೆಮನೆಗೆ ವಚನ ಶ್ರಾವಣ ಸಂದೇಶ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಚನಗಳ ಅಧ್ಯಯನದಿಂದ ಸರ್ವರಿಗೂ ಸಲ್ಲುವ ಸಾರ್ವಕಾಲಿಕ ಸತ್ಯ ಮತ್ತು ಬೆಳಕು ದರ್ಶನವಾಗುತ್ತದೆ. ವಚನವೆಂಬುದು ಭೂಗತ ಅಮೃತವಿದ್ದಂತೆ. 'ಕೊಟ್ಟ ಕುದೇರೆಯನೇರಲರಿಯದೆ ಮತ್ತೊಂದು ಕುದುರೆಯನೇರ ಬಯಸುವರು ವೀರರೂ ಅಲ್ಲ, ಧೀರರೂ ಅಲ್ಲ' ಎಂಬ ಅಲ್ಲಮ ಪ್ರಭುವಿನ ವಚನವನ್ನು ಉಲ್ಲೇಖಿಸಿ, ವಚನಗಳು ಸಮುದ್ರವಿದ್ದಂತೆ. ಕೆಲ ಈಜು ಬಲ್ಲವರು ಸಮುದ್ರದ ಆಳಕ್ಕಿಳಿದು ಕಪ್ಪೆಚಿಪ್ಪು ಹುಡುಕಿದಂತೆ, ವಚನದಲ್ಲಿನ ವೈಚಾರಿಕತೆ ಅಧ್ಯಯನ ನಡೆಸಬೇಕು ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಪದಾಧಿಕಾರಿಗಳಾದ ರೇಖಾ, ಮಹದೇವಸ್ವಾಮಿ, ಡಾ.ಯಮುನಾ, ಪ್ರಜ್ವಲ್, ಇಂದಿರಾ ಜಗದೀಶ್, ನಂದೀಶ್, ಸುದರ್ಶನ, ಚಂದ್ರಪ್ಪ, ಪ್ರೇಮಾ ಮಹೇಶ್, ಲೋಕೇಶಪ್ಪ ಶ್ರೀಕಂಠಯ್ಯ, ಮೃತ್ಯುಂಜಯ, ಶೋಭಾ ನಟೇಶ್ ಸೇರಿದಂತೆ ಇತರರಿದ್ದರು.

ಹರಿ ವಿದ್ಯಾಲಯದಲ್ಲಿ ಕೃಷ್ಣ ಜನ್ಮಾಷ್ಟಮಿ ಆಚರಣೆ



ಹರಿ ವಿದ್ಯಾಲಯದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು.

ಮೈಸೂರು, ಆ. 25– ಮೈಸೂರಿನ ಹರಿ ವಿದ್ಯಾಲಯದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಹರಿ ವಿದ್ಯಾಲಯವು ಭಾರತೀಯ ಮೌಲ್ಯಗಳು ಮತ್ತು ಪರಂಪರೆಗೆ ಹೆಚ್ಚಿನ ಒತ್ತು ನೀಡುತ್ತಿದೆ. ವೇಷಭೂಷಣಗಳನ್ನು ಧರಿಸಿಕೊಂಡು ವಿದ್ಯಾರ್ಥಿಗಳು ತಮ್ಮ ಮನೋಜ್ಞ ಪ್ರದರ್ಶನಗಳಿಂದ ಪ್ರೇಕ್ಷಕರ ಗಮನ ಸೆಳೆಯುವಲ್ಲಿ ಯಶಸ್ವಿಯಾದರು. ಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ಭಜನೆ, ಕೀರ್ತನೆಗಳನ್ನು ಮಕ್ಕಳು ಹಾಡಿದರು. ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾದ ದಹಿ–ಹಂಡಿ ಒಡೆಯುವ ಕಾರ್ಯಕ್ರಮವನ್ನು ಮಕ್ಕಳು ನಡೆಸಿಕೊಟ್ಟರು. ಸಂಸ್ಥೆಯ ಕಾರ್ಯದರ್ಶಿ ಹೆಚ್ ಆರ್ ಭಗವಾನ್, ಶಾಲೆಯ ಶೈಕ್ಷಣಿಕ ಸಂಯೋಜಕ ಜನಾರ್ಧನ, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಹಾಗೂ ಪೋಷಕರು ಭಾಗವಹಿಸಿದ್ದರು.

ಎರಡು ದಿನಗಳ ಪ್ರಜ್ಞಾ ರಂಗೋತ್ಸವಕ್ಕೆ ತೆರೆ

ಜಾತಿ–ಧರ್ಮದ ಆಧಾರದಲ್ಲಿ ದೇಶದ ಆಳ್ವಿಕೆ ನಡೆಸುತ್ತಿರುವುದು ಅಪಾಯಕಾರಿ

ಮೈಸೂರು ವಿವಿ ಗಾಂಧಿ ಭವನದ ನಿವೃತ್ತ ನಿರ್ದೇಶಕ ಡಾ.ಎಸ್.ಶಿವರಾಜಪ್ಪ



ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ನಡೆದ ಪ್ರಜ್ಞಾ ರಂಗೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು,ಆ.25(ಪಿಎಂ)– ಇಂದು ಜಾತಿ–ಧರ್ಮದ ಆಧಾರದಲ್ಲಿ ದೇಶವನ್ನು ಆಳುತ್ತಿದ್ದು, ಅದರ ಆಧಾರದ ಮೇಲೆಯೇ ಅಧಿಕಾರವೂ ನಡೆಯುತ್ತಿದೆ. ಇದು ಅತ್ಯಂತ ಅಪಾಯಕಾರಿ ಎಂದು ಮೈಸೂರು ವಿವಿ ಗಾಂಧಿ ಭವನದ ನಿವೃತ್ತ ನಿರ್ದೇಶಕ ಡಾ.ಎಸ್.ಶಿವರಾಜಪ್ಪ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಪ್ರಜ್ಞಾ ರಂಗೋತ್ಸವ–2024ರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಜಾತಿ–ಧರ್ಮದ ಆಧಾರದಲ್ಲಿ ಆಡಳಿತ ನಡೆಸುವುದನ್ನು ಅಂದೇ ಬಸವಣ್ಣ ಕಟುವಾಗಿಯೇ ಖಂಡಿಸಿದ್ದರು ಎಂದರು.

ಪ್ರಜ್ಞಾ ಟ್ರಸ್ಟ್ ಸಮಾಜಮುಖಿಯಾಗಿ ಮುನ್ನಡೆಯುತ್ತಿದೆ. ಆ ಮೂಲಕ ಸಮಾಜಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡುತ್ತಿದೆ. ಇಂತಹ ಸಂಘ–ಸಂಸ್ಥೆಗಳು ಸಮಾಜದ ಶ್ರೇಯೋಭಿವೃದ್ಧಿಗೆ ಅಗತ್ಯ. ಆದರೆ ಕೆಲ ಸಂಸ್ಥೆಗಳು ಸ್ವಾರ್ಥಕ್ಕಾಗಿ ಹುಟ್ಟಿಕೊಳ್ಳುತ್ತವೆ. ಅವುಗಳಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲ. ಪ್ರಜ್ಞಾ ಟ್ರಸ್ಟ್ ನಾಲ್ವಡಿ ಕೃಷ್ಣರಾಜ ಒಡೆಯರ್, ಡಾ.ಅಂಬೇಡ್ಕರ್ ಹಾಗೂ ಬಸವಣ್ಣನವರ ಆಶಯದಂತೆ ಮುನ್ನಡೆಯುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವ್ಯಕ್ತಿಯನ್ನು ಬಿಂಬಿಸಲು ಹಾಗೂ ಯಾವುದೇ ಸಾಧನೆ ಇಲ್ಲದವರಿಗೂ ಕೇವಲ ಪ್ರಶಸ್ತಿ ಕೊಟ್ಟು ಮುನ್ನಲೆಗೆ ತರುವುದಕ್ಕೆ ಹುಟ್ಟಿಕೊಳ್ಳುವ ಸಂಸ್ಥೆಗಳಿಂದ ಸಮಾಜಕ್ಕೆ ಯಾವುದೇ ಉಪಯೋಗವಿಲ್ಲ. ಸಾಂಸ್ಕೃತಿಕ ಹಾಗೂ ಸಾಹಿತ್ಯಕವಾಗಿ ಯುವ ಜನರಲ್ಲಿ ಕ್ರಿಯಾಶೀಲತೆ ಮೂಡಿಸುವ ನಿಟ್ಟಿನಲ್ಲಿ ಪ್ರಜ್ಞಾ ಟ್ರಸ್ಟ್ ಕಾರ್ಯ ನಿರ್ವಹಿಸುತ್ತಿದೆ. ಇಂತಹ ಸಂಸ್ಥೆಗಳು ನಮ್ಮ ಸಮಾಜದಲ್ಲಿ ಬೆರಳೆಣಿಕೆಯಷ್ಟು ಮಾತ್ರವೇ ಇವೆ ಎಂದು ಹೇಳಿದರು.

ಇದಕ್ಕೂ ಮುನ್ನ ವಿವಿಧ ಕ್ಷೇತ್ರಗಳ ಸಾಧಕರಾದ ಕರ್ನಾಟಕ ಜನಪದ ಅಕಾಡೆಮಿ ಸದಸ್ಯ ಡಾ.ಗುರುರಾಜ್ ಮೈಸೂರು (ಜನಪದ ಕ್ಷೇತ್ರ), ರಂಗಕರ್ಮಿ ಬಲರಾಜ್ ವಾಡಿ (ರಂಗಭೂಮಿ), ವೈದ್ಯ ಡಾ.ಅನಂತ್ ಪಿ.ಭಟ್ (ವೈದ್ಯಕೀಯ ಕ್ಷೇತ್ರ), ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಡಾ.ಶಿವಕುಮಾರ್ (ಸಾಹಿತ್ಯ ಕ್ಷೇತ್ರ) ಹಾಗೂ ಹಿಮಾಲಯ ಪರ್ವತ ಏರಿದ ಕರ್ನಾಟಕದ ಪ್ರಥಮ ಮಹಿಳಾ ಸಾಧಕರೂ ಆದ ಜೆಎಸ್‌ಎಸ್ ಡೆಂಟಲ್ ಕಾಲೇಜು ಪ್ರಾಧ್ಯಾಪಕಿ ಡಾ.ಉಷಾ ಹೆಗ್ಗಡೆ (ಕ್ರೀಡಾ ಕ್ಷೇತ್ರ) ಅವರನ್ನು ಸನ್ಮಾನಿಸಲಾಯಿತು.

ನಾಟಕ ಪ್ರದರ್ಶನ: ಟ್ರಸ್ಟಿನ ಬೆಳ್ಳಿ ಮಹೋತ್ಸವ ಪ್ರಯುಕ್ತ ಶನಿವಾರ ಚಾಲನೆ ಪಡೆದ ಪ್ರಜ್ಞಾ ರಂಗೋತ್ಸವದಲ್ಲಿ 'ಶರೀಫ' ಹಾಗೂ 'ಮಂಟೇಸ್ವಾಮಿ ಕಥಾ ಪ್ರಸಂಗ' ನಾಟಕಗಳ ಪ್ರದರ್ಶನ ಮತ್ತು ಜಾನಪದ ನೃತ್ಯ ಕಾರ್ಯಕ್ರಮ ನಡೆದವು. ಪ್ರದರ್ಶನಗಳಿಗೆ ಉಚಿತ ಪ್ರವೇಶ ಕಲ್ಪಿಸಲಾಗಿತ್ತು.

ಹವ್ಯಾಸಿ ರಂಗಕರ್ಮಿ ಡಾ.ಹೆಚ್.ಎಂ. ಕುಮಾರ ಸ್ವಾಮಿ, ರಂಗ ನಿರ್ದೇಶಕ ಮೈಮ್ ರಮೇಶ್, ಪ್ರಜ್ಞಾ ಟ್ರಸ್ಟ್ ಗೌರವಾಧ್ಯಕ್ಷ ಡಾ.ಪಿ.ಮಾದೇಶ್, ಅಧ್ಯಕ್ಷ ಸೋಸಲೆ ಸಿದ್ದರಾಜು, ಕಾರ್ಯದರ್ಶಿ ಕೆ.ಎಂ.ಶಿವರಾಜು, ನಿರ್ದೇಶಕ ಡಾ.ಕೆ.ಎಸ್.ಕುಮಾರ ಸ್ವಾಮಿ, ಜಾನಪದ ಕಲಾವಿದ ಡಾ.ಆರ್. ನಿಂಗರಾಜು ಮತ್ತಿತರರು ಹಾಜರಿದ್ದರು.

ಮೇಘಾಲಯ ರಾಜ್ಯಪಾಲರಿಗೆ ಅಭಿನಂದನೆ



ಮೇಘಾಲಯದ ರಾಜ್ಯಪಾಲರಾದ ಸಿ.ಹೆಚ್.ವಿಜಯಶಂಕರ್ ಅವರನ್ನು ಬಿಜೆಪಿ ಮುಖಂಡರಾದ ಸೋಮಶೇಖರ ರಾಜು, ನಂಜಪ್ಪ, ಕುಮಾರ್ ಗೌಡ ಮತ್ತಿತರರು ಅಭಿನಂದಿಸಿದರು.

ಮನದ ಮೈಲಿಗೆ ತೊಳೆಯಲು ಶರಣರ ಚಿಂತನೆ ಅಗತ್ಯ

ಜ್ಞಾನಪ್ರಕಾಶ ಸ್ವಾಮೀಜಿ ಅಭಿಮತ



ಮೈಸೂರಿನ ಗಾಂಧಿನಗರದಲ್ಲಿರುವ ಉರಿಲಿಂಗಪೆದ್ದಿ ಮಹಾಸಂಸ್ಥಾನ ಶಾಖಾ ಮಠದಲ್ಲಿ ಭಾನುವಾರ ಆಯೋಜಿಸಿದ್ದ ಶ್ರಾವಣದಲ್ಲಿ ಶರಣರ ಸ್ಮರಣೋತ್ಸವದಲ್ಲಿ ಐವರು ಹಿರಿಯ ನಾಗರಿಕರನ್ನು ಸನ್ಮಾನಿಸಲಾಯಿತು.

ಮೈಸೂರು, ಆ.25(ಎಂಟಿವೈ)– ಮನಕ್ಕೆ ಆಗಿರುವ ಮೈಲಿಗೆಯನ್ನು ತೊಳೆಯಲು ಶರಣರ ಚಿಂತನೆ ಅಗತ್ಯ ಎಂದು ಗಾಂಧಿನಗರ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಗಾಂಧಿನಗರದಲ್ಲಿರುವ ಉರಿಲಿಂಗಪೆದ್ದಿ ಮಹಾಸಂಸ್ಥಾನ ಶಾಖಾ ಮಠದಲ್ಲಿ ಭಾನುವಾರ ಆಯೋಜಿಸಿದ್ದ ಶ್ರಾವಣದಲ್ಲಿ ಶರಣರ ಸ್ಮರಣೋತ್ಸವದಲ್ಲಿ ಅವರು ಮಾತನಾಡಿದ ಅವರು, ಶರಣ ಪರಂಪರೆ ಶೀಲದ ಪರಂಪರೆಯೂ ಆಗಿದೆ. ಶರಣರ ಪ್ರಕಾರ ಶೀಲ ಎಂದರೆ ಪರಧನ, ಪರಸ್ತ್ರೀ, ಪರದೈವಕ್ಕೆ ಆಸೆ ಪಡದಿರುವುದು. ಶರಣ ಪರಂಪರೆ ಮನುಷ್ಯ ಸ್ವಚ್ಛವಾಗಿ ಬದುಕಲು ಬೇಕಾದ್ದನ್ನು ತಿಳಿಸಿದೆ. ಶರಣ ಪರಂಪರೆ ಬೇಡುವ ಪರಂಪರೆಯಲ್ಲ. ಬೇಡುವವನು ಶರಣನಲ್ಲ. ಬೇಡುವರಿಲ್ಲದೇ ಬಡವನಾದೇ ಎನ್ನುತ್ತಾರೆ ಶರಣರು. 12ನೇ ಶತಮಾನದಲ್ಲಿ ಸತ್ಯಶುದ್ಧ ಕಾಯಕ ಸಮಾಜವನ್ನು ಶರಣರು ಪ್ರತಿಪಾದಿಸಿದರು. ದೇಹವೇ ದೇಗುಲ ಎಂದ ಬಸವಣ್ಣ ಅಂಗೈ ಮೇಲಿನ ಲಿಂಗವನ್ನು ಬಿಟ್ಟು ಬೇರೆ ಗುಡಿ ಮತ್ತು ಯಾವುದೇ ತೀರ್ಥಕ್ಷೇತ್ರಗಳಿಗೆ ಹೋಗಿ ನಮಸ್ಕಾರ ಮಾಡುವಂತಿಲ್ಲ ಎಂದು ಹೇಳಿದ್ದಾರೆ. ಅನ್ಯದೇವಕ್ಕೆ ಅನ್ಯತೀರ್ಥಕ್ಕೆ ಕೈ ಮುಗಿಯುವುದು ಸ್ವಾಭಿಮಾನವಲ್ಲ ಗುಲಾಮಗಿರಿ ಎನ್ನುತ್ತಾರೆ ಶರಣರು. ನಿಂತಲ್ಲೆ ಕೂಡಲ ಸಂಗನ ಶರಣರ ಕಂಡರೆ ದೇವನೆಂದಿರುವ ಮಾತುಗಳನ್ನು ಸ್ಮರಣೆಯಲ್ಲಿಟ್ಟುಕೊಳ್ಳಬೇಕು ಎಂದು ತಿಳಿಸಿದರು.

ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಸದಾಶಿವಮೂರ್ತಿ ಶರಣ ಚಿಂತನೆ ಕುರಿತು ಮಾತನಾಡಿ, ಶರಣ, ಸಂತರು ಸಾರ್ವಕಾಲಿಕ. ಎಲ್ಲಿಯವರೆಗೂ ಎಲ್ಲ ಮಾದರಿಯ ತಾರತಮ್ಯಗಳು ಇರುತ್ತವೆಯೋ ಅಲ್ಲಿಯವರೆಗೆ ಶರಣರೊಂದಿಗೆ ಚಿಂತನಮಂಥನ ಅಗತ್ಯ. ಮನಸ್ಸಿನ ಮಲಿನತೆ ಶುಚಿಗೆ ಶರಣರ ಚಿಂತನೆಯೇ ಏಕೈಕ ಸಾಧನ. ಬಾಬಾ ಸಾಹೇಬ್, ಡಾ. ಬಿ.ಆರ್. ಅಂಬೇಡ್ಕರ್ ಅವರು ಇತಿಹಾಸ ಪ್ರಜ್ಞೆ ಅವಶ್ಯ ಎನ್ನುತ್ತಾರೆ. ಇವತ್ತು ಪರಂಪರೆಯ ಪ್ರಜ್ಞೆ ಇಲ್ಲ. ಆದರಿಂದಲೇ ತಂದೆ ತಾಯಿಯನ್ನು ಮರೆತು ವಿಲಾಸ ಜೀವನ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದು ಅಪಾಯಕಾರಿ ಎಂದರು.

ಕರ್ಮಯೋಗಿ ಸಿದ್ಧರಾಮೇಶ್ವರ ಜೀವನ ವೃತಾಂತವನ್ನು ವಿವರಿಸಿದ ಅವರು, ಸಿದ್ಧರಾಮೇಶ್ವರ ಬಸವಾದಿ ಪ್ರಮುಖರಲ್ಲಿ ಮೇಲ್ಪಂಕ್ತಿಯ ವಚನಕಾರ. ಕುಡಿ ಒಕ್ಕಲಿಗ ಸಮುದಾಯದ ಅವರು 900 ವರ್ಷಗಳ ಹಿಂದೆಯೇ ಸಾಮಾಜಿಕ ಕಾರ್ಯದಲ್ಲಿ ತೊಡಗಿದ್ದರು. ಇವರ ಸೇವಾ ಕಾರ್ಯಗಳು ಯಾವ ಜಾತಿಗೂ ಸೀಮಿತವಾಗಿರಲಿಲ್ಲ. ಸಿದ್ಧರಾಮೇಶ್ವರರು ತಮ್ಮ ವಚನವೊಂದರಲ್ಲಿ 68 ಸಾವಿರ ವಚನಗಳ ಹಾಡಿ ಹಾಡಿ ಸೋತಿತು ಮನ ಎಂದಿದ್ದಾರೆ. ಆದರೆ 1800 ವಚನಗಳು ಮಾತ್ರ ಲಭ್ಯವಾಗಿವೆ ಎಂದು ಹೇಳಿದರು.

ಇದೇ ವೇಳೆ ಹಿರಿಯರಾದ ಲಕ್ಷ್ಮಮ್ಮ, ಸರೋಜಮ್ಮ ರಾಮಸಿಂಗಪ್ಪ, ಲಕ್ಷ್ಮಮ್ಮ ಮರಲಿಂಗಪ್ಪ, ಸುಶೀಲಮ್ಮ ನಂಜಪ್ಪ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಸಾನ್ನಿಧ್ಯವನ್ನು ಮುಡುಕುತೊರೆ ಶಾಖಾ ಮಠದ ಸಿದ್ದಾಮಶಿವಯೋಗಿ ಸ್ವಾಮಿಜಿ ವಹಿಸಿದ್ದರು. ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು. ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ನಿನಗೆ ಯಾವ ತರಾ ಹೆಂಡತಿ ಬೇಕು?
ಸಿದ್ದ : ಚಂದ್ರನಂತೆ ಇರೋಳು.
ಗುಂಡ : ಚಂದ್ರನಂತೆ ಅಂದರೆ?
ಸಿದ್ದ : ಅಂದರೆ ಅವಳು ರಾತ್ರಿ ಬರಬೇಕು. ಹಗಲು ಹೊರಟು ಹೋಗಬೇಕು.

ಮೈಸೂರು ಮಿತ್ರ

ಸೋಮವಾರ, 26 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

'ಬಹುತೇಕ ಜನರು ದೇವರನ್ನು ಕಲ್ಲಿನಲ್ಲಿಟ್ಟು ನೋಡಿದರು, ಹಲವರು ಬೆಳ್ಳಿಯಲ್ಲಿಟ್ಟು ನೋಡಿದರು, ಇನ್ನು ಕೆಲವರು ಚಿನ್ನದಲ್ಲಿಟ್ಟು ನೋಡಿದರು, ಆದರೆ ದೇವರು ಒಲಿಯುವುದು ಮನಸ್ಸಿಟ್ಟು ಪೂಜಿಸಿದಾಗ ಮಾತ್ರ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗುಡ್ಡ ಕಡಿದು ಹಳ್ಳ ತುಂಬಿಸಿ ನೆಲಸಮ ಮಾಡಿದ ಹಾಗೆ

ನಿಮ್ಮ ಪತ್ರಗಳು

■ ಎಲೆಕ್ಟ್ರಾನಿಕ್ ಸಿಟಿಗೆ ಎಸ್‌ಎಂ ಕೃಷ್ಣ ಹೆಸರೇ ಸರಿ

ಮಾನ್ಯರೆ,



ಮೊನ್ನೆ, ಬೆಂಗಳೂರಿನಲ್ಲಿ ನಡೆದ ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ 109ನೇ ಜನ್ಮದಿನಾಚರಣೆಯ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಗೆ ದೇವರಾಜ ಅರಸು ಸಿಟಿ ಎಂದು ನಾಮಕರಣ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದು ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಬೆಂಗಳೂರಿಗೆ ಎಲೆಕ್ಟ್ರಾನಿಕ್ ಸಿಟಿ ಬರಲು ಕಾರಣಕರ್ತರಾದವರು, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ. ಬೆಂಗಳೂರಿಗೆ ಐಟಿ-ಬಿಟಿ ತಂದು ಇಂದು ಲಕ್ಷಾಂತರ ಸಾಫ್ಟ್‌ವೇರ್ ಇಂಜಿನಿಯರ್‌ಗಳು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿದವರು, ಅಂದು ಎಸ್.ಎಂ.ಕೃಷ್ಣ ಅವರು ಇಲ್ಲದೇ ಹೋಗಿದ್ದರೆ ಬೆಂಗಳೂರು ನಗರ ಇನ್ನೂ 25 ವರ್ಷಗಳ ಹಿಂದೆಯೇ ಉಳಿಯುತ್ತಿತ್ತು. ಎಸ್.ಎಂ.ಕೃಷ್ಣ ಅವರ ಈ ಕೊಡುಗೆ ಚಿರಸ್ಥಾಯಿಯಾಗಿ ಉಳಿಯುತ್ತದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ, ಇಂದು ಬೆಂಗಳೂರು ನಗರ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ನಗರವಾಗಿದೆ. ಇದರ ಕೀರ್ತಿ, ಎಸ್.ಎಂ.ಕೃಷ್ಣ ಅವರಿಗೆ ಸಲ್ಲಬೇಕು. ಡಿ.ದೇವರಾಜ ಅರಸು ಅವರ ಹೆಸರನ್ನು ಬೇರೆ ಯಾವುದಾದರೂ ನಗರಕ್ಕೆ ನಾಮಕರಣ ಮಾಡಲಿ, ಇದಕ್ಕೆ ಯಾರ ಅಭ್ಯಂತರವಿಲ್ಲ. ಆದರೆ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಗೆ ಮಾತ್ರ ಎಸ್.ಎಂ.ಕೃಷ್ಣ ಅವರ ಹೆಸರನ್ನೇ ನಾಮಕರಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**

■ ಮನೆ ಮಾದೇಗೌಡ ಎಂಬ ಬಿರುದು ಸಾರ್ಥಕ

ಮಾನ್ಯರೆ,



'ಮೈಸೂರು ಮಿತ್ರ'ದಲ್ಲಿ ಮಾದೇಗೌಡರ ಬಗ್ಗೆ ಲೇಖನ ಪ್ರಕಟವಾಗಿದೆ. ಅಕ್ಷರಶಃ ನಿಜ. ಮನೆ ಮಾದೇಗೌಡರು ನಿಜವಾಗಿಯೂ ಮನೆ ಮಾದೇಗೌಡರೇ ನಾನೊಬ್ಬ ಬಡ ಅಂಚೆ ನೌಕರ. ಸ್ವಂತ ಮನೆ ಜಾಗ ಜಮೀನು ಯಾವುದೂ ಇರಲಿಲ್ಲ. ಒಮ್ಮೆ ಇಲಾಖೆಯ ಯೂನಿಯನ್‌ನವರ ಬಳಿ ಏನೋ ಮಾತಿಗೆ ಬಂದಾಗ ಈ ವಿಷಯ ಹೇಳಿದೆ. ನನ್ನಿಂದ ಬಿಳಿ ಹಾಳೆಯಲ್ಲಿ ಅರ್ಜಿ ಬರೆಸಿಕೊಂಡು ಅವತ್ತಿನ CITBಗೆ ಕೊಟ್ಟರಂತೆ. ಹೀಗೆ 30 ಜನರಿಂದ ಅರ್ಜಿ ಬರೆಸಿಕೊಟ್ಟರಂತೆ. ಸುಮಾರು 6–7 ತಿಂಗಳ ಮೇಲೆ ನನ್ನ ಮನೆಗೆ ಅಲಾಟ್‌ಮೆಂಟ್ ಲೆಟರ್ ಮುದ್ದಾಂ ಬಂದಿತು. ಅದೇ ಸೈಟ್‌ನಲ್ಲಿ ಮನೆ ಕಟ್ಟಿಕೊಂಡು ವರ್ಷಗಳಿಂದ ವಾಸವಾಗಿದ್ದೇವೆ. ನಾನಾಗಲಿ, ಯೂನಿಯನ್ ಆಗಲಿ ಒಂದು ರೂಪಾಯಿ ಅಕ್ರಮವಾಗಿ ಕೊಟ್ಟಿಲ್ಲ. ಮಾದೇಗೌಡರಿಗೆ ದೇವರು ಯಾವಾಗಲೂ ಒಳ್ಳೆಯದು ಮಾಡಲಿ. ಗಂಗೆಯಷ್ಟು ಪರಿಶುದ್ಧವಾದ ವ್ಯವಹಾರ. ಅಷ್ಟೇಕೆ ಟೈಟಲ್ ಡೀಡ್ ಸಹ ಏನೂ ಮೇಲೆ ಖರ್ಚಿಲ್ಲದೆ ಸಿಕ್ಕಿದೆ. ಮನೆ ಮಾದೇಗೌಡರು ಎಂಬುವ ಬಿರುದು ಸಾರ್ಥಕ. ಅಂತ ಸಂಸ್ಥೆ ಈಗ ಹಾದಿರಂಪ ಬೀದಿರಂಪವಾಗಿರುವುದು ದುಃಖದ ಸಂಗತಿ. ಇನ್ನು ಮುಂದಕ್ಕಾದರೂ ಅಕ್ಷರಶಃ ಪ್ರಾಮಾಣಿಕರನ್ನು ನೇಮಿಸಲಿ. **–ಅಕ್ಕಿಹೆಬ್ಬಾಳು ವೆಂಕಟೇಶ್**

■ ಕನ್ನಡ ಧಾರಾವಾಹಿಗಳ ಕಥೆಗೆ ಬರವೇ!?

ಮಾನ್ಯರೆ,

ಕನ್ನಡದಲ್ಲಿ ಹಲವಾರು ಟಿವಿ ಚಾನಲ್‌ಗಳು ಇವೆ. ಈ ಚಾನೆಲ್‌ಗಳಲ್ಲಿ ಮನರಂಜನೆಯ ಹೆಸರಿನಲ್ಲಿ ಹಲವು ಧಾರಾವಾಹಿಗಳು ಪ್ರತಿನಿತ್ಯ ಪ್ರಸಾರವಾಗುತ್ತಿವೆ. ಎಲ್ಲಾ ಧಾರಾವಾಹಿಗಳ ಪ್ರಮುಖ ಉದ್ದೇಶ ಕಥೆಯನ್ನು ಎಳೆಯುವುದು. ಹೀಗೆ ಕಥೆಯನ್ನು ಎಳೆದು ಎಳೆದು ತಿಂಗಳುಗಟ್ಟಲೆ ವರ್ಷಗಟ್ಟಲೆ ಎಪಿಸೋಡ್ ಮಾಡಿ ದೃಶ್ಯ ಮಾಧ್ಯಮದಲ್ಲಿ ಅವುಗಳನ್ನು ಪ್ರಸಾರ ಮಾಡುವುದೇ ಆಗಿದೆ ಅಂತ ಅನಿಸುತ್ತಿದೆ!

ಏಕೆಂದರೆ ಇತ್ತೀಚಿನ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ಬಹುಪಾಲು ಧಾರಾವಾಹಿಗಳ ಕಥೆಗಳನ್ನು ಗಮನಿಸಿದಾಗ ಮನಸ್ಸಿಗೆ ಖೇದವಾಗುತ್ತದೆ. ಕಾರಣ ಹೆಚ್ಚಿನ ಧಾರಾವಾಹಿಗಳ ಕಥೆಯ ತಿರುಳು ಮನೆ ಮುರಿಯುವುದು, ಅತ್ತೆ ಸೊಸೆ ಜಗಳ, ಆಸ್ತಿ ಲಪಟಾಯಿಸುವುದು, ಒಬ್ಬರಿಗೊಬ್ಬರು ದ್ವೇಷ ಅಸೂಯೆ ಮತ್ಸರ ಸಾಧಿಸುವುದು, ಒಂದಕ್ಕಿಂತ ಹೆಚ್ಚು ಮದುವೆ ಮಾಡಿಕೊಂಡು ಪಡಬಾರದ ಪಾಡು ಪಡುವುದು.... ಹೀಗೆ ಸಾಲು ಸಾಲು ಕಥೆಗಳನ್ನು ಧಾರಾವಾಹಿಗಳ ಹೆಸರಿನಲ್ಲಿ ಕೋಟ್ಯಾಂತರ ನೋಡುಗರ ಮನೆ ಮನಗಳಲ್ಲಿ ನಿತ್ಯ ಪ್ರಸರಿಸಿ ವೀಕ್ಷಕರ ಮನಸ್ಸಿನಲ್ಲಿ ನಕಾರಾತ್ಮಕ ಭಾವನೆಗಳನ್ನು ಬಿಂಬಿಸುತ್ತಿರುವುದು ಎಷ್ಟು ಸರಿ? ಬರೀ ನಕಾರಾತ್ಮಕ ಅಂಶಗಳನ್ನು ತುರುಕಿ ಧಾರಾವಾಹಿಗಳನ್ನು ಪ್ರತಿನಿತ್ಯ ಮನೆಮಂದಿಗೆ ತೋರಿಸಿದರೆ, ವೀಕ್ಷಕರ ಮನಸ್ಸಲ್ಲೂ ಕೆಟ್ಟ ಪರಿಣಾಮ ಬೀರಿದಂತಾಗುವುದಿಲ್ಲವೇ?

ಕನ್ನಡ ಧಾರಾವಾಹಿಗಳಲ್ಲಿ ಉತ್ತಮ ಕಥಾಹಂದರವುಳ್ಳ ಒಳ್ಳೆಯ ಕಥೆಗೆ ಬರವೇ? ಭಕ್ತಿಭಾವ, ಹಾಸ್ಯ, ಹೊಂದಾಣಿಕೆ, ಸಾಮರಸ್ಯ ಹಾಗೂ ಸುಂದರ ಸಾಂಸಾರಿಕ ನೈತಿಕ ಮೌಲ್ಯಗಳಿಗೆ ಒತ್ತುಕೊಟ್ಟು, ಉತ್ತಮ ಕಥೆಗಳಿಗೆ ಆದ್ಯತೆ ನೀಡಿದರೆ ಮನೆ ಮಂದಿಯೆಲ್ಲಾ ಒಟ್ಟಿಗೆ ಕೂತು ಯಾವುದೇ ಕ್ಲೇಶವಿಲ್ಲದೇ ಧಾರಾವಾಹಿಗಳನ್ನು ನೋಡುವ ಸೌಭಾಗ್ಯ ಮನೆಮಂದಿಗೆ ಸಿಗುತ್ತದೆ. ಈ ನಿಟ್ಟಿನಲ್ಲಿ ಧಾರಾವಾಹಿಗಳ ಕಥೆಯನ್ನು ಆಯ್ಕೆ ಮಾಡುವಲ್ಲಿ ಸೂಕ್ತ ಹಾಗೂ ಯೋಗ್ಯ ಆಯ್ಕೆಗಳತ್ತ ಸಂಬಂಧಪಟ್ಟವರು ಗಮನಹರಿಸಿದರೆ ಎಲ್ಲರಿಗೂ ಒಳಿತು ಅನಿಸುತ್ತದೆ. **–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

■ ಜಯಪುರಕ್ಕೆ ಬೇಕು ಸರ್ಕಾರಿ ಕಾಲೇಜು

ಮಾನ್ಯರೆ,

ಮೈಸೂರು ಜಿಲ್ಲೆಯ ಜಯಪುರ ಹೋಬಳಿ ಗ್ರಾಮವು ಸುತ್ತಮುತ್ತಲಿನ ಗ್ರಾಮಗಳಿಗೆ ಆರ್ಥಿಕ ವಹಿವಾಟಿಗೆ ಕೇಂದ್ರವಾಗಿದೆ. ಗೃಹ ನಿರ್ಮಾಣದ ಹಾಗೂ ಅಭಿವೃದ್ಧಿಯ ಹೆಸರಿನಲ್ಲಿ ಈಗಾಗಲೇ ಸುತ್ತಮುತ್ತಲಿನ ಗ್ರಾಮದ ಜನರು ತಮ್ಮ ಜಮೀನನ್ನು ಮಾರಿಕೊಂಡಿದ್ದಾರೆ. ದಶಕಗಳಿಂದಲೂ ಇಲ್ಲಿಯ ಸುತ್ತಮುತ್ತಲಿನ ಗ್ರಾಮಗಳ ವಿದ್ಯಾರ್ಥಿಗಳು ಹಾಗೂ ಎಚ್.ಡಿ.ಕೋಟೆಯ ಬಹುಪಾಲು ವಿದ್ಯಾರ್ಥಿಗಳು ಕಾಲೇಜು ಶಿಕ್ಷಣಕ್ಕಾಗಿ ಮೈಸೂರಿಗೆ ಬರಬೇಕಾಗಿದೆ. ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸೇರಿರುವ ಜಯಪುರ ಗ್ರಾಮದಲ್ಲಿ ಹತ್ತನೇ ತರಗತಿವರೆಗೆ ಶಿಕ್ಷಣ ಪಡೆಯಲು ಸರ್ಕಾರಿ ಶಾಲೆಯಿದೆ. ಈ ಕ್ಷೇತ್ರದಿಂದ ಸತತ ಮೂರು ಬಾರಿ ಆಯ್ಕೆ ಆದ ಶಾಸಕ ಜಿ.ಟಿ.ದೇವೇಗೌಡರು ಈ ಕ್ಷೇತ್ರದ ಅಭಿವೃದ್ಧಿಯತ್ತ ಕೊಂಡೊಯ್ಯುತ್ತಾರೆ ಎಂಬ ಭರವಸೆ ಈ ಕ್ಷೇತ್ರದ ಜನತೆಗಿದೆ. ಶಾಸಕ ಜಿ.ಟಿ.ದೇವೇಗೌಡರು ಈ ಕ್ಷೇತ್ರದ ವಿದ್ಯಾರ್ಥಿಗಳ ಭವಿಷ್ಯದ ಒಳಿತಿಗಾಗಿ ಜಯಪುರ ಗ್ರಾಮದಲ್ಲಿ ಸರಕಾರಿ ಕಾಲೇಜನ್ನು ಸ್ಥಾಪಿಸಬೇಕಾಗಿ ಮನವಿ. ಇಲ್ಲಿ ಸರಕಾರಿ ಕಾಲೇಜನ್ನು ಸ್ಥಾಪಿಸಿದರೆ ರೈತಾಪಿ ಜನರ ಮಕ್ಕಳು ಪದವಿ ಶಿಕ್ಷಣದ ಜೊತೆಗೆ ತಮ್ಮ ವ್ಯವಸಾಯದಲ್ಲೂ ಗಮನಹರಿಸಲು ಸಹಾಯಕವಾಗುತ್ತದೆ. ಕಾಲೇಜು ಶಿಕ್ಷಣಕ್ಕಾಗಿ ದೂರದ ಮೈಸೂರಿಗೆ ಪ್ರಯಾಣಿಸುವ ಪ್ರಯಾಸವು ತಪ್ಪುತ್ತದೆ. ಜಿ.ಟಿ.ದೇವೇಗೌಡರು ಈ ಕ್ಷೇತ್ರದ ಬಹುದಿನಗಳ ಈ ಕೋರಿಕೆಯನ್ನು ಈಡೇರಿಸುತ್ತಾರೆ ಎಂಬ ಆಶಯ ನಮ್ಮ ರೈತಾಪಿ ಜನರಲ್ಲಿದೆ. **–ಮಂಜೇಶ್ ದೇವಾಳ್ಳೆ, ಮೈಸೂರು.**

ನೇಗಿಲ ಯೋಗಿಯ ಬದುಕು





ದೇಶದಲ್ಲಿ ಇಲ್ಲಿವರೆಗೆ ಬಗೆಹರಿಯದ ಸಮಸ್ಯೆಯೊಂದು ಜೀವಂತವಿದೆ ಹಾಗೂ ಮುಂದೆಯೂ ಜೀವಂತವಾಗಿಯೇ ಇರುವುದೆಂದರೆ ಅದು ಅನ್ನದಾತನು ನಂಬಿರುವ ಕೃಷಿಯ ಬದುಕಿನ ಸಮಸ್ಯೆ.

ಬಗೆಹರಿಸಬಹುದಾದ ಸಮಸ್ಯೆಯಾದರೂ ಬಗೆಹರಿಸುವುದಿಲ್ಲ. ಇಚ್ಛಾಶಕ್ತಿಯ ಕೊರತೆಯಿಂದ ಎಂದೆಂದಿಗೂ ಬಗೆಹರಿಯದು. 40 ವರ್ಷಗಳ ಹಿಂದೆ ನಾನು ಶಾಲೆಯಲ್ಲಿ ಸಮಾಜಶಾಸ್ತ್ರದ ಪಾಠ ಓದುತ್ತಿದ್ದ ಕಾಲದಿಂದಲೂ ಹಾಗೆಯೇ ಜೀವಂತವಿದೆ. ಅಂದಿನ ಪಾಠದಲ್ಲಿ 'ರೈತ ದೇಶದ ಬೆನ್ನೆಲುಬು' ಎಂದು ಓದಿದ್ದು ಮನಸ್ಸಿನಾಳದಲ್ಲಿ ಅಳಿಸಲಾಗದಂತೆ ಕುಳಿತಿದೆ. ಕಾರಣ ನಾನೂ ಕೂಡ ನೋವಿನಲ್ಲೇ ಬದುಕಿನ ಬಂಡಿ ಎಳೆದು ಜೀವತೆಯ್ದ ರೈತನ ಮಗ. ಮನುಷ್ಯನ ಅಸ್ತಿತ್ವಕ್ಕೆ ಅಗತ್ಯವಾದ ಆಹಾರವನ್ನು ಉತ್ಪಾದಿಸಿ ಕೊಡುವ ಪುಣ್ಯದ ಕೆಲಸ ಮಾಡುವ ವೃತ್ತಿಯನ್ನು ಮಾಡಿಕೊಂಡು ಬರುತ್ತಿರುವ ಅನ್ನಬ್ರಹ್ಮ. ಆದರೆ ಇವನು ಸಾಲದಲ್ಲೇ ಹುಟ್ಟಿ ಸಾಲದಲ್ಲೇ ಸಾಯುತ್ತಿರುವುದು ದುರ್ದೈವ. ಮಾಂಸಖಂಡಗಳಿಲ್ಲದ ಕೇವಲ ಎಲುಬುಗಳು ಮಾತ್ರ ಇರುವ ದೇಹ.

ಕೆನಡಾದ ಹೆಸರಾಂತ ಲೇಖಕರು, ಮೆಂಟರ್, ವಾಗ್ಮಿಗಳು ಹಾಗೂ ಮಿಗಿಲಾಗಿ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಬ್ರೆಂಡಾ ಸ್ಲೋಪ್ ಹೆಸರಿನ ಮಹಿಳೆಯು ಹೇಳಿದ ಮಾತಿದೆ; "ಜೀವನದಲ್ಲಿ ಒಮ್ಮೊಮ್ಮೆ ವೈದ್ಯರು, ಲಾಯರು, ಪೊಲೀಸ್ ಮತ್ತು ಉಪದೇಶ ನೀಡುವವರುಬೇಕೆಂದು. ಆದರೆ ಪ್ರತಿನಿತ್ಯವೂ ದಿನಕ್ಕೆ ಮೂರು ಬಾರಿ ನಿಮಗೆ ರೈತ ಬೇಕೆಂದು ನನ್ನ ಅಜ್ಜ ಹೇಳುತ್ತಿದ್ದರು ಎಂಬುದಾಗಿ ಅಜ್ಜ ಹೇಳಿದ್ದು ನೂರಕ್ಕೆ ನೂರು ಸತ್ಯವಾದ ಮಾತಲ್ಲವೆ? ರೈತ ಬೆಳೆದ ಅನ್ನವನ್ನು ತಾನೇ ನಾವುಗಳು ಮೂರೊತ್ತು ತಿನ್ನವುದು. ನಮಗೆ ಅವನು ಬೇಕು, ನಾವು ಅವನಿಗೂ ಬೇಕಾಗಬೇಕಲ್ಲವೇ?.

ದೇಶದ ಜನಸಂಖ್ಯೆಯ ಅಂದಾಜು ಶೇ.60ರಷ್ಟು ಜನ ವ್ಯವಸಾಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ಕಸುಬಿಗೆ ಯಾವೊಂದು ಸರ್ಕಾರಗಳೂ ಪೂರ್ಣ ಪ್ರಮಾಣದಲ್ಲಿ ಸ್ಪಂದಿಸುವುದಿಲ್ಲ. ಹೋಗಲಿ ಪ್ರಕೃತಿಯಾದರೂ ಸ್ಪಂದಿಸುತ್ತದೆಯೇ? ಇಲ್ಲವೇ ಇಲ್ಲ. 'ಕಂಡುಗ ಬಿತ್ತಿ ಕಂಡುಗ ಬೆಳೆಯುವ' ವ್ಯವಸಾಯದಲ್ಲಿ ಲಾಭವನ್ನೇ ಕಾಣದ ರೈತನಿಗೆ ವ್ಯಾಪಾರದಲ್ಲಿ ಸಿಗುವ ಗ್ಯಾರಂಟಿ ಲಾಭ ಇವನಿಗಿಲ್ಲ. ದೇಶದ ಆರ್ಥಿಕತೆಯ ಮೇಲೆ ಕೃಷಿ ಕ್ಷೇತ್ರದ ಪಾತ್ರ ಬಹಳವೇ ಗುರುತರವಾದದ್ದು. 1980–81ರಲ್ಲಿ ಕೃಷಿ ಕ್ಷೇತ್ರದಿಂದ ಜಿಡಿಪಿಯ ಷೇರು ಶೇ.35.70 ಇದ್ದದ್ದು ಪ್ರಸ್ತುತ ಶೇ.14ಕ್ಕೆ ಇಳಿದಿರುವುದಕ್ಕೆ ಕಾರಣ ಕೃಷಿಗೆ ಸಿಗಬೇಕಾದ ಮಾನ್ಯತೆ ಸಿಗದಿರುವುದೇ ಆಗಿರುತ್ತದೆ. ಎಲ್ಲಾ ಸರ್ಕಾರಗಳು ಕೃಷಿ ಕ್ಷೇತ್ರವನ್ನು ಮುಂದಿಟ್ಟುಕೊಂಡು ರೈತರ ಹೆಸರಿನಲ್ಲಿ ರಾಜಕೀಯ ಮಾಡುತ್ತವೆಯಾದರೂ ಅಧಿಕಾರ ಸಿಕ್ಕ ನಂತರ ನಡೆದುಕೊಳ್ಳುವುದು ಬೇರೆಯದೇ ಆಗಿರುತ್ತದೆ.

ದುಡಿಮೆಯಲ್ಲಿ ಲಾಭವನ್ನು ಪಡೆಯುವುದು ಕನಸಿನ ಮಾತಾದರೂ ಬದುಕು ಹೊರೆಯಲು ಬೆಂಕಿ ಬಿಸಿಲೆನ್ನದೆ ಹೆಣಗಾಡುವ ರೈತ ಮಕ್ಕಳಿಗೆ

> ಒಮ್ಮೆ ಅತಿವೃಷ್ಟಿ ಮತ್ತೊಮ್ಮೆ ಅನಾವೃಷ್ಟಿ, ಜಮೀನಲ್ಲಿ ಸೊಂಪಾದ ಬೆಳೆ ಬಂದಿದೆ. ಇನ್ನೇನು ಕೊಯ್ಲು ಪ್ರಾರಂಭಿಸಬೇಕು ಎಂದಾಗ ಅತಿಯಾದ ಮಳೆ ಸುರಿದು ಫಸಲನ್ನು ಮನೆಯವರೆಗೆ ತರಲು ಬಿಡದು. ವಾತಾವರಣ ಸಹಕರಿಸಿ ಮನೆಗೆ ತಂದು ಬಂಪರ್ ಬೆಳೆಯ ಖುಷಿಯಲ್ಲಿ ಕೈತುಂಬಾ ಹಣ ನೋಡುವ ನಿರೀಕ್ಷೆಯಲ್ಲಿದ್ದರೆ ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಚಿತಾವಣೆಯಿಂದ ಬೆಲೆ ಕುಸಿದಿರುತ್ತದೆ. ಎಲ್ಲವನ್ನೂ ಮಾರಿದರೂ ಖರ್ಚಾದ ಹಣದಷ್ಟಾದರೂ ಸಿಕ್ಕಿತೆ? ಇಲ್ಲ. ಮಾಡಿದ ಸಾಲ ತೀರಿಸುವುದು ಹೇಗೆ? ಕುಟುಂಬದ ನಿರ್ವಹಣೆ ಹೇಗೆ?.

ಮದುವೆಗೆ ಹೆತ್ತವರು ಹೆಣ್ಣು ಕೊಡದೇ ಇರುವುದಕ್ಕೇ ಇದೇ ಕಾರಣ. ಏಕೆಂದರೆ ರೈತನಿಗೆ ನೌಕರಿಯಲ್ಲಿ ಇರುವವರಿಗೆ ಇರುವಷ್ಟು ಸೌಲಭ್ಯಗಳು ಹಾಗೂ ಬದುಕಿನ ಭದ್ರತೆ ಇಲ್ಲದಿರುವುದು.

ರೈತನ ಜೊತೆ ಜೊತೆಗೆ ಅಂಟಿಕೊಂಡು ಬಂದಿರುವ ಸಾಲದೊಟ್ಟಿಗಿನ ಸಮಸ್ಯೆಗಳ ಮೂಟೆಯು ಯಾವಾಗಲೂ ಇವನ ಬೆನ್ನ ಮೇಲೆಯೇ ಕುಳಿತಿರುತ್ತದೆ. ಇವನ ಬೆನ್ನೆಲುಬು ಗಟ್ಟಿ ಇದೆಯೆಂದು ಸಮಸ್ಯೆಗಳಿಗೂ ತಿಳಿದಂತಿದೆ. ದೇವರಿಗೆ ಧನ್ಯವಾದ ಹೇಳಲೇಬೇಕು ಕಷ್ಟಗಳನ್ನು ಎದುರಿಸುವ ಶಕ್ತಿ ಸಾಮರ್ಥ್ಯವನ್ನು ರೈತನಿಗೆ ಮಾತ್ರ ಕೊಟ್ಟಷ್ಟು ಬೇರೆ ಯಾರಿಗೂ ಕೊಟ್ಟಿಲ್ಲ. ಮಳೆ ಬಂತೆಂದು ಬೆವರು ಸುರಿಸಿ ಉಳುಮೆ ಮಾಡಿ ಬಿತ್ತಿದ್ದು ಕೈಕೊಟ್ಟ ಮಳೆಯಿಂದ ಮೊಳಕೆ ಬರದಿದ್ದರೂ ನಂಬಿರುವ ಭೂತಾಯಿನ್ನು ಶಪಿಸುವುದಿಲ್ಲ, ಮತ್ತದೇ ಕಾಯಕ ಮಾಡಿ ಬೆಳೆ ತೆಗೆದು ದೇಶಕ್ಕೆ ಅನ್ನ ನೀಡದೆ ಬಿಡುವುದಿಲ್ಲ.

ಒಮ್ಮೆ ಅತಿವೃಷ್ಟಿ ಮತ್ತೊಮ್ಮೆ ಅನಾವೃಷ್ಟಿ, ಜಮೀನಿನಲ್ಲಿ ಸೊಂಪಾದ ಬೆಳೆ ಬಂದಿದೆ ಇನ್ನೇನು ಕೊಯ್ಲು ಪ್ರಾರಂಭಿಸಬೇಕು ಎಂದಾಗ ಅತಿಯಾದ ಮಳೆ ಸುರಿದು ಫಸಲನ್ನು ಮನೆಯವರೆಗೆ ತರಲು ಬಿಡದು. ವಾತಾವರಣ ಸಹಕರಿಸಿ ಮನೆಗೆ ತಂದು ಬಂಪರ್ ಬೆಳೆಯ ಖುಷಿಯಲ್ಲಿ ಕೈತುಂಬಾ ಹಣ ನೋಡುವ ನಿರೀಕ್ಷೆಯಲ್ಲಿದ್ದರೆ ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಚಿತಾವಣೆಯಿಂದ ಬೆಲೆ ಕುಸಿದಿರುತ್ತದೆ. ಎಲ್ಲವನ್ನೂ ಮಾರಿದರೂ ಖರ್ಚಾದ ಹಣದಷ್ಟಾದರೂ ಸಿಕ್ಕಿತೆ? ಇಲ್ಲ. ಮಾಡಿದ ಸಾಲ ತೀರಿಸುವುದು ಹೇಗೆ? ಕುಟುಂಬದ ನಿರ್ವಹಣೆ ಹೇಗೆ?.

ನೆನಪಿದೆ ಬಹುಶಃ ಜೀವಂತ ಇರುವವರೆಗೂ ಅಳಿಸಿ ಹೋಗದು, ಬೇಸಿಗೆ ಬೆಳೆಯಾದ ಕಡ್ಲೆಕಾಯಿ ಅಥವಾ ಸುಗ್ಗಿ ಕಾಲದಲ್ಲಿ ಮಾರಿದ ಭತ್ತದ ಹಣವನ್ನು ತೆಗೆದುಕೊಂಡು ನನ್ನಪ್ಪ ಮನೆಗೆ ತಂದಾಗ ನಮಗೆ ಸಂಭ್ರಮ. ಕಾರಣ ಆಗ ಮಾತ್ರ ಮನೆಮಂದಿಗೆಲ್ಲಾ ಬಟ್ಟೆಗಳು, ಹಣ್ಣು ಮತ್ತು ಸಿಹಿತಿಂಡಿಗಳನ್ನು ತರುತ್ತಿದ್ದದ್ದು. ಈಗಲೂ ರೈತ ಕುಟುಂಬದಲ್ಲಿ ಅದೇ ಪದ್ಧತಿ ನಡೆದುಕೊಂಡು



ಮಿರ್ಲೆ ಚಂದ್ರಶೇಖರ
ಮೊ: 9916129654

ಬರುತ್ತಿದೆ. ಇತ್ತೀಚೆಗೆ ಹೈನುಗಾರಿಕೆ ಪ್ರಾರಂಭವಾದ ಮೇಲೆ ಕೆಲವರಲ್ಲಿ ಸುಧಾರಿಸಿರಬಹುದು. ಕಡ್ಲೆಕಾಯಿ ಫಸಲಿನ ಕಾಲವದು. ಬೆಳೆ ಚೆನ್ನಾಗಿಯೇ ಆಗಿ ಮಾರಾಟ ಮಾಡಲು ನನ್ನ ಅಪ್ಪ ಮೈಸೂರಿನ ಆರ್‌ಎಂಸಿಗೆ ನಿತ್ಯವೂ ಸಂಚರಿಸುತ್ತಿದ್ದ ಲೈನ್ ಲಾರಿಯಲ್ಲಿ ಒಂದಷ್ಟು ಮೂಟೆಗಳನ್ನು ಕಳುಹಿಸಿದರು. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿದ್ದ ನಾನು ರಜೆ ಕಾಲವಾದ್ದರಿಂದ ಅಪ್ಪನೊಂದಿಗೆ ಮೈಸೂರನ್ನು ನೋಡುವ ಆಸೆಗೆ ಹೋಗಿದ್ದೆ.

ಮಾರುಕಟ್ಟೆಯ ಪ್ರಾಂಗಣದ ಉದ್ದಕ್ಕೂ ರೈತರು ಮಾರಲು ತಂದಿದ್ದ ದವಸಧಾನ್ಯಗಳನ್ನು ಗುಡ್ಡೆ ಹಾಕಿ ಇವುಗಳ ಬೆಲೆಯನ್ನು ನಿರ್ಧರಿಸುವ ಅಧಿಕಾರಿಗಳಿಗೆ ಮತ್ತು ಮಧ್ಯವರ್ತಿಗಳಿಗಾಗಿ ರಾಶಿಯ ಪಕ್ಕದಲ್ಲಿ ನಿಂತು ಕಾಯುತ್ತಿದ್ದರು. ಅಂದು ಪ್ರತೀ ರಾಶಿಯ ಮೇಲೆ ಅವುಗಳ ಕ್ವಾಲಿಟಿ ಆಧರಿಸಿ ದರಗಳನ್ನು ಬರೆದು ಚೀಟಿ ಇಟ್ಟು ಹೋದರು. ಅವರುಗಳು ಯಾರೆಂದು ಸರಿಯಾಗಿ ತಿಳಿಯದ ವಯಸ್ಸು. ಅವರುಗಳ ನಿರ್ಧರಿಸಿದ ಬೆಲೆಗೆ ಮಾರಾಟ ಮಾಡಬಹುದಿತ್ತು ಇಲ್ಲವೇ ನಾಳೆ ನಿರ್ಧರಿಸಬಹುದಾದ ದರಕ್ಕೆ ಕಾಯ್ದು ನೆಲಬಾಡಿಗೆ ತೆತ್ತು ಕಾಯಬೇಕಾಗಿತ್ತು. ಅಂದು ನಿರ್ಧರಿಸಿದ ಬೆಲೆಯು ತೀರಾ ಕಡಿಮೆ ಇದ್ದುದ್ದರಿಂದ ನನ್ನಪ್ಪನ ಮುಖ ಸಪ್ಪೆಗಾಯಿತು. ಸರಿ ನಾಳೆವರೆಗೆ ಇರಲು ನಿರ್ಧರಿಸಿ ಉಳಿದುಕೊಂಡರು. ಮರುದಿನ ನೀಡಿದ ಬೆಲೆಯು ಕಡಿಮೆಯೋ ಅಥವಾ ಹೆಚ್ಚೋ ತಿಳಿಯದಾಯಿತು ಮತ್ತೂ ಒಂದು ದಿನ ಇರಲಾರದೆ ಸಿಕ್ಕ ದರಕ್ಕೆ ಮಾರಿದರು. ಒಟ್ಟಿನಲ್ಲಿ ಅವರ ಹಾವಭಾವಗಳನ್ನು ನೋಡಿದರೆ ಸೂಕ್ತ ಬೆಲೆ ಸಿಕ್ಕಿಲ್ಲವೆಂಬುದನ್ನು ಊಹಿಸಿಕೊಂಡೆ.

ಕಡಿಮೆ ಅವಧಿಯಲ್ಲಿ ಯಾವೊಂದು ಶ್ರಮವಿಲ್ಲದೆ ದಲ್ಲಾಳಿಗಳು ಕೈ ಬದಲಾವಣೆಯಲ್ಲಿ ಮಾಡಿಕೊಳ್ಳುವ ಲಾಭ ವರ್ಷಪೂರ ಶ್ರಮವಹಿಸಿ ದುಡಿದ ರೈತನಿಗೆ ಸಿಗುವುದಿಲ್ಲವಲ್ಲ ಎಂತಹ ದುರಂತ ವ್ಯವಸ್ಥೆ ನಮ್ಮದು.

ಕೃಷಿಯ ಅಭಿವೃದ್ಧಿಗಾಗಿ ಸಾಕಷ್ಟು ಸಂಶೋಧನೆಗಳು ನಡೆದಿವೆ. ರೈತನಿಗೆ ಆಗುವ ತೊಂದರೆಗಳು ಎದುರಿಸುವ ಸಮಸ್ಯೆಗಳು ಹಾಗೂ ಪರಿಹಾರ ಇತ್ಯಾದಿಗಳ ಕುರಿತು ಲಕ್ಷಲಕ್ಷ ಪುಟಗಳ ವರದಿಗಳು ತಜ್ಞರಿಂದ ಹೊರಬಂದಿವೆ. ಸಾವಿರಾರು ಲೇಖನಗಳು ಪ್ರಕಟವಾಗಿವೆ. ಚಳವಳಿಗಳು, ಹೋರಾಟಗಳು ನಡೆದಿವೆ. ಕೃಷಿಯ ಅಭಿವೃದ್ಧಿಗಾಗಿ ಹಾಗೂ ರೈತರ ಸಹಾಯಕ್ಕಾಗಿ ಸರ್ಕಾರದಲ್ಲಿ ಕೃಷಿ ಇಲಾಖೆ, ಅದಕ್ಕೊಬ್ಬರು ಮಂತ್ರಿ, ಕಾರ್ಯದರ್ಶಿಗಳು, ಕೃಷಿ ಅಧಿಕಾರಿಗಳು ಹಾಗೂ ಸಾವಿರಾರು ಫೀಲ್ಡ್ ಆಫೀಸರ್‌ಗಳು ಇದ್ದಾರೆ. ರೈತನ ಅಭಿವೃದ್ಧಿಗಾಗಿ ಒಂದು ಇಲಾಖೆಯೇ ಕಾರ್ಯ ನಿರ್ವಹಿಸುತ್ತಿದ್ದರೂ ಅನ್ನದಾತ ಸುಖವಾಗಿದ್ದಾನೆಯೇ?.

ಕೃಷಿ ವಿಜ್ಞಾನಿ ಭಾರತ ರತ್ನ ಎಂ.ಎಸ್.ಸ್ವಾಮಿನಾಥನ್ ಅವರು ಹೇಳಿರುವಂತೆ "ಕೃಷಿ ತಪ್ಪಿದರೆ ಬೇರೆ ಯಾವೂದೂ ಸರಿಯಾಗಲು ಅವಕಾಶವಿಲ್ಲ". ನಮ್ಮದು ಕೃಷಿ ಪ್ರಧಾನವಾದ ದೇಶ ಕೃಷಿಯೇ ಮೂಲೆಗುಂಪಾದರೆ ಇತರೆ ಕ್ಷೇತ್ರಗಳ ಗತಿಯೇನು?. ಕುವೆಂಪು ಅವರ ಸಂದೇಶದಂತೆ "ಯಾರೂ ಅರಿಯದ ನೇಗಿಲ ಯೋಗಿಯೆ ಲೋಕಕೆ ಅನ್ನವನೀಯುವನು ಹೆಸರನು ಬಯಸದೆ ಅತಿಸುಖ ಗಳಿಸದೆ ದುಡಿದವನು ಗೌರವ ಕಾಶಿಸದೆ ನೇಗಿಲ ಕುಲದೊಳಗಡಗಿದೆ ಕರ್ಮ ನೇಗಿಲ ಮೇಲೆಯೆ ನಿಂತಿದೆ ಧರ್ಮ ಉಳುವ ಯೋಗಿಯ ನೋಡಲ್ಲಿ".

ಪುಂಗಿ ಎಷ್ಟೇ ಊದಿದರು ಅದರ ಶಬ್ದ ಯಾರಿಗೆ ಮುಟ್ಟಬೇಕೋ ಅವರಿಗೆ ತಲುಪುವುದೇ ಇಲ್ಲ. ಶೋಷಣೆಯ ವಿರುದ್ಧ ರೈತ ಚಳುವಳಿಗಳು ಹೋರಾಟಗಳು ನಿರಂತರವಾಗಿ ನಡೆಯುತ್ತಲೇ ಇವೆಯಾದರೂ ಯಶ ಕಾಣುತ್ತಿಲ್ಲ. ಸಮಸ್ಯೆಗಳ ಪಟ್ಟಿಯನ್ನು ಮುಂದಿಟ್ಟು ನಡೆಯುವ ಬೇರೆ ಕ್ಷೇತ್ರಗಳ ಚಳವಳಿಗಳು ಫಲ ಕಂಡುಬಿಡುತ್ತವೆ. ಆದರೆ ಇಲ್ಲಿ ಗೆಲುವು ಕಾಣುತ್ತಿಲ್ಲ ಕಾರಣ ಏನು?.

ರೈತರಿಗೆ ಸ್ವಾಭಿಮಾನದ ದೀಕ್ಷೆ ನೀಡಿದ ಹಸಿರು ಸೇನಾನಿ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರು ಕಳಪೆ ಬೀಜ, ಗೊಬ್ಬರಗಳು, ಜಾಗತೀಕರಣ ಮತ್ತು ಕುಲಾಂತರಿ ತಳಿಗಳಿಂದ ಭವಿಷ್ಯದಲ್ಲಿ ಕೃಷಿಗೆ ಎದುರಾಗಬಹುದಾದ ಸಮಸ್ಯೆಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟು ರೈತರನ್ನು ಜಾಗೃತಗೊಳಿಸುತ್ತಿದ್ದರು. ಭಾರತದ ರೈತರು ಸಾಲಗಾರರಲ್ಲ ಸರಕಾರವೇ ಅವರಿಗೆ ಬಾಕಿದಾರ, ರೈತರಿಗೆ ಸಾಲ ಬೇಡ, ಬೆಳೆಗಳಿಗೆ ನ್ಯಾಯವಾದ ಬೆಲೆ ಕೊಡಲಿ, ದೊಡ್ಡ ದೊಡ್ಡ ಕೈಗಾರಿಕೆಗಳು ಬೇಡ, ಗ್ರಾಮ ಕೈಗಾರಿಕೆಗಳು ಬೇಕು, ದೊಡ್ಡ ನೀರಾವರಿ ಯೋಜನೆಗಳು ಸಾಕು, ಸಣ್ಣ ಸಣ್ಣ ನೀರಾವರಿ ಯೋಜನೆಗಳು ಬೇಕು. ಹೀಗೆ ಹತ್ತು ಹಲವಾರು ವಿಷಯಗಳನ್ನು ಮುಂದಿಟ್ಟು ರೈತ ಚಳುವಳಿಯನ್ನು ಸ್ವಾತಂತ್ರ್ಯ ಚಳುವಳಿಯ ರೀತಿ ಬಹುದೊಡ್ಡ ಮಟ್ಟದಲ್ಲಿ ಬೆಳೆಸಿದರು. ಊರಿನೊಳಕ್ಕೆ ಬ್ಯಾಂಕಿನವರು ಸರ್ಕಾರಿ ಅಧಿಕಾರಿಗಳು ಪ್ರವೇಶಿಸಲು ಹೆದರುತ್ತಿದ್ದರು. ಊರ ಮುಂದಿನ ಹೆಬ್ಬಾಗಿಲ ಬಳಿ ಹಸಿರು ವರ್ಣದ ಎಚ್ಚರಿಕೆಯ ಫಲಕಗಳು ಹೈ ವೋಲ್ಟೇಜ್ ಕರೆಂಟಿನ ಬಿಸಿ ಮುಟ್ಟಿಸುತ್ತಿದ್ದವು. ರೈತರನ್ನು ಭೇಟಿ ಮಾಡಲು ಅಧಿಕಾರಿಗಳು ಅನುಮತಿ ಇಲ್ಲದೆ ಗ್ರಾಮಕ್ಕೆ ಪ್ರವೇಶಿಸುವಂತಿಲ್ಲ. ಸೋಮವಾರ ರಜಾದಿನ, ಸಂಜೆಯ ನಂತರ ಪ್ರವೇಶ ನಿಷೇಧ ಇತ್ಯಾದಿ ಅಂಶಗಳ ಎಚ್ಚರಿಕೆಯ ಬೋರ್ಡ್‌ನ್ನು ಊರಿನ ಪ್ರಮುಖ ಸ್ಥಳಗಳಲ್ಲಿ ಹಾಕುತ್ತಿದ್ದರು. ತಾಲೂಕು ಮಟ್ಟದ ಅಧಿಕಾರಿಗಳು ಸರ್ಕಾರಿ ವಾಹನಗಳಲ್ಲಿ ಊರಿನೊಳಕ್ಕೆ ಬರಲು ಹೆದರುತ್ತಿದ್ದರು. ಹಸಿರು ಬಣ್ಣ ನೋಡಿದರೆ ಸರ್ಕಾರವೇ ಹೆದರುತ್ತಿತ್ತು, ಹೋರಾಟಗಳು ದಿಕ್ಕು ತಪ್ಪಿದ ಕಾರಣ ಹೋರಾಟಗಳು ಬಲಹೀನವಾಗಿವೆ.


ಎಲ್ಲವಕ್ಕೂ ಕಾಲಮಿತಿ ಉಂಟು ಹೇಳಿ ರೈತರ ಸಮಸ್ಯೆಗಳನ್ನು ಯಾವಾಗ ಬಗೆಹರಿಸುತ್ತೀರಿ?. ಇನ್ನೈದು ವರ್ಷಕ್ಕೆ ಸಾಧ್ಯವೇ ಇಲ್ಲ. ಬೇಡ ಮತ್ತೇ ಐದು ವರ್ಷ, ಖಂಡಿತ ಆಗದು, ಹೋಗಲಿ 2030ಕ್ಕೆ ಬಗೆಹರಿಯುವುದೇ?, ಇಲ್ಲವೇ ಇಲ್ಲ ಸಮಸ್ಯೆಗಳನ್ನು ಬಗೆಹರಿಸಬಿಟ್ಟರೆ ರಾಜಕೀಯ ಮಾಡುವುದು ಹೇಗೆ?.

ರೌಡಿ ಶೀಟರ್ ನಾಗನ ಜತೆ ಜೈಲಲ್ಲಿ ದರ್ಶನ್ ಧಮ್ ಮಾರೋ ಧಮ್...: ಫೋಟೋ ವೈರಲ್

ಬೆಂಗಳೂರು, ಆ.25– ಬೆಂಗಳೂರಿನಲ್ಲಿ ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ವಿಚಾರಣಾಧೀನ ಕೈದಿಯಾಗಿರುವ ನಟ ದರ್ಶನ್ ಬೆಂಗಳೂರಿನ ಕೇಂದ್ರ ಕಾರಾಗೃಹ ಪರಪ್ಪನ ಅಗ್ರಹಾರದಲ್ಲಿ ಬೆಂಗಳೂರಿನ ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗನ ಜೊತೆಗೆ ಕುಳಿತುಕೊಂಡು ಸಿಗರೇಟ್ ಸೇದುತ್ತಿರುವ ಫೋಟೋ ವೈರಲ್ ಆಗಿದ್ದು, ಸುದ್ದಿವಾಹಿನಿಗಳಲ್ಲಿ ಪ್ರಸಾರವಾಗಿದೆ.

ಪ್ಲಾಸ್ಟಿಕ್ ಚೇರ್‌ನಲ್ಲಿ ಕುಳಿತುಕೊಂಡಿರುವ ದರ್ಶನ್, ಒಂದು ಕೈನಲ್ಲಿ ಟೀ ಕಪ್ ಮತ್ತು ಇನ್ನೊಂದು ಕೈನಲ್ಲಿ ಸಿಗರೇಟ್ ಹಿಡಿದುಕೊಂಡಿದ್ದಾನೆ. ಆತನ ಜೊತೆಗೆ ಮತ್ತೊಬ್ಬ ಕೈದಿಯಾಗಿರುವ ಮ್ಯಾನೇಜರ್ ನಾಗರಾಜ್ ಕೂಡ ಇದ್ದಾನೆ. ದರ್ಶನ್ ಕೂದಲು ತೆಗೆದಿರುವುದು ಫೋಟೋದಲ್ಲಿ ಕಂಡುಬಂದಿದೆ. ಮತ್ತೊರ್ವ ಕುಳ್ಳ ಸೀನ ಎಂದು ತಿಳಿದುಬಂದಿದೆ.

ಈ ಫೋಟೋ ಹೇಗೆ ಜೈಲಿನಿಂದ ಹೊರಗಡೆ ಬಂತು ಎಂಬ ಕುರಿತು ಕುತೂಹಲವಾಗಿದೆ. ವೇಲು ಎಂಬ ಕೈದಿ ಈ ಫೋಟೋವನ್ನು ತೆಗೆದಿದ್ದು, ತನ್ನ ಹೆಂಡತಿಗೆ ಆತ ಜೈಲಿನಿಂದ ಫೋಟೋ ಕಳುಹಿಸಿದ್ದ. ಈಗ ಅದು ಹೊರಬಂದಿದೆ. ಜೈಲಿನಲ್ಲಿ ನಿಯಮಗಳನ್ನು ಮೀರಿ ಕೈದಿಗಳಿಗೆ ಮದ್ಯ, ಸಿಗರೇಟ್ ಸಪ್ಲೈ ಮಾಡಲಾಗುತ್ತಿದೆ ಎಂದು ಹಲವು ಬಾರಿ ಆರೋಪ ಕೇಳಿಬಂದಿತ್ತು. ಇದಕ್ಕೆ ಪುಷ್ಟಿ ನೀಡುವಂತೆ ಈ



ನಟ ದರ್ಶನ್ ಬೆಂಗಳೂರಿನ ಕೇಂದ್ರ ಕಾರಾಗೃಹ ಪರಪ್ಪನ ಅಗ್ರಹಾರದಲ್ಲಿ ಬೆಂಗಳೂರಿನ ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗನ ಜೊತೆ ಕುಳಿತುಕೊಂಡು ಸಿಗರೇಟ್ ಸೇದುತ್ತಿರುವ ಫೋಟೋ ವೈರಲ್.

ಫೋಟೋ ಸಾಕ್ಷ್ಯ ಹೇಳುತ್ತಿದೆ ಎಂದು ಸುದ್ದಿವಾಹಿನಿಗಳು ಪ್ರಸಾರ ಮಾಡಿವೆ.

ಕೊಲೆ ಆರೋಪಿಯಾಗಿರುವ ನಟ ದರ್ಶನ್‌ಗೆ ಜೈಲಲ್ಲಿ ಸಿಗರೇಟ್ ಸಿಕ್ಕಿದ್ದು ಹೇಗೆ? ದುಡ್ಡು ಕೊಟ್ಟರೆ ಜೈಲಲ್ಲಿ ಏನು ಬೇಕಾದರೂ ಸಿಗುತ್ತಾ? ಜೈಲಲ್ಲೂ ಕೊಲೆ ಆರೋಪಿಗೆ ಐಷಾರಾಮಿ ಜೀವನ ಇರುತ್ತದೆಯೇ ಎಂಬ ಪ್ರಶ್ನೆಗಳು ಎದ್ದಿವೆ.

ನಟ ದರ್ಶನ್ ಫೋಟೋ ತೆಗೆದ ವೇಳೆಗೆ ಮೊಬೈಲ್ ಸಿಕ್ಕಿದ್ದು ಹೇಗೆ? ಆತ ಇಂತ ರೌಡಿ ಬಳಿ ಮಾತೆ ಫೋಟೋ ಕಳಿಸಿದ್ದು ಹೇಗೆ? ಎಂಬ ಪ್ರಶ್ನೆಗಳು ಕೇಳಿಬಂದಿವೆ.

ಜೈಲಿನಲ್ಲಿರುವ ವಿಡಿಯೋ ಕಾನ್ಫರೆನ್ಸ್ ಹಾಲ್‌ನ ಹಿಂಭಾಗದ ವಿಲ್ಸನ್ ಗಾರ್ಡನ್ ನಾಗನ ಸೆಲ್ ಪಕ್ಕದ ಜಾಗದಲ್ಲಿ ಇವರೆಲ್ಲರೂ ಕುಳಿತು ಹರಟೆ ಹೊಡೆಯುತ್ತಿದ್ದಾರೆ. ಆರೋಪಿಗಳು ಜೈಲಿನ ಆವರಣದಲ್ಲಿ ಕುಳಿತುಕೊಳ್ಳಲು ಚೇರಿನ ವ್ಯವಸ್ಥೆ ಇದೆ. ದರ್ಶನ್‌ಗೆ ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ ಸಾಥ್ ನೀಡಿದ್ದಾನೆ.

ರೌಡಿ ಮಹೇಶ ಕೊಲೆ ಕೇಸ್‌ನಲ್ಲಿ ವಿಲ್ಸನ್ ಗಾರ್ಡನ್ ನಾಗ ಜೈಲು ಸೇರಿದ್ದಾನೆ. ಕಳೆದ 11 ತಿಂಗಳಿಂದ ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಲ್ಸನ್ ಗಾರ್ಡನ್ ನಾಗ ಇದ್ದಾನೆ. ನಾಗನ ವಿರುದ್ಧ ಕೊಲೆ, ಕೊಲೆಯತ್ನ, ಸುಲಿಗೆ ಸೇರಿ 15ಕ್ಕೂ ಹೆಚ್ಚು ಕೇಸ್‌ಗಳು ಇವೆ.

13 ವರ್ಷಗಳ ನಂತರ ಮತ್ತೆ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ದರ್ಶನ್‌ಗೆ ಅತಿಥ್ಯ ನೀಡಲು ರೌಡಿಗಳ ಪಡೆ ನಾ ಮುಂದು ತಾ ಮುಂದು ಎಂದು ಬಂದಿದೆ ಎಂದು ಕಳೆದ ಜೂನ್‌ನಲ್ಲಿ ಸುದ್ದಿವಾಹಿನಿಗಳು ವರದಿ ಮಾಡಿತ್ತು.

ವಿಲ್ಸನ್ ಗಾರ್ಡನ್ ನಾಗ ಹಾಗೂ ಸೈಕಲ್ ರವಿ ಕಡೆಯಿಂದ ದರ್ಶನ್ ನೋಡಿಕೊಳ್ಳಲು ಪ್ಲಾನ್ ಇದೆ ಎನ್ನಲಾಗಿತ್ತು. ಈಗ ಕೊನೆಗೂ ವಿಲ್ಸನ್ ಗಾರ್ಡನ್ ನಾಗನ ಜೊತೆ ದರ್ಶನ್ ಹರಟೆ ಹೊಡೆಯುತ್ತಿರುವುದು ಬೆಳಕಿಗೆ ಬಂದಿದೆ.

ಜೈಲಿನಿಂದಲೇ ಆಪ್ತನೊಂದಿಗೆ ವಿಡಿಯೋ ಕಾಲ್

ಬೆಂಗಳೂರು, ಆ.25– ನಟ ದರ್ಶನ್ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿದ್ದರೂ ಐಷಾರಾಮಿ ಜೀವನ ಮಾಡುತ್ತಿದ್ದಾನೆ ಎಂಬುದಕ್ಕೆ ಮತ್ತಷ್ಟು ವಿಡಿಯೋ ಸಾಕ್ಷಿಗಳು ಲಭ್ಯವಾಗಿವೆ. ಜೈಲಿನಲ್ಲಿದ್ದರೂ ಮೊಬೈಲ್‌ನ ವಿಡಿಯೋ ಕಾಲ್‌ನಲ್ಲಿ ಮಾತನಾಡುತ್ತಿರುವ ವಿಡಿಯೋ ಸುದ್ದಿವಾಹಿನಿಗಳಲ್ಲಿ ಪ್ರಸಾರವಾಗಿವೆ.

ಜೈಲಿನಲ್ಲಿ ಮೊಬೈಲ್ ಬಳಸಲು ಅವಕಾಶ ಇಲ್ಲದಿದ್ದರೂ ಜೈಲಿನಲ್ಲಿದ್ದುಕೊಂಡೇ ವಿಡಿಯೋ ಕಾಲ್ ಮೂಲಕ ದರ್ಶನ್ ಹೊರಗಿನವರ ಜೊತೆಗೆ ನಗು ನಗುತ್ತಾ ಮಾತನಾಡುತ್ತಿರುವ ದೃಶ್ಯ ವಿಡಿಯೋದಲ್ಲಿ ಸೆರೆ ಹಿಡಿಯಲಾಗಿದೆ.

ಜೈಲಿನಲ್ಲಿರುವ ನಟ ದರ್ಶನ್ ಜೊತೆಗೆ ಇನ್‌ಸ್ಟಾಗ್ರಾಂ ವಿಡಿಯೋ ಕಾಲ್ ಮೂಲಕ ಮಾತನಾಡಿದ ಆತನ ಆಪ್ತ ಅದರ ತುಣುಕನ್ನು ಮೊಬೈಲ್‌ನ ಸ್ಟೇಟಸ್‌ಗೆ ಹಾಕಿಕೊಂಡಿದ್ದಾನೆ. ನಂತರ ಎಚ್ಚೆತ್ತುಕೊಂಡು ಡಿಲೀಟ್ ಮಾಡಿದ್ದಾನೆ. ಆದರೆ, ಅಷ್ಟರೊಳಗೆ ಆ ವಿಡಿಯೋ ಡೌನ್‌ಲೋಡ್ ಆಗಿದ್ದು, ವೈರಲ್ ಆಗುತ್ತಿದೆ.

ಜೈಲಿನಲ್ಲಿರುವ ನಟ ದರ್ಶನ್ ಮೊಬೈಲ್ ಫೋನ್ ಉಪಯೋಗಿಸುತ್ತಿಲ್ಲ. ಆದರೆ, ಆತನ ಸಹ ಕೈದಿಗಳು ಮೊಬೈಲ್ ಫೋನ್‌ಗಳನ್ನು ಇಟ್ಟುಕೊಂಡು ಮನೆಯವರೊಂದಿಗೆ ಮಾತನಾಡುತ್ತಾ ಹಾಯಾಗಿದ್ದಾರೆ. ಅದೇ ರೀತಿ ಮೊಬೈಲ್ ಇಟ್ಟುಕೊಂಡಿರುವ ಕೈದಿಯೊಬ್ಬ ತನ್ನ ಆಪ್ತರೊಂದಿಗೆ ಮಾತನಾಡಲು ಇನ್‌ಸ್ಟಾಗ್ರಾಮ್ ವಿಡಿಯೋ ಕಾಲ್ ಮಾಡಿದ್ದಾನೆ ಆಗ ನಟ ದರ್ಶನ್ ಕೂಡ ಜೈಲಿನಲ್ಲಿದ್ದು, ಅವರೊಂದಿಗೆ ಮಾತನಾಡಿ ಬಾಸ್ ಎಂದು ದರ್ಶನ್‌ನ್ನು ಮಾತನಾಡಿಸಿದ್ದಾನೆ. ಆಗ ದರ್ಶನ್ ಜೈಲಿನಲ್ಲಿ ಸಹ ಕೈದಿ ಮಾತಿಗೆ ಕಟ್ಟುಬಿದ್ದು ಅಭಿಮಾನಿಯೊಂದಿಗೆ ವಿಡಿಯೋ ಕಾಲ್‌ನಲ್ಲಿ ಮಾತನಾಡಿದ್ದಾನೆ. ದರ್ಶನ್ ಆಗಾಗ ಸಹ ಕೈದಿಗಳ ಬಳಿಯಿರುವ ಮೊಬೈಲ್‌ಗಳಿಂದ ಹೊರಗಿರುವವರ ಜೊತೆಗೆ ಮಾತನಾಡುತ್ತಾ ಹಾಯಾಗಿದ್ದಾರೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪತ್ರಕರ್ತರು ಕ್ರೀಡೆಯಲ್ಲಿ ತೊಡಗಿಸಿಕೊಂಡು ಆರೋಗ್ಯ ಕಾಯ್ದುಕೊಳ್ಳಬೇಕು

ಪತ್ರಕರ್ತರ ಕ್ರೀಡಾಕೂಟ ಸಮಾರೋಪದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಸಲಹೆ



ಮೈಸೂರಿನ ಓವೆಲ್ ಮೈದಾನದಲ್ಲಿ ಭಾನುವಾರ ನಡೆದ ಪತ್ರಕರ್ತರ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಕ್ರಿಕೆಟ್‌ನಲ್ಲಿ ವಿಜೇತವಾದ ತಂಡಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡ ಬಹುಮಾನ ವಿತರಿಸಿದರು.

ಮೈಸೂರು,ಆ.25(ಪಿಎಂ)– ನಿತ್ಯವೂ ಒತ್ತಡದಲ್ಲಿ ಕಾರ್ಯನಿರ್ವಹಿಸುವ ಪತ್ರಕರ್ತರು ಬಿಡುವು ಮಾಡಿಕೊಂಡು ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಆ ಮೂಲಕ ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಯ್ದುಕೊಳ್ಳಬೇಕು ಎಂದು ಎಂದು ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ಓವೆಲ್ ಮೈದಾನದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಎರಡು ದಿನಗಳ ಪತ್ರಕರ್ತರ ಕ್ರೀಡಾ ಕೂಟದ ಸಮಾರೋಪ ಸಮಾರಂಭದಲ್ಲಿ ಕ್ರಿಕೆಟ್, ಬ್ಯಾಡ್ಮಿಂಟನ್, ಶಾಟ್‌ಪಟ್, ಓಟ ಮುಂತಾದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ಪತ್ರಕರ್ತರು ನಿತ್ಯವೂ ಒತ್ತಡದಲ್ಲೇ ಕೆಲಸ ಮಾಡಬೇಕಿದೆ. ರಾಜಕೀಯ, ರಾಜ್ಯ, ದೇಶ ಹಾಗೂ ವಿದೇಶದ ಸುದ್ದಿ ಮಾತ್ರವಲ್ಲದೆ, ಸ್ಥಳೀಯ ಘಟನಾವಳಿಗಳು ಮೇಲೂ ನಿಗಾವಹಿಸಿ ಕೆಲಸ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪತ್ರಕರ್ತರು ಒತ್ತಡಕ್ಕೆ ಸಿಲುಕುವುದು ಸಹಜವೇ. ಇದರ ನಡುವೆ ಒಂದಿಷ್ಟು ಬಿಡುವು ಮಾಡಿಕೊಂಡು ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದು ಅಗತ್ಯ. ಏಕೆಂದರೆ ಕ್ರೀಡೆ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಯ್ದುಕೊಳ್ಳಲು ಸಹಕಾರಿ. ನಿಮ್ಮ ಕ್ರೀಡಾ ಸ್ಫೂರ್ತಿ ಹೀಗೆ ಮುಂದುವರೆಯಲಿ ಎಂದು ಆಶಿಸಿದರು.

ಸನ್ಮಾನ ಸ್ವೀಕರಿಸಿದ ಹಿಮಾಲಯ ಪರ್ವತರೋಹಿ ಹಾಗೂ ಜೆಎಸ್‌ಎಸ್‌ದಂತ ವೈದ್ಯಕೀಯ ಆಸ್ಪತ್ರೆಯ ಹಿರಿಯ ವೈದ್ಯೆ ಡಾ.ಉಷಾ ಹೆಗ್ಡೆ ಮಾತನಾಡಿ, ಕ್ರೀಡಾ ಸ್ಫೂರ್ತಿ ಜೀವನದಲ್ಲಿ ಉತ್ಸಾಹ ತುಂಬುತ್ತದೆ. ಸಮಾಜದ ಒಳಿತಿಗೆ ಕಾರ್ಯನಿರ್ವಹಿಸುವ ಪತ್ರಕರ್ತರಿಗೆ ಕ್ರೀಡಾ ಮನೋಭಾವ ಅಗತ್ಯವಿದ್ದು, ಇದು ವೃತ್ತಿ ಜೀವನದ ಸಾಮರ್ಥ್ಯ ವೃದ್ಧಿಗೂ ಪ್ರೇರಣೆಯಾಗಲಿದೆ ಎಂದು ಹೇಳಿದರು.

ಪತ್ರಕರ್ತರು ಹಾಗೂ ಕುಟುಂಬದವರು ವಿವಿಧ ಕ್ರೀಡೆಗಳಿಗೆ ಭಾಗವಹಿಸಿದ್ದನ್ನು ನೋಡಿ ಸಂತಸ ಉಂಟಾಗಿದೆ. ಈ ಕ್ರೀಡಾ ಸ್ಫೂರ್ತಿ ನಿರಂತರವಾಗಿರಬೇಕು. ನಾನು ಎವರೆಸ್ಟ್ ಪರ್ವತ ಏರಲು ನಿರ್ಧಾರ ಕೈಗೊಂಡಾಗ 52 ವರ್ಷ. ಕ್ರೀಡಾ ಸ್ಫೂರ್ತಿ ಮತ್ತು ಸತತ ಪರಿಶ್ರಮವೇ ನನ್ನನ್ನ ಸಾಧನೆಗೆ ಪ್ರೇರೇಪಿಸಿತು ಎಂದು ತಿಳಿಸಿದರು.

ಮಹಾರಾಜ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಇಂದು ಬೆಳಗ್ಗೆ ಹಮ್ಮಿಕೊಂಡಿದ್ದ ಬ್ಯಾಡ್ಮಿಂಟನ್ ಟೂರ್ನಿಗೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದ್ದರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ದಿ ಟೈಮ್ಸ್ ಕ್ರಿಯೇಷನ್ಸ್ ಸ್ಥಾಪಕ ಹರೀಶ್‌ಕುಮಾರ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಮತ್ತಿತರರು ಸಮಾರೋಪ ಸಮಾರಂಭದಲ್ಲಿ ಹಾಜರಿದ್ದರು.



ನಾಳೆ ಸಿಎಂ ಪರ ರಾಜಭವನ ಚಲೋ

ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಮನವಿ



ಮಂಡ್ಯದಲ್ಲಿ ನಡೆದ ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಜಿಲ್ಲಾ ಘಟಕದ ಸಭೆ

ಮಂಡ್ಯ,ಆ.25–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತೇಜೋವಧೆ ಖಂಡಿಸಿ, ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸುತ್ತಿರುವ ಬಿಜೆಪಿ–ಜೆಡಿಎಸ್ ಕುತಂತ್ರ ಗಳನ್ನು ವಿರೋಧಿಸಿ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಮತ್ತು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ವತಿಯಿಂದ ಆ.27 ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಿಂದ ರಾಜಭವನ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮಕ್ಕೆ ಶೋಷಿತ ಸಮುದಾಯ ಅಹಿಂದ ಮುಖಂಡರು ಮತ್ತು ಸಿದ್ದರಾಮಯ್ಯನವರ ಅಭಿಮಾನಿಗಳು ಮಂಡ್ಯ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಿತರಾಗಿ ಭಾಗವಹಿಸಿ ರಾಜಭವನ ಚಲೋ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಮಂಡ್ಯ ಜಿಲ್ಲಾ ಧ್ಯಕ್ಷ ಕೆ.ಹೆಚ್.ನಾಗರಾಜು ಮನವಿ ಮಾಡಿದರು.

ನಗರದ ಕುರುಬರ ಸಂಘದ ಕಚೇರಿಯಲ್ಲಿ ರಾಜಭವನ ಚಲೋ ಬಗ್ಗೆ ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ರಾಜಭವನವನ್ನು ದುರ್ಬಳಕೆ ಮಾಡಿ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸುವ ಕೆಲಸವನ್ನು ಈ ತಕ್ಷಣವೇ ನಿಲ್ಲಿಸಬೇಕು. ಸಂವಿಧಾನ ಮತ್ತು ಒಕ್ಕೂಟ ತತ್ವದ ವಿರೋಧಿಯಾದ ರಾಜ್ಯಪಾಲರನ್ನು ಮೋದಿ ಸರ್ಕಾರ ಕೂಡಲೇ ವಾಪಸ್ಸು ಕರೆಸಿಕೊಳ್ಳಬೇಕು. ಸಿದ್ದರಾಮಯ್ಯರವರ ಪ್ರಾಸಿಕ್ಯೂಷನ್ ಅನುಮತಿ ಹಿಂಪಡೆಯಬೇಕು, ಪ್ರಜಾಪ್ರಭುತ್ವ ಒಕ್ಕೂಟದ ವ್ಯವಸ್ಥೆ ಮತ್ತು ರಾಜ್ಯ ಸರ್ಕಾರದ ಸಾರ್ವಭೌಮತೆಯನ್ನು ಸಂರಕ್ಷಿಸಬೇಕು. ಕನ್ನಡ ನಾಡಿನ ಘನತೆಯನ್ನು ಕಾಪಾಡಬೇಕೆಂದು ಆಗ್ರಹಿಸಿದರು.

ಕರ್ನಾಟಕದ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮೇಲೆ ಪ್ರಾಸಿಕ್ಯೂಷನ್ನಿಗೆ ಅನುಮತಿ ಕೊಡುವಾಗ ಸಂವಿಧಾನದ ಮೂಲ ತತ್ವಗಳನ್ನು ಹಾಗೂ ಪ್ರಜಾಪ್ರಭುತ್ವದ ಆಶಯಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿದ್ದಾರೆ. ರಾಜಭವನವನ್ನು ಕೋಮುವಾದಿ ರಾಜಕಾರಣ ಮಾಡುತ್ತಿರುವ ಬಿಜೆಪಿ ಮತ್ತು ಫ್ಯೂಡಲ್ ವಾದಿ ರಾಜಕಾರಣ ಮಾಡುತ್ತಿರುವ ಜೆಡಿಎಸ್ ಪಕ್ಷಗಳ ಕಚೇರಿಯನ್ನಾಗಿ ಪರಿವರ್ತಿಸಿಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ.

ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಎಂ.ಎಲ್.ಸುರೇಶ್ ಮಾತನಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಭಿಯೋಜನೆಗೆ ಅನುಮತಿ ನೀಡಿರುವುದನ್ನು ವಿರೋಧಿಸಿ ಆ.27ರಂದು "ರಾಜಭವನ ಚಲೋ' ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಮಂಡ್ಯ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ಶೋಷಿತ ಸಮುದಾಯಗಳ ಮುಖಂಡರಾದ ವಿಜಯಲಕ್ಷ್ಮಿ ರಘುನಂದನ್, ಅಮ್ಜದ್ ಪಾಷ, ಎಲ್. ಸಂದೇಶ್, ಸಾತನೂರು ಕೃಷ್ಣ, ರಾಜು, ರಮೇಶ್, ರಾಜಣ್ಣ, ಮರಿಹೆಗ್ಗಡೆ, ಎನ್. ದೊಡ್ಡಯ್ಯ, ಚಂದಗಾಲು ವಿಜಯ ಕುಮಾರ್, ಸುಂಡಹಳ್ಳಿ ಮಂಜುನಾಥ್, ಮಹೇಶ್, ಸುಮನ್, ನಾಗರತ್ನ ಮತ್ತಿತರರು ಭಾಗವಹಿಸಿದ್ದರು.

ಕಾರ್‌ಗೆ ಸಾರಿಗೆ ಬಸ್ ಡಿಕ್ಕಿ: ಐವರಿಗೆ ಗಾಯ

ಮಂಡ್ಯ, ಆ.25– ಕಾರಿಗೆ ಸಾರಿಗೆ ಬಸ್ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಐವರು ಗಾಯಗೊಂಡಿರುವ ಘಟನೆ ಮದ್ದೂರು ತಾಲೂಕಿನ ಕೆ.ಎಂ.ದೊಡ್ಡಿಯಲ್ಲಿ ಭಾನುವಾರ ನಡೆದಿದೆ.

ಕೆ.ಎಂ.ದೊಡ್ಡಿಯ ಮದ್ದೂರು–ಮಳವಳ್ಳಿ ರಸ್ತೆಯಲ್ಲಿ ಬೆಂಗಳೂರಿನ ಕಡೆಗೆ ಹೋಗುತ್ತಿದ್ದ ಸ್ವಿಫ್ಟ್ ಕಾರನ್ನು ಓವರ್‌ಟೇಕ್ ಮಾಡಲು ಹೋಗಿ ಸಾರಿಗೆ ಬಸ್ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ಕಾರಿನಲ್ಲಿದ್ದ ಐವರ ಪೈಕಿ ಓರ್ವನಿಗೆ ಗಂಭೀರ ಗಾಯವಾಗಿದ್ದು, ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಕಾರಿನಲ್ಲಿದ್ದವರು ಮಳವಳ್ಳಿ ತಾಲೂಕಿನ ಬೆಳಕವಾಡಿ ಗ್ರಾಮದವರು ಎನ್ನಲಾಗಿದೆ. ಗಾಯಾಳುಗಳಿಗೆ ಕೆ.ಎಂ.ದೊಡ್ಡಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ಮಂಡ್ಯ ಮಿಮ್ಸ್‌ಗೆ ರವಾನಿಸಲಾಗಿದೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕನ್ನಡ ಜ್ಯೋತಿ ರಥಯಾತ್ರೆಗೆ ಸ್ವಾಗತ



ಕರ್ನಾಟಕ ರಾಜ್ಯಕ್ಕೆ 50 ವರ್ಷ ಸಂದ ಅಂಗವಾಗಿ ಸಂಚರಿಸುತ್ತಿರುವ ಕನ್ನದ ಜ್ಯೋತಿ ರಥವು ಮದ್ದೂರು ತಾಲೂಕು ಭಾರತೀನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಕನ್ನಡ ರಥಕ್ಕೆ ಭಾರತೀನಗರ ಗ್ರಾಮಪಂಚಾಯಿತಿ ಮತ್ತು ನಾಡಕಚೇರಿ ವತಿಯಿಂದ ಸ್ವಾಗತಿಸಲಾಯಿತು. ಗ್ರಾಪಂ ಅಭಿವೃದ್ಧ ಅಧಿಕಾರಿ ಎನ್.ಸುಧಾ ಪೂಜೆ ಸಲ್ಲಿಸಿದರು. ಉಪತಹಶೀಲ್ದಾರ್ ಶಿವಲಿಂಗಯ್ಯ, ವಿಎ ಜೆ.ರವಿ, ಆರ್‌ಐ ಮಹೇಶ್, ರವೀಂದ್ರ, ಗ್ರಾ.ಪಂ ಸದಸ್ಯರಾದ ಕೆ.ಟಿ.ಶ್ರೀನಿವಾಸ್, ವೆಂಕಟೇಶ್, ಮಂಜುನಾಥ್, ಮಂಡ್ಯದ ತಹಶೀಲ್ದಾರ್ ಶಿವಕುಮಾರ್ ಬೀರ್ದಾರ್, ಸಾಹಿತ್ಯ ಪರಿಷತ್‌ನ ಮಂಡ್ಯ ಜಿಲ್ಲಾಘಟಕದ ಅಧ್ಯಕ್ಷ ಚಂದ್ರಲಿಂಗು ಈ ವೇಳೆ ಉಪಸ್ಥಿತರಿದ್ದರು.

ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಕೆ.ಆರ್.ಪೇಟೆ: ತಾಲೂಕಿನ ಕಸಬಾ ಹೋಬಳಿಯ ಕೊಮ್ಮೆನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ರೂಪ ವಾಸು ಮತ್ತು ಉಪಾಧ್ಯಕ್ಷರಾಗಿ ರುಕ್ಮಿಣಿ ಸೋಮು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಮುಂದಿನ ಐದು ವರ್ಷದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನ ಬಯಸಿ ರೂಪ ವಾಸು ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ರುಕ್ಮಿಣಿ ಸೋಮು ಇಬ್ಬರೇ ನಾಮಪತ್ರ ಸಲ್ಲಿಸಿದ ಕಾರಣ. ಚುನಾವಣಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಭರತ್ ಕುಮಾರ್ ಅವಿರೋಧವಾಗಿ ಆಯ್ಕೆಯನ್ನು ಘೋಷಿಸಿದರು. ಸಹಾಯಕ ಚುನಾವಣಾಧಿಕಾರಿಯಾಗಿ ಸಂಘದ ಕಾರ್ಯದರ್ಶಿ ಸಹನಾ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷೆ ರತಿ ಶ್ರೀಧರ್ ಅಭಿನಂದಿಸಿದರು. ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಘೋಷಣೆಯಾಗುತ್ತಿದ್ದಂತೆ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ರೇಣುಕಾ ಶ್ರೀನಿವಾಸ್, ಜ್ಯೋತಿ ಸುರೇಶ್, ಪ್ರೇಮಾ ರಘುನಾಥ್, ಸುಧಾ ಶಿವಕುಮಾರ್, ಜ್ಯೋತಿ ಜವರೇಗೌಡ, ಭಾಗ್ಯ ರಾಮೇಗೌಡ, ರಾಧಾ ನಾಗರಾಜು, ಕಾರ್ಯದರ್ಶಿ ಸಹನಾ, ಗ್ರಾಪಂ ಸದಸ್ಯ ನಾಗೇಗೌಡ, ಮಾಜಿ ಸದಸ್ಯ ಕೆ.ಬಿ.ಜಗದೀಶ್, ಹಿರಿಯ ಮುಖಂಡರಾದ ಶಿವೇಗೌಡ, ಹರಿಹರಪುರ ಶ್ರೀಧರ್, ನಾಗೇಗೌಡ, ಅನಿಲ್‌ಗೌಡ, ಸುನಿಲ್ ಗೌಡ, ರಘುನಾಥ್, ರಾಮೇಗೌಡ, ಮಂಜುನಾಥ್, ಕೆ.ಬಿ.ಸುರೇಶ್, ಸೋಮು, ಮಂಜುನಾಥ್, ಕೆ.ಹೆಚ್.ಕುಮಾರ್, ಕೊಮ್ಮೆನಹಳ್ಳಿ ಕೌಶಿಕ್, ಧನುಷ್, ಸುನಿಲ್, ಗಿರೀಶ್, ನಾಗೇಂದ್ರಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಪ್ರತಿಯೊಬ್ಬರೂ ಆರೋಗ್ಯದ ಕಡೆ ಗಮನ ಕೊಡಬೇಕು

ಮಂಡ್ಯ: 25 ವರ್ಷದ ಮಕ್ಕಳನ್ನು ಹೃದಯ ಸಂಬಂಧಿ ಕಾಯಿಲೆಗೆ ವೈದ್ಯರ ಹತ್ತಿರ ಕರೆದುಕೊಂಡು ಬರುತ್ತಿರುವ ಪರಿಸ್ಥಿತಿ ಬಂದಿದ್ದು, ಪ್ರತಿಯೊಬ್ಬರೂ ಆರೋಗ್ಯದ ಕಡೆಗೆ ಗಮನ ನೀಡಬೇಕೆಂದು ಸಂಸದ ಹಾಗೂ ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಸಲಹೆ ನೀಡಿದರು.

ಶುಕ್ರವಾರ ಅಶೋಕನಗರ 3ನೇ ಕ್ರಾಸ್‌ನಲ್ಲಿರುವ ಸ್ಪಂದನ ಆಸ್ಪತ್ರೆಯಲ್ಲಿ ನೂತನ ಕ್ಯಾತ್‌ಲ್ಯಾಬ್ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿ ಮಾತನಾಡಿದ ಅವರು, ಭಾರತದಲ್ಲಿ 30 ಲಕ್ಷ ಮಂದಿ ಹೃದಯ ಘಾತಕ್ಕೆ ತುತ್ತಾಗುತ್ತಿದ್ದಾರೆ. ಇದರಲ್ಲಿ 35ರಷ್ಟು ಮಂದಿ 45 ವರ್ಷದೊಳಗಿನವರಾಗಿದ್ದಾರೆ ಎಂದು ತಿಳಿಸಿದರು.

ಭಾರತದಲ್ಲಿ ಶೇ.60ರಷ್ಟು ಸಾವು ಜೀವನ ಶೈಲಿ, ಆಹಾರ ಶೈಲಿಯ ಬದಲಾವಣೆಯಿಂದ ಆಗುತ್ತಿದೆ. ಇಂದು ದುಡಿದು ಸತ್ತವರಿಗಿಂತ ಚಿಂತೆ ಮಾಡಿ ಸಾಯುವವರೇ ಹೆಚ್ಚಾಗಿದ್ದಾರೆ. ಈ ಹಿಂದೆ ಹೃದಯ ಕಾಯಿಲೆಯನ್ನು ಶ್ರೀಮಂತರ ಕಾಯಿಲೆ ಅನ್ನುತ್ತಿದ್ದರು ಎಂದರು.

ಮೇಲುಕೋಟೆಯಲ್ಲಿ ಒಬ್ಬರಾ..., ಇಬ್ಬರಾ ಶಾಸಕರು...

ಶಾಸಕ ದರ್ಶನ್ ಪುಟ್ಟಣ್ಣಯ್ಯರನ್ನು ತರಾಟೆಗೆ ತೆಗೆದುಕೊಂಡ ರೈತಸಂಘದ ಕಾರ್ಯಕರ್ತರು



ಬೃಹತ್ ರೈತ ಸಂಘದ ಕಾರ್ಯಕರ್ತರ ಸಭೆಯಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ

ಪಾಂಡವಪುರ,ಆ.25– ಮೇಲುಕೋಟೆ ಕ್ಷೇತ್ರದಲ್ಲಿ ಶಾಸಕರು ಒಬ್ಬರ ಅಥವಾ ಇಬ್ಬರಾ ಎಂಬ ಗೊಂದಲವಿದೆ. ಜನರು ಕೊಟ್ಟ ಅಧಿಕಾರವನ್ನು ಶಾಸಕರು ಹಿಡಿತದಲ್ಲಿ ಇಟ್ಟುಕೊಂಡು ಜನಸಾಮಾನ್ಯರ ಕೆಲಸ ಮಾಡಬೇಕು ಎಂದು ಕಾರ್ಯಕರ್ತರು ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಆಗ್ರಹಿಸಿದ್ದಾರೆ.

ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಪಕ್ಷ ಸಂಘಟನೆ ವಿಚಾರವಾಗಿ ನಡೆದ ಬೃಹತ್ ರೈತ ಸಂಘದ ಕಾರ್ಯಕರ್ತರ ಸಭೆಯಲ್ಲಿ ರೈತಸಂಘದ ಕಾರ್ಯಕರ್ತರು ಶಾಸಕರಿಗೆ ಪ್ರಶ್ನೆಗಳ ಸುರಿಮಳೆಗೈದರು.

ಕಾರ್ಯಕರ್ತ ತುಳಸಿದಾಸ್ ಮಾತನಾಡಿ, ಈ ಹಿಂದೆ ರೈತಸಂಘ ಸಾಕಷ್ಟು ಬಲಿಷ್ಠವಾಗಿತ್ತು, ಅಧಿಕಾರಿಗಳು ರೈತಸಂಘದ ಕಾರ್ಯಕರ್ತರನ್ನು ಕಂಡರೆ ಭಯಪಡುವ ವಾತಾವರಣ ಇತ್ತು ಆದರೀಗ ಸಂಘಟನೆಯ ಸಾಮರ್ಥ್ಯ ಕುಸಿದಂತೆ ಕಾಣುತ್ತಿದೆ. ಇದಕ್ಕೆಲ್ಲ ಕ್ಷೇತ್ರದಲ್ಲಿ ಒಬ್ಬರು ಶಾಸಕರ ಅಥವಾ ಇಬ್ಬರು ಶಾಸಕರ? ಎಂಬ ಪ್ರಶ್ನೆ ಮೂಡಿರುವುದೇ ಕಾರಣ. ಕ್ಷೇತ್ರದ ಜನತೆ ನಿಮ್ಮನ್ನು ಚುನಾವಣೆಯಲ್ಲಿ ಶಾಸಕರನ್ನಾಗಿ ಆಯ್ಕೆ ಮಾಡಿದ್ದಾರೆ. ಜನರುಕೊಟ್ಟ ಅಧಿಕಾರ ನಿಮ್ಮ ಹಿಡಿತದಲ್ಲಿ ಇರಬೇಕೇ ಹೊರತು ನಿಮ್ಮ ಕುಟುಂಬದವರ ಕೈಯಲಲ್ಲ ಎಂದು ಶಾಸಕ ದರ್ಶನ್‌ಪುಟ್ಟಣ್ಣಯ್ಯ ಅವರ ಸೋದರನ ವಿರುದ್ಧ ಆಕ್ರೋಶ ಹೊರಹಾಕಿದರು.

ಚಿಕ್ಕಾಡೆ ಹರೀಶ್ ಮಾತನಾಡಿ, ರೈತ ಸಂಘದಲ್ಲಿ ಗುಂಪುಗಾರಿಕೆ ಶುರುವಾಗಿ, ಒಬ್ಬ ಕಾರ್ಯಕರ್ತ ಮತ್ತೊಬ್ಬ ಕಾರ್ಯಕರ್ತನನ್ನು ಮಾತನಾಡಿಸದ ಸ್ಥಿತಿ ಎದುರಾಗಿದೆ. ಕಳೆದ ನಾಲ್ಕು ವರ್ಷಗಳ ಕಾಲ ಯಾವುದೇ ಮುಂಚೂಣಿ ನಾಯಕರು ಇಲ್ಲದಿದ್ದರೂ ಹೋರಾಟ ಮಾಡಿ ಸಂಘಟಿಸಿದ್ದೇವೆ ತಾಲೂಕು ಕಮಿಟಿ ಪುನರ್‌ವಿಂಗಡಣೆ ಮಾಡದೆ ಕಳೆದ ಒಂದೂವರೆ ವರ್ಷದಿಂದಲೂ ಕಾಲಹರಣ ಮಾಡಿದ್ದೀರಿ. ಅಧಿಕಾರ ಇದ್ದಾಗ ಸಾಕಷ್ಟು ಜನ ಬರುತ್ತಾರೆ. ಅಧಿಕಾರ ಇಲ್ಲದೇ ಇರುವಾಗ ನಿಮ್ಮೊಂದಿಗೆ ಎಷ್ಟು ಮಂದಿ ಇದ್ದರು ಎನ್ನುವುದನ್ನು ಶಾಸಕರು ಅರ್ಥೈಸಿಕೊಳ್ಳಬೇಕು. ಗುಂಪುಗಾರಿಕೆಗೆ ಅವಕಾಶ ನೀಡಬೇಡಿ ಎಂದು ಆಗ್ರಹಿಸಿದರು.

ಕ್ಷೇತ್ರದಲ್ಲಿ ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಳ್ಳುವಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ಅಧಿಕಾರಿಗಳು ಶಾಸಕರ ಮಾತಿಗೂ ಬೆಲೆಕೊಡುತ್ತಿಲ್ಲ. ತಾಲೂಕು ಕಚೇರಿ, ತಾಪಂ, ಪುರಸಭೆ ಸೇರಿದಂತೆ ಎಲ್ಲಾ ಕಡೆ ಭ್ರಷ್ಟಾಚಾರ ತಾಂಡವಾಡುತ್ತಿದೆ. ಸತ್ತ ವ್ಯಕ್ತಿಯ ಹೆಸರಿನಲ್ಲಿ ಖಾತೆಮಾಡಿಕೊಟ್ಟು, ಅನಾವಶ್ಯಕ ದಾಖಲೆ ಮುಂದಿಟ್ಟು ಭ್ರಷ್ಟಾಚಾರ ನಡೆಸುತ್ತಿದ್ದಾರೆ ಎಂದು ಅಧಿಕಾರಿಗಳೇ ನೇರವಾಗಿ ಹೇಳುತ್ತಾರೆ.

ಸತ್ತ ವ್ಯಕ್ತಿಯ ಹೆಸರಿನಲ್ಲಿ ಭಾಪಕಾಗದ ತೆಗೆದು ಆರಟಿಸಿಯನ್ನು ರದ್ದು ಮಾಡುವ ಅಧಿಕಾರಿಗಳಿದ್ದಾರೆ. ಪ್ರಶ್ನಿಸಿದರೆ ನಮ್ಮೊಬ್ಬರನ್ನು ಯಾಕೆ ಪ್ರಶ್ನಿಸುತ್ತೀರ ಬಹುತೇಕ ಅಧಿಕಾರಿಗಳು ಲಂಚಪಡೆದು ಭ್ರಷ್ಟಾಚಾರ ನಡೆಸುತ್ತಿದ್ದಾರೆ ಎಂದು ಅಧಿಕಾರಿಗಳೇ ನೇರವಾಗಿ ಹೇಳುತ್ತಾರೆ. ಲಂಚಕೊಡದೆ ಸರಕಾರಿ ಕಚೇರಿಯಲ್ಲಿ ಯಾವುದೇ ಕೆಲಸ ನಡೆಯುತ್ತಿಲ್ಲ ಎಂದು ಶಾಸಕರನ್ನು ತರಾಟೆಗೆ ತೆಗೆದುಕೊಂಡರು.

ಒಗ್ಗಟ್ಟಿನಿಂದ ಸಂಘಟನೆ ಬಲಪಡಿಸಿ: ಶಾಸಕ ದರ್ಶನ್‌ಪುಟ್ಟಣ್ಣಯ್ಯ ಮಾತನಾಡಿ, ಸಾವಿರಾರು ಹೋರಾಟಗಾರರ ಶ್ರಮದ ಫಲವಾಗಿ ರೈತಸಂಘಟನೆ ಹುಟ್ಟಿಕೊಂಡಿದೆ. ಎಲ್ಲರೂ ಒಗ್ಗಟ್ಟಿನಿಂದ ರೈತಸಂಘವನ್ನು ಕಟ್ಟಿ ಬೆಳೆಸುವ ಜತೆಗೆ ರಾಜ್ಯ, ಜಿಲ್ಲಾ, ತಾಲೂಕು ಕಮಿಟಿಗಳನ್ನು ಬದಲಾಯಿಸಿ ಹೊಸ ಕಮಿಟಿ ರಚಿಸಲಾಗುವುದು, ಹೋಬಳಿ, ಗ್ರಾಮ ಮಟ್ಟದಲ್ಲೂ ಕಮಿಟಿ ತೆರೆದು ಸಂಘಟನೆಗೆ ಬಲ ತುಂಬಲಾಗುವುದು ಎಂದರು.

ನಾನು ಮೊದಲು ಹೇಳಿದಂತೆ ನನ್ನ ಆದ್ಯತೆ ಸಂಘಟನೆ, ಕೆಲವು ವೈಯಕ್ತಿಕ ಸಮಸ್ಯೆಗಳಿಂದಾಗಿ ನಾನು ಅಮೇರಿಕಕ್ಕೆ ಹೋಗಿ ಬರುತ್ತೇನೆ ಅಷ್ಟೆ. ಮುಂದಿನ ದಿನಗಳಲ್ಲಿ ಹೋರಾಟ ಶಕ್ತಿ, ಧ್ವನಿಯನ್ನು ಹೆಚ್ಚಿಸಿ ರೈತರ ಸಮಸ್ಯೆಗಳಾದ ಬೆಲೆ ನಿಗದಿ ಪರಿಹಾರ, ರೈತರಿಗಾಗುತ್ತಿರುವ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸುವೆ ಎಂದರು.

45 ಗಿಡ ನೆಟ್ಟ ಟೀಂ ಮೈಸೂರು



ಮೈಸೂರು ವಿಜಯನಗರ 4ನೇ ಹಂತದಲ್ಲಿ ಭಾನುವಾರ ಗಿಡ ನೆಟ್ಟ ಟೀಂ ಮೈಸೂರು ಸದಸ್ಯರು.

ಮೈಸೂರು, ಆ.25(ಎಸ್‌ಬಿಡಿ)– 'ಟೀಂ ಮೈಸೂರು' ವತಿಯಿಂದ ಪ್ರಸಕ್ತ ವರ್ಷದ 11ನೇ ವಾರದ 'ಹಸಿರು ಮೈಸೂರು ನಮ್ಮ ಗುರಿ' ಕಾರ್ಯಕ್ರಮದಡಿ ಭಾನುವಾರ 40ಕ್ಕೂ ಹೆಚ್ಚು ಗಿಡ ನೆಡಲಾಯಿತು.

ಮೈಸೂರಿನ ವಿಜಯನಗರ, 4ನೇ ಹಂತದ ರಸ್ತೆ ಬದಿಯಲ್ಲಿ 45 ಗಿಡಗಳನ್ನು ನೆಡಲಾಯಿತು. ಈವರೆಗೆ ಇಲ್ಲಿ ಒಟ್ಟು 135 ಗಿಡಗಳನ್ನು ನೆಟ್ಟಂತಾಗಿದೆ. ಕಾರ್ಯಕ್ರಮದ ನೆಪದಲ್ಲಿ ಗಿಡ ನೆಟ್ಟು ಕೈ ತೊಳೆದುಕೊಳ್ಳದೆ ಅವುಗಳಿಗೆ ಕನಿಷ್ಠ ಐದು ವರ್ಷ ಡಿಸೆಂಬರ್‌ನಿಂದ ಜೂನ್‌ವರೆಗೆ ನೀರೆರೆದು ಪೋಷಿಸುವುದು ಟೀಂ ಮೈಸೂರಿನ ವಿಶೇಷವಾಗಿದೆ. ಈ ತಂಡ ಕಳೆದ 10 ವರ್ಷಗಳಿಂದ 6 ಸಾವಿರಕ್ಕೂ ಹೆಚ್ಚು ಗಿಡಗಳನ್ನು ಮೈಸೂರಿನ ವಿವಿಧೆಡೆ ಪೋಷಣೆ ಮಾಡಿದೆ.

ಇಂದಿನ ಗಿಡ ನೆಡುವ ಕಾರ್ಯಕ್ರಮದಲ್ಲಿ ತಂಡದ ಗೋಕುಲ್ ಗೋವರ್ಧನ್, ಯಶವಂತ ಹಿರಿಯಣ್ಣ, ಅನಿಲ್ ಜೈನ್, ಯತೀಶ್, ಬಸವರಾಜು, ತ್ರಿಮೂರ್ತಿ, ಅಮರ್, ಚೇತನ್, ಪ್ರತಾಪ್, ಸಚಿನ್, ಗಣೇಶ್, ಶ್ರೀಮತಿ ಸಹನಾ, ನೇಹಾ ನಯನ, ಪಿಯಾಂಕಾ, ವರ್ಷಿಣಿ, ಯಶಸ್, ಮಿನುಗು, ಮೌಲ್ಯ, ವಿಸ್ಮಯ, ಎಸ್ಮಿತ್ ಮತ್ತಿತರರು ಪಾಲ್ಗೊಂಡಿದ್ದರು.


ನಕಲಿ ಪತ್ರ ನೀಡಿ ಶಾಮನೂರು ಶಿವಶಂಕರಪ್ಪ ಪಿಎ ಹುದ್ದೆ ಗಿಟ್ಟಿಸಿದ ಮಹಿಳೆ!

ಬೆಂಗಳೂರು, ಆ.25– ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಶಾಮನೂರು ಶಿವಶಂಕರಪ್ಪ ಅವರ ನಕಲಿ ಲೆಟರ್‌ಹೆಡ್ ಮತ್ತು ಸಹಿ ಬಳಸಿಕೊಂಡು, ಅವರ ಆಪ್ತ ಸಹಾಯಕರಾಗಿ ವಿಧಾನಸಭಾ ಸಚಿವಾಲಯದಿಂದ ಮಹಿಳೆಯೊಬ್ಬರು ನೇಮಕಾತಿ ಆದೇಶ ಪಡೆದಿದ್ದಾರೆ.

ಈ ಸಂಬಂಧ ವಿಧಾನಸಭಾ ಸಚಿವಾಲಯದ ಅಧೀನ ಕಾರ್ಯದರ್ಶಿ ಲಲಿತಾ ಅವರು ನೀಡಿರುವ ದೂರು ಆಧರಿಸಿ ರಾಮನಗರ ಜಿಲ್ಲೆ ಮಾಗಡಿ ತಾಲೂಕಿನ ಸೋಲೂರು ನಿವಾಸಿ ಕೆ.ಸಿ.ವಿನುತಾ ಎಂಬುವರ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರಿನ ಕೆ.ಸಿ. ವಿನುತಾ ಅವರನ್ನು ತಮ್ಮ ಆಪ್ತ ಸಹಾಯಕರನ್ನಾಗಿ ನೇಮಿಸುವಂತೆ ಶಾಸಕರು ಮನವಿ ಮಾಡಿರುವಂತೆ ಶಾಸಕರ ಲೆಟರ್‌ಹೆಡ್‌ನಲ್ಲಿ ಪತ್ರ ತಯಾರಿಸಿ, ಸಹಿ ಮಾಡಿ ವಿಧಾನಸಭಾ ಸಚಿವಾಲಯಕ್ಕೆ ಸಲ್ಲಿಸಲಾಗಿದೆ. ಶಾಮನೂರು ಶಿವಶಂಕರಪ್ಪ ಅವರೇ ನೀಡಿರುವ ಪತ್ರವೆಂದು ಭಾವಿಸಿದ್ದ ಸಚಿವಾಲಯದ ಅಧಿಕಾರಿಗಳು, ವಿನುತಾ ಅವರನ್ನು ಆಪ್ತ ಸಹಾಯಕರನ್ನಾಗಿ ನೇಮಿಸಿ ಆದೇಶ ಹೊರಡಿಸಿದ್ದರು. ಬಳಿಕ ತಾವು ಪತ್ರ ನೀಡಿಲ್ಲ, ಅದು ನಕಲಿ ಎಂದು ಶಿವಶಂಕರಪ್ಪ ಅವರು ವಿಧಾನಸಭಾ ಸಚಿವಾಲಯದ ಗಮನಕ್ಕೆ ತಂದರು ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಆರೋಪಿಯನ್ನು ಶೀಘ್ರ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ಪುಟ್ಟಮ್ಮ ನಿಧನ



ಕೆ.ಆರ್.ಪೇಟೆ, ಆ.25–ತಾಲೂಕಿನ ಅಗ್ರಹಾರ ಬಾಚಹಳ್ಳಿ ಗ್ರಾಮದ ಲೇ.ಮೈಲನಹಳ್ಳಿ ದೇವೇಗೌಡರ ಧರ್ಮಪತ್ನಿ ಪುಟ್ಟಮ್ಮ(96) ಭಾನುವಾರ ರಾತ್ರಿ ನಿಧನರಾದರು. ಮೃತರು ನಿವೃತ್ತ ಮೈಸೂರು ಅರಮನೆ ಮಂಡಳಿ ತೋಟಗಾರಿಕಾ ಅಧಿಕಾರಿ ನಂಜುಂಡೇಗೌಡ ಸೇರಿದಂತೆ ಮೂವರು ಪುತ್ರರು, ಮೊಮ್ಮಕ್ಕಳು, ಮರಿ ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಆ.26ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೃಹಲಕ್ಷ್ಮಿ ಹಣದಲ್ಲಿ ಮಹಿಳೆಯರಿಗೆ ಹೋಳಿಗೆ ಊಟ ಹಾಕಿದ ವೃದ್ಧೆ



ರಾಯಬಾಗ. ಆ25– 'ಗೃಹಲಕ್ಷ್ಮಿ' ಯೋಜನೆಯಡಿ ಬಂದ ಹಣದಲ್ಲಿ ತಾಲೂಕಿನ ಸುಟ್ಟಟ್ಟಿಯಲ್ಲಿ ವೃದ್ಧೆಯೊಬ್ಬರು ಊರಿನ ಮಹಿಳೆಯರಿಗೆ ಉಡಿ ತುಂಬಿ ಹೋಳಿಗೆ ಊಟ ಹಾಕಿಸಿದ್ದಾರೆ.


ಇಲ್ಲಿನ ಗ್ರಾಮದೇವತೆ ದೇವಸ್ಥಾನದಲ್ಲಿ ಶುಕ್ರವಾರ ಐವರು ಮಹಿಳೆಯರಿಗೆ ಉಡಿ ತುಂಬಿ, ಗ್ರಾಮದ ಮಹಿಳೆಯರಿಗೆ ಹೋಳಿಗೆ ಊಟ ಹಾಕಿಸಿದ ಅಕ್ಕಾತಾಯಿ ಲಂಗೋಟಿ, 'ಗ್ಯಾರಂಟಿ ಯೋಜನೆ ಜಾರಿಗೊಳಿಸಿ, ಬಡವರ ಬದುಕಿಗೆ ಶಕ್ತಿ ತುಂಬಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒಳಿತಾಗಲಿ' ಎಂದು ದೇವರಲ್ಲಿ ಪ್ರಾರ್ಥಿಸಿದ್ದಾರೆ.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಜಾರಿಗೊಳಿಸಿದ ಗೃಹಲಕ್ಷ್ಮಿ ಯೋಜನೆ ಹಣದಿಂದ ನಮಗೆ ಅನುಕೂಲವಾಗಿದೆ. ನನಗೆ 10 ಕಂತುಗಳ ಹಣ ಬಂದಿದೆ. ನಮ್ಮಂಥವರಿಗೆ ನೆರವಾದ ಸಿದ್ದರಾಮಯ್ಯ ತಮ್ಮ ರಾಜಕೀಯ ಜೀವನದಲ್ಲಿ ಮತ್ತಷ್ಟು ಎತ್ತರಕ್ಕೆ ಬೆಳೆಯಲೆಂದು ದೇವರಲ್ಲಿ ಪ್ರಾರ್ಥಿಸಿ, ಮಹಿಳೆಯರಿಗೆ ಹೋಳಿಗೆ ಊಟ ಹಾಕಿಸಿದ್ದೇನೆ ಎಂದು ಹೇಳಿದರು.

ಸಚಿವೆಯಿಂದ ಸೀರೆ ಉಡುಗೊರೆ: ಅಕ್ಕಾತಾಯಿ ಲಂಗೋಟಿ ಅವರಿಗೆ ಕರೆ ಮಾಡಿ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ್, ರೇಷ್ಮೆ ಸೀರೆಯನ್ನು ಭಾನುವಾರ ಉಡುಗೊರೆಯಾಗಿ ಕೊಟ್ಟಿದ್ದಾರೆ.

ಈಗ ಇಡೀ ಊರಿಗೆ ಹೋಳಿಗೆ ಊಟ ಹಾಕಿಸಿದ್ದಿ. ನಿನ್ನ ಮಗಳಾದ ನನಗೆ ಯಾವಾಗ ಹಾಕಿಸುತ್ತೀ? ಎಂದು ಸಚಿವೆ ಕೇಳಿದಾಗ, ಖಂಡಿತವಾಗಿ ಬಾ. ನಿನಗೂ ಊಟ ಹಾಕಿಸ್ತೀನಿ. ನೀನೇ ನಮಗೆಲ್ಲ ಗೃಹ ಲಕ್ಷ್ಮೀ ಹಣ ಕೊಡುವ ಮನೆ ಮಗಳು. ನಿನಗೆ ಇಲ್ಲ ಎನ್ನಲಾಗುವುದೇ ಎಂದು ಅಕ್ಕಾತಾಯಿ ಹೇಳಿದರು. ಆಗ ಅಕ್ಕಾತಾಯಿ ಅವರಿಗೆ ರೇಷ್ಮೆ ಸೀರೆ ಕಳುಹಿಸುವುದಾಗಿ ಸಚಿವೆ ತಿಳಿಸಿದರು. ನಂತರ ತಮ್ಮ ಸಾರ್ವಜನಿಕ ಸಂಪರ್ಕ ಅಧಿಕಾರಿಯನ್ನು ಅಜ್ಜಿಯ ಮನೆಗೆ ಕಳುಹಿಸಿ, ರೇಷ್ಮೆ ಸೀರೆ ಮತ್ತು ಹೋಳಿಗೆಯನ್ನು ನೀಡಿ ಅಜ್ಜಿಯನ್ನು ಸನ್ಮಾನಿಸಿದ್ದಾರೆ.

ರಸ್ತೆ ಸೌಲಭ್ಯ ಕೇಳಿದ್ದಕ್ಕೆ ಗ್ರಾಮಸ್ಥರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ ಸಚಿವ ಶಿವರಾಜ ತಂಗಡಗಿ



ಕನಕಗಿರಿ/ಗಂಗಾವತಿ (ಕೊಪ್ಪಳ ಜಿಲ್ಲೆ), ಆ.25– ಕನಕಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜೀರಾಳ ಕಲ್ಲುಗಿಡಿ ಗ್ರಾಮದಲ್ಲಿ ರಸ್ತೆ ಸೌಲಭ್ಯ ಕೇಳಿದ್ದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ತಂಗಡಗಿ ಹಾಗೂ ಗ್ರಾಮದ ಹಲವರ ನಡುವೆ ಭಾನುವಾರ ಜಟಾಪಟಿ ನಡೆದಿದೆ. ಈ ವೇಳೆ ಸಚಿವರು ಬಹಿರಂಗವಾಗಿಯೇ ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ.

ಈ ಕುರಿತು ಸಾಮಾಜಿಕ ತಾಣಗಳಲ್ಲಿ ವಿಡಿಯೊ ಹರಿದಾಡುತ್ತಿದ್ದು ಕಲ್ಲುಗಿಡಿ ಗ್ರಾಮ ಪಂಚಾಯಿತಿ ಸದಸ್ಯ ಯಲ್ಲಪ್ಪ ಕುಣಿಕೇರಿ ಹಾಗೂ ಮತ್ತೊಬ್ಬ ಸದಸ್ಯೆಯ ಪತಿ ಪಾಮಣ್ಣ ಚಲವಾದಿ ರಸ್ತೆ ಸೌಲಭ್ಯ ಕಲ್ಪಿಸಿ ಎಂದು ಕೇಳಿಕೊಂಡಾಗ ಸಚಿವರು ಮೊದಲು ಸಮಾಧಾನದಿಂದ ಉತ್ತರಿಸಿದ್ದಾರೆ. ಪ್ರಶ್ನೆ ಕೇಳಿದ ವರು ಮತ್ತೆ ಏರು ಧ್ವನಿಯಲ್ಲಿ ಪ್ರಶ್ನಿಸಿದ್ದು ತಂಗಡಗಿ ಅವರನ್ನು ಕೆರಳುವಂತೆ ಮಾಡಿದೆ. ವಾಗ್ವಾದ ಜೋರಾದಾಗ ಸ್ಥಳೀಯರು ಎರಡೂ ಕಡೆಯವರನ್ನು ಸಮಾಧಾನಪಡಿಸಿದರು.

ಬಳಿಕ ಯಲ್ಲಪ್ಪ ಹಾಗೂ ಪಾಮಣ್ಣ ಅವರನ್ನು ಪೊಲೀಸರು ಗಂಗಾವತಿ ಗ್ರಾಮೀಣ ಠಾಣೆಗೆ ಮಧ್ಯಾಹ್ನ ಕರೆದುಕೊಂಡು ಬಂದಿದ್ದರಿಂದ ಬಿಜೆಪಿ ಕಾರ್ಯಕರ್ತರು ಕೆರಳಿ ದರು. ರಸ್ತೆ ಸೌಲಭ್ಯ ಕೇಳಿದ್ದಕ್ಕೆ ಪೊಲೀಸ್ ಠಾಣೆಗೆ ಕರೆದು ಕೊಂಡು ಬರುತ್ತೀರಾ? ಎಂದು ಪೊಲೀಸರ ಜೊತೆ ವಾಗ್ವಾದ ನಡೆಸಿದರು.

ಸಂಜೆ ಹೊತ್ತಿಗೆ ಪೊಲೀಸ್ ಠಾಣೆಗೆ ಬಂದ ಕನಕಗಿರಿ ಕ್ಷೇತ್ರದ ಮಾಜಿ ಶಾಸಕ ಬಿಜೆಪಿಯ ಬಸವರಾಜ ದಢೇಸೂಗೂರು ರಸ್ತೆ ಸೌಲಭ್ಯ ಕೇಳಿದ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ದಲಿತ ಸಮುದಾಯದ ವ್ಯಕ್ತಿಯಾಗಿದ್ದು ಸಚಿವರು ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ. ದರ್ಪದಿಂದ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಿಗೆ ಸೌಲಭ್ಯ ಕೇಳುವುದು ಕೂಡ ತಪ್ಪೇ ಎಂದು ಪ್ರಶ್ನಿಸಿದರು. ಸಚಿವರ ದುರ್ವರ್ತನೆ ಬಗ್ಗೆ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ದೂರು ನೀಡಲಾಗುವುದು ಎಂದು ತಿಳಿಸಿದರು. ಕಾರ್ಯಕರ್ತರ ಒತ್ತಾಯದ ಬಳಿಕ ಅವರಿಬ್ಬರನ್ನೂ ಠಾಣೆಯಿಂದ ಬಿಟ್ಟು ಕಳುಹಿಸಲಾಯಿತು.

ನೆನಪು, ಅನುಭವ ಕಲಾವಿದನ ದೊಡ್ಡ ಆಸ್ತಿ

ಹಾಸ್ಯನಟ ಮಂಡ್ಯ ರಮೇಶ್ ಅಭಿಮತ



ಹಿರಿಯ ಕಲಾವಿದ ಡಿ.ಬಸಪ್ಪಾಜಿ ಕದಂಬ ಅವರ 95ನೇ ನೆನಪಿನೋತ್ಸವ ಹಾಗೂ 'ವಿಷಜ್ವಾಲೆ' ನಾಟಕ ಪ್ರದರ್ಶನ ಸಮಾರಂಭದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಿ.ಅಶ್ವಥ್ ಕದಂಬ ಹಾಗೂ ಗಾಯಿತ್ರಿ ಕದಂಬ ದಂಪತಿಯನ್ನು ಅಭಿನಂದಿಸಲಾಯಿತು.

ಮೈಸೂರು, ಆ.25(ಎಸ್‌ಪಿಎನ್)– ನೆನಪು, ಅನುಭವಗಳು ಕಲಾವಿದನ ಬಹು ದೊಡ್ಡ ಆಸ್ತಿ ಎಂದು ಹಿರಿಯ ರಂಗಕರ್ಮಿ, ಹಾಸ್ಯನಟ ಮಂಡ್ಯ ರಮೇಶ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದಲ್ಲಿ ಕಿರುರಂಗಮಂದಿರದಲ್ಲಿ ಕದಂಬ ಕಲಾಪೀಠದ ವತಿಯಿಂದ ಆಯೋಜಿಸಿದ್ದ ಹಿರಿಯ ಕಲಾವಿದ ಡಿ.ಬಸಪ್ಪಾಜಿ ಕದಂಬ ಅವರ 95ನೇ ನೆನಪಿನೋತ್ಸವ ಹಾಗೂ 'ವಿಷಜ್ವಾಲೆ' ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.

ಹಿರಿಯ ಕಲಾವಿದ ಡಿ.ಬಸಪ್ಪಾಜಿ ಅವರು, ಧಾರ್ಮಿಕ, ಸಾಮಾಜಿಕ ಹಾಗೂ ರಂಗಭೂಮಿಯಲ್ಲಿ ತೊಡಗಿಸಿದ್ದರು. ಇವರ ಪುತ್ರ ಡಿ.ಅಶ್ವಥ್ ಕದಂಬ ಕೂಡ ಕಲೆ, ನಾಟಕ, ರಂಗಭೂಮಿಯಲ್ಲಿ ಗುರುತಿಸಿಕೊಂಡಿದ್ದಾರೆ. ಕಳೆದ 50 ವರ್ಷಗಳಿಂದ ಡಿ.ಅಶ್ವಥ್ ಅವರು ಕಲೆಯಲ್ಲಿ ಗುರುತಿಸಿಕೊಂಡಿದ್ದಾರೆ. ಇವರಿಗೆ ಇವರ ಪತ್ನಿ ಗಾಯಿತ್ರಿ ಕೂಡ ಸಾಥ್ ನೀಡಿದ್ದಾರೆ ಎಂದರು.

ನನಗೆ ಡಾ.ರಾಜ್‌ಕುಮಾರ್, ಉದಯ್ ಕುಮಾರ್, ಕಲ್ಯಾಣ್ ಕುಮಾರ್, ಲೀಲಾವತಿ, ಜಯಂತಿ ಸೇರಿದಂತೆ ಅನೇಕ ಹಿರಿಯ ಕಲಾವಿದರ ಒಡನಾಟವಿತ್ತು. ಶೂಟಿಂಗ್ ಬಿಡುವಿನ ವೇಳೆ ಅವರ ಜೊತೆ ಕುಳಿತು ಅವರ ಅನುಭವಗಳನ್ನು ಕೇಳುವ ಸದಾವಕಾಶ ಸಿಗುತಿತ್ತು. ಆ ವೇಳೆ ಹಿರಿಯ ಕಲಾವಿದರ ಅನುಭವಗಳು ಕೇಳುವುದೇ ಒಂದು ಆನಂದ. ಡಾ.ರಾಜ್ ಕುಮಾರ್ ಅವರ ಹೇಳುತ್ತಿದ್ದ ಒಂದೊಂದು ಅನುಭವವೂ ಒಂದು ಪುಸ್ತಕ ಭಂಡಾರವೇ ಓದಿದ ಅನುಭವವಾಗುತ್ತಿತ್ತು ಎಂದರು.

ಕಳೆದ ಹಲವು ವರ್ಷಗಳಿಂದ ಕದಂಬ ಕುಟುಂಬ ಮೈಸೂರಿನ ರಂಗಭೂಮಿಯಲ್ಲಿ ತೊಡಗಿಸಿಕೊಂಡು ತನ್ನದೇ ಆದ ಛಾಪು ಮೂಡಿಸಿದೆ. ರಾಜ್ಯ ಸರ್ಕಾರ ಕಲಾವಿದ ಡಿ. ಅಶ್ವಥ್ ಕದಂಬ ಅವರ ಕಲಾ ಸೇವೆಯನ್ನು ಗುರುತಿಸಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಡಿ.ಬಸಪ್ಪಾಜಿ ಅವರು, ಹಲವು ವರ್ಷಗಳ ಕಾಲ ಕಲೆ, ಸಾಹಿತ್ಯ, ನಾಟಕ, ರಂಗಭೂಮಿ ಹಾಗೂ ಧಾರ್ಮಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಇದನ್ನು ಸ್ಥಳೀಯ ಆಡಳಿತ ಗುರುತಿಸಿ, ಉದಯಗಿರಿಯ ವೃತ್ತವೊಂದಕ್ಕೆ ಡಿ.ಬಸಪ್ಪಾಜಿ ವೃತ್ತ ಎಂದು ನಾಮಕರಣ ಮಾಡಿ ಗೌರವಿಸಿದೆ ಎಂದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಕದಂಬ ಕುಟುಂಬ ಮೈಸೂರಿನ ರಂಗಭೂಮಿಗೆ ಸಾಕಷ್ಟು ಕೊಡುಗೆ ನೀಡಿದೆ. ಇಂತಹ ಕುಟುಂಬದ ಹಿನ್ನೆಲೆ ಹೊಂದಿರುವ ಅಶ್ವಥ್ ಕದಂಬ ಅವರಿಗೂ ಮೈಸೂರು ರಂಗಭೂಮಿ ಹಿನ್ನೆಲೆಯುಳ್ಳವರಾಗಿದ್ದಾರೆ. ಅಲ್ಲದೆ, ಕೆಲ ಸಿನಿಮಾಗಳಲ್ಲಿ ನಟಿಸಿ ಹೆಸರುವಾಸಿಯಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಡಿ.ಅಶ್ವಥ್ ಕದಂಬ ಹಾಗೂ ಗಾಯಿತ್ರಿ ಕದಂಬ ದಂಪತಿಯನ್ನು ಅಭಿನಂದಿಸಲಾಯಿತು. ಈ ವೇಳೆ ಡಿ.ಬಸಪ್ಪಾಜಿ ಕದಂಬ ಅವರ 95ನೇ ಜಯಂತಿ ಹಿನ್ನೆಲೆ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಎನ್.ಎಸ್. ರಾವ್ ರಚಿತ, ಡಿ.ಅಶ್ವಥ್ ಕದಂಬ ನಿರ್ದೇಶನದ, ನಾಗಲಿಂಗೇಗೌಡ ಸಂಗೀತ ನೀಡಿರುವ ಬಿ.ವಿದ್ಯಾಸಾಗರ್ ಕದಂಬ ನಿರ್ವಹಣದ ಕದಂಬ ಕಲಾಪೀಠ ತಂಡದ ಕಲಾವಿದರು ಅಭಿನಯಿಸಿರುವ 'ವಿಷಜ್ವಾಲೆ' ನಾಟಕ ಪ್ರದರ್ಶನಗೊಂಡು ಪ್ರೇಕ್ಷಕರ ಮನಸೂರೆಗೊಂಡಿತು.

ಈ ವೇಳೆ ಹಿರಿಯ ರಂಗಕರ್ಮಿ ನಾ.ನಾಗಚಂದ್ರ ಹಿರಿಯ ರಂಗಕರ್ಮಿ ರಾಜಶೇಖರ್ ಕದಂಬ, ಕದಂಬ ಕಲಾಪೀಠದ ಅಧ್ಯಕ್ಷ ಬಿ.ವಿದ್ಯಾಸಾಗರ್ ಕದಂಬ, ಯುವ ಸಾಹಿತಿ ಸತೀಶ್ ಜವರೇಗೌಡ ಉಪಸ್ಥಿತರಿದ್ದರು.

ತ್ಯಾಜ್ಯದಿಂದ ಬೆಟ್ಟದ ಪ್ರದೇಶ ಕಲುಷಿತ

• ಸ್ಟೋನ್ ಹಿಲ್ ಬಳಿ ಅವೈಜ್ಞಾನಿಕ ಕಸ ವಿಲೇವಾರಿ • ಕ್ರಮಕ್ಕೆ ಮಡಿಕೇರಿ ಜನತೆಯ ಆಗ್ರಹ

ಮಡಿಕೇರಿ, ಆ.25–ಮಡಿಕೇರಿ ನಗರಸಭೆ ವ್ಯಾಪ್ತಿ ಸಂಗ್ರಹವಾಗುವ ರಾಶಿ ರಾಶಿ ತ್ಯಾಜ್ಯವನ್ನು ಅನೇಕ ವರ್ಷಗಳಿಂದ ಜ್ಯೋತಿ ನಗರದ ಸ್ಟೋನ್ ಹಿಲ್ ಬಳಿ ಅವೈಜ್ಞಾನಿಕವಾಗಿ ಸುರಿಯಲಾಗುತ್ತಿದೆ.

ಇದು ಮುಂದೊಂದು ದಿನ ನಗರಕ್ಕೆ ಅಪಾಯ ತಂದೊಡ್ಡಲಿದ್ದು, ನಗರಸಭೆ ತಕ್ಷಣ ಎಚ್ಚೆತ್ತುಕೊಂಡು ಜನವಸತಿಯಿಲ್ಲದ ಪ್ರದೇಶದಲ್ಲಿ ಕಸ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕೆಂದು ನಗರದ ನಾಗರಿಕರ ಒತ್ತಾಯವಾಗಿದೆ.

ಪುರಸಭೆಯಾಗಿದ್ದ ಮಡಿಕೇರಿ ನಗರಸಭೆಯಾಗಿ ಮೇಲ್ದರ್ಜೆಗೇರಿದರೂ ಇಲ್ಲಿಯವರೆಗೆ ಕಸ ವಿಲೇವಾರಿ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಿಲ್ಲ. ನಗರದಲ್ಲಿ ಸಂಗ್ರಹವಾಗುವ ಟನ್‌ಗಟ್ಟಲೇ ಕಸವನ್ನು ಕುಡಿಯುವ ನೀರಿನ ಟ್ಯಾಂಕ್ ಇರುವ ಸ್ಟೋಲ್ ಹಿಲ್ ಪ್ರದೇಶದಲ್ಲಿ ಅವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದೆ. ಇದು ಸುತ್ತಲಿನ ಪರಿಸರವನ್ನು ಕಲುಷಿಗೊಳಿಸಿದೆಯಲ್ಲದೆ, ನಿವಾಸಿಗಳು ಸಾಂಕ್ರಾಮಿಕ ರೋಗದ ಭೀತಿ ಎದುರಿಸುವಂತಾಗಿದೆ.

ಕಸದ ರಾಶಿ ಕಸದ ಪರಿಣಾಮ ಮುಂದೊಂದು ದಿನ ಸ್ಟೋಲ್ ಹಿಲ್ ಪ್ರದೇಶ ಕುಸಿಯಲು ಕಾರಣವಾಗಬಹುದು. ಅನಾಹುತ ಎದುರಾಗುವ ಮೊದಲೇ ನಗರಸಭೆ ಗಾಳಿಬೀಡಿನ 2ನೇ ಮೊಣ್ಣಂಗೇರಿಯಲ್ಲಿ ಗುರುತಿಸಿರುವ ಜಾಗದ ತಾಂತ್ರಿಕ ಅಡಚಣೆಗಳನ್ನು ಸರಿಪಡಿಸಿ, ವೈಜ್ಞಾನಿಕ ರೂಪದಲ್ಲಿ ಕಸ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು. ಈ ವಿಚಾರದಲ್ಲಿ ಜಿಲ್ಲಾಧಿಕಾರಿ ಖುದ್ದು ಆಸಕ್ತಿ ವಹಿಸಿ ಕ್ರಮಕ್ಕೆ ಮುಂದಾಗಬೇಕು ಎಂದು ನಗರದ ನಿವಾಸಿಗಳು ಮನವಿ ಮಾಡಿದ್ದಾರೆ.



ಮಡಿಕೇರಿ ಜ್ಯೋತಿ ನಗರದ ಸ್ಟೋನ್ ಹಿಲ್ ಬಳಿ ಅವೈಜ್ಞಾನಿಕವಾಗಿ ತ್ಯಾಜ್ಯ ಸುರಿದಿರುವುದು.

> “ ಗಾಳಿಬೀಡಿನ 2ನೇ ಮೊಣ್ಣಂಗೇರಿಯಲ್ಲಿ ಕಸ ವಿಲೇವಾರಿಗೆ ಜಾಗ ಗುರುತಿಸಲಾಗಿದೆ. ಆ ಸ್ಥಳದ ಆರ್‌ಟಿಸಿ ಕೂಡ ನಗರಸಭೆ ಹೆಸರಿಗೆ ವರ್ಗಾವಣೆಯಾಗಿದೆ. ಉದ್ದೇಶಿತ ಸ್ಥಳದಲ್ಲಿ ನಗರಸಭೆಯಿಂದ ಅಂದಾಜು 50 ಲಕ್ಷ ರೂ. ವೆಚ್ಚದಲ್ಲಿ ರಸ್ತೆಯನ್ನೂ ನಿರ್ಮಿಸಲಾಗಿದೆ. ಅರಣ್ಯ ಇಲಾಖೆ ಈ ಪ್ರದೇಶ ತಮ್ಮದೆಂದು ಪ್ರತಿಪಾದಿಸುತ್ತಿದೆ. ಪರ್ಯಾಯ ಜಾಗವನ್ನು ಅರಣ್ಯ ಇಲಾಖೆಗೆ ನೀಡಿದಲ್ಲಿ ಕಸ ವಿಲೇವಾರಿಗೆ ಅನುಮತಿಸುವುದಾಗಿ ಹೇಳುತ್ತಿದೆ. ನಗರಸಭೆಯಿಂದ ಪರ್ಯಾಯ ಜಾಗ ನೀಡಲು ಅಸಾಧ್ಯವಾಗಿದ್ದು, ಸರ್ಕಾರವೇ ಇದಕ್ಕೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಇದೀಗ ಮಡಿಕೇರಿ ನಗರಸಭೆಗೆ ನೂತನ ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷರ ನೇಮಕ ಆಗಬೇಕಿದ್ದು, ಈ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ವೈಜ್ಞಾನಿಕ ಕಸ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗುವುದು.
>
> –ಎಸ್.ಈ.ಸತೀಶ್, ಸ್ಥಾಯಿ ಸಮಿತಿ ನಿಕಟ ಪೂರ್ವ ಅಧ್ಯಕ್ಷ

> “ ನಗರಕ್ಕೆ ಕುಡಿಯಲು ನೀರು ಸರಬರಾಜು ಮಾಡುವ ಟ್ಯಾಂಕ್ ಬಳಿಯ ಸ್ಟೋಲ್ ಹಿಲ್ ಪ್ರದೇಶದಲ್ಲಿ ಕಸ ವಿಲೇವಾರಿ ಮಾಡುತ್ತಿರುವುದು ನಿಯಮಬಾಹಿರ ಕ್ರಮವಾಗಿದೆ. ಇಲ್ಲಿನ ಅವ್ಯವಸ್ಥೆಗಳ ಬಗ್ಗೆ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಿ ಹೈಟೆಕ್ ವ್ಯವಸ್ಥೆಗೆ ಯೋಜನೆ ರೂಪಿಸಿ, ಪ್ರಸ್ತಾವನೆ ಸಲ್ಲಿಸಬೇಕು. ಜನಪ್ರತಿನಿಧಿಗಳು ಈ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು. ಈಗಾಗಲೇ ಕಸ ವಿಲೇವಾರಿಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ.
>
> –ಹೆಚ್.ಎಂ.ಕೃಷ್ಣ, ಸಾಮಾಜಿಕ ಚಿಂತಕ

ಶೇ.70ರಿಂದ 80ರಷ್ಟು ಕಾಫಿ ಕಾಳುಮೆಣಸು ಫಸಲು ಹಾನಿ ಹಿನ್ನೆಲೆ

ಸೂಕ್ತ ಪರಿಹಾರಕ್ಕೆ ಕಾಫಿ ಬೆಳೆಗಾರರ ಸಂಘ ಒತ್ತಾಯ



ಸುದ್ದಿಗೋಷ್ಠಿಯಲ್ಲಿ ಸೋಮವಾರಪೇಟೆ ತಾಲೂಕು ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಬಿ.ಎಂ.ಮೋಹನ್ ಬೋಪಣ್ಣ ಮಾತನಾಡಿದರು.

ಮಡಿಕೇರಿ, ಆ.25–ಸೋಮವಾರಪೇಟೆ ತಾಲೂಕು ವ್ಯಾಪ್ತಿ ಅತಿ ಮಳೆಯಿಂದ ಕಾಫಿ ಹಾಗೂ ಕಾಳುಮೆಣಸು ಫಸಲಿಗೆ ಹಾನಿಯಾಗಿದ್ದು, ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಸೋಮವಾರಪೇಟೆ ತಾಲೂಕು ಕಾಫಿ ಬೆಳೆಗಾರರ ಸಂಘ ಒತ್ತಾಯಿಸಿದೆ.

ಸೋಮವಾರಪೇಟೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಬಿ.ಎಂ. ಮೋಹನ್ ಬೋಪಣ್ಣ, 2023–24ನೇ ಸಾಲಿನಲ್ಲಿ ಕಾಫಿ ಮತ್ತು ಕಾಳುಮೆಣಸು ಫಸಲು ಶೇ.70ರಿಂದ 80ರಷ್ಟು ಹಾನಿಯಾಗಿದೆ. ಈ ಹಿನ್ನೆಲೆಯಲ್ಲಿ ಎಸ್‌ಡಿಆರ್‌ಎಫ್ ಮತ್ತು ಎನ್‌ಡಿಆರ್‌ಎಫ್ ವತಿಯಿಂದ ಹೆಕ್ಟೇರ್‌ಗೆ ಕನಿಷ್ಠ 1 ಲಕ್ಷ ರೂ. ಬೆಳೆಹಾನಿ ಪರಿಹಾರ ನೀಡಬೇಕೆಂದು ಆಗ್ರಹಿಸಿದರು.

2022–23ನೇ ಸಾಲಿನಲ್ಲಿ ವಾಡಿಕೆ ಹಿಂಗಾರು ಮಳೆ ಕಡಿಮೆಯಾದ ಹಿನ್ನೆಲೆಯಲ್ಲಿ ಬಿಸಿಲಿನ ತಾಪಕ್ಕೆ ಅರೇಬಿಕಾ ಕಾಫಿ ಗಿಡಗಳು ಬಿಳಿ ಕಾಂಡಕೊರಕ ಕೀಟ ಬಾಧೆಯಿಂದ ನಾಶವಾಗಿದ್ದವು. ಇದರಿಂದ ಮಾರ್ಚ್, ಏಪ್ರಿಲ್‌ನಲ್ಲಿ ಹೂಮಳೆ ಬರಲಿಲ್ಲ. ಕಡಿಮೆ ಪ್ರಮಾಣದಲ್ಲಿ ಮಳೆ ಬಿದ್ದು ಬಿಸಿಲಿನ ತಾಪಕ್ಕೆ ಹೂ ಒಣಗಿ ನಷ್ಟವಾಗಿದೆ. ಜೂನ್, ಜುಲೈನಲ್ಲಿ ವಾಡಿಕೆ ಮಳೆಗಿಂತ ಶೇ.70ರಷ್ಟು ಹೆಚ್ಚಿನ ಮಳೆಯಾಗಿ ಕಾಫಿ, ಕಾಳುಮೆಣಸು ಫಸಲು ಶೇ.70ರಷ್ಟು ಹಾನಿಯಾಗಿದೆ. ಕಾಳುಮೆಣಸು ಬಳ್ಳಿಗಳು ಸೊರಗು ರೋಗಕ್ಕೆ ತುತ್ತಾಗಿ ಬಳ್ಳಿಗಳು ಕೊಳೆತು ಹೋಗಿವೆ. ಅರೇಬಿಕಾ ಕಾಫಿ ತೋಟಗಳು ರೋಗ ಪೀಡಿತವಾಗಿವೆ ಎಂದು ಅಳಲು ತೋಡಿಕೊಂಡರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಕಾಫಿ ವಿದೇಶಿ ವಿನಿಮಯದ ತೆರಿಗೆಯಿಂದ ಸಾವಿರಾರು ಕೋಟಿ ರೂ. ಆದಾಯ ಬರುತ್ತಿದೆ. ಕೊಡಗಿನಲ್ಲಿ ಕಾಫಿ ಪುನಶ್ಚೇತನಕ್ಕೆ ಸರ್ಕಾರಗಳು ವಿಶೇಷ ಪ್ಯಾಕೇಜ್ ಘೋಷಿಸಬೇಕು. ಸರ್ಕಾರದ ಸೌಲಭ್ಯಗಳು ಸಿಗದೇ ಈಗಾಗಲೇ ಕೊಡಗಿನ ಕಿತ್ತಳೆ ಅವಸಾನವಾಗಿದೆ. ಕಾಫಿ ಉದ್ದಿಮೆಗೆ ಸೌಲಭ್ಯ ನೀಡದಿದ್ದರೆ ಕೊಡಗಿನಲ್ಲಿ ಕಾಫಿ ಅವಸಾನದ ಅಂಚಿಗೆ ತಲುಪಲಿದೆ ಎಂದು ಎಚ್ಚರಿಸಿದರು.

ಕಾಫಿ ಮಂಡಳಿ, ತೋಟಗಾರಿಕೆ, ಕಂದಾಯ ಇಲಾಖೆ ಜಂಟಿಯಾಗಿ ಸೋಮವಾರಪೇಟೆ ತಾಲೂಕಿನಾದ್ಯಂತ ವೈಜ್ಞಾನಿಕ ರೀತಿ ಗ್ರಾಮವಾರು ಸಮೀಕ್ಷೆ ನಡೆಸಬೇಕು. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಣ್, ಜಿಲ್ಲೆಯ ಶಾಸಕರು ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಬಿ.ಎಂ. ಲವ, ಕೆ.ಪಿ.ಬಸಪ್ಪ, ಪದಾಧಿಕಾರಿಗಳಾದ ಅನಂತ ರಾಮ್, ಸೋಮಶೇಖರ್, ತಾಕೇರಿ ಪ್ರಕಾಶ್ ಉಪಸ್ಥಿತರಿದ್ದರು.

ಸರ್ಕಾರಿ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿ ವಿತರಣೆ



ವಿ.ಬಾಡಗ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಬೆಂಗಳೂರಿನ ಯುಎಸ್‌ಟಿ ಸಂಸ್ಥೆ ವತಿಯಿಂದ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

ಸಿದ್ದಾಪುರ, ಆ.25– ಬೆಂಗಳೂರಿನ ಪ್ರತಿಷ್ಠಿತ ಯುಎಸ್‌ಟಿ ಸಂಸ್ಥೆ ವತಿಯಿಂದ ವಿರಾಜಪೇಟೆ ತಾಲೂಕಿನ ವಿ.ಬಾಡಗ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಬ್ಯಾಗ್ ಹಾಗೂ ಲೇಖನಿ ಸಾಮಗ್ರಿಗಳನ್ನು ವಿತರಿಸಲಾಯಿತು.

ಇದೇ ವೇಳೆ ಬೆಂಗಳೂರಿನ ಬನವಾಸಿ ಕನ್ನಡಿಗರು ಕನ್ನಡಮಯ ಟ್ರಸ್ಟ್‌ನ ಸಂಸ್ಥಾಪಕ ಜೈ ಕಿರಣ್ ಮಾತನಾಡಿ, ಗ್ರಾಮೀಣ ಭಾಗದ ಸರ್ಕಾರಿ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದ್ದಾರೆ.

ಯುಎಸ್‌ಟಿ ಸಂಸ್ಥೆ ಹಲವು ವರ್ಷಗಳಿಂದ ಸಂಕಷ್ಟದಲ್ಲಿರುವ ಕುಟುಂಬಗಳಿಗೆ ಉಪಯುಕ್ತ ಕಿಟ್ ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕಲಿಕಾ ಸಾಮಗ್ರಿಗಳನ್ನು ರಾಜ್ಯಾದ್ಯಂತ ನೀಡಲಾಗುತ್ತಿದೆ. ಕೊಡಗು ಜಿಲ್ಲೆಗೂ ಸಂಸ್ಥೆಯ ತನ್ನದೇ ಕೊಡುಗೆ ನೀಡುತ್ತಿದೆ ಎಂದರು.

ಬನವಾಸಿ ಕನ್ನಡಿಗರು ಕನ್ನಡಮಯ ಟ್ರಸ್ಟ್‌ನ ಪ್ರಮುಖ ಶಮಂತ್ ಹೊಸಹೂಳಲು ಮಾತನಾಡಿ, ವಿರಾಜಪೇಟೆ ತಾಲೂಕಿನ ವಿ.ಬಾಡಗ, ಕಲ್ತೋಡು, ಕುಟ್ಟಂದಿ ಸೇರಿದಂತೆ ಕಾಡಂಚಿನ ಸುಮಾರು 150 ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳನ್ನ ವಿತರಿಸಲಾಗಿದೆ ಎಂದು ಹೇಳಿದರು.

ಇದೇ ವೇಳೆ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿ ಗೀತಾಂಜಲಿ, ಪೊನ್ನಂಪೇಟೆ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಕಿಶೋರ್ ನಾಚಪ್ಪ, ವಿ.ಬಾಡಗ ಶಾಲಾ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕಂಜಿತಂಡ ಗಿಣಿ ಮೊಣ್ಣಪ್ಪ, ಬನವಾಸಿ ಕನ್ನಡಿಗರು ಕನ್ನಡಮಯ ಟ್ರಸ್ಟ್‌ನ ಕಿರಣ್ಮಯೀ ಶರ್ಮಾ, ಕುಟ್ಟಂದಿ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿ ಧರಣಿ, ಕಲ್ತೋಡು ಶಾಲೆಯ ಸಹ ಶಿಕ್ಷಕಿ ಸಾವಿತ್ರಿ, ಸಹ ಶಿಕ್ಷಕಿ ಕಾವೇರಮ್ಮ, ನಿವೃತ್ತ ಶಿಕ್ಷಕಿ ಸೀತಮ್ಮ, ಪೋಷಕರು ಹಾಜರಿದ್ದರು.

ಕರಾಟೆಯಲ್ಲಿ ಮಿಲನ್ ಕುಮಾರ್‌ಗೆ ಚಿನ್ನದ ಪದಕ



ಮಡಿಕೇರಿ, ಆ. 25–ತಮಿಳುನಾಡಿನ ಕೊಯಮತ್ತೂರಿನ ಶ್ರೀಕೃಷ್ಣ ಗೌಂಡರ್ ಮಂಟಪದಲ್ಲಿ ನಡೆದ 17ನೇ ಐಎಂಜಿಕೆಎ ರಾಷ್ಟ್ರೀಯ ಮುಕ್ತ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಕೊಡಗಿನ ವಿ.ವೈ.ಮಿಲನ್ ಕುಮಾರ್ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದ್ದಾನೆ.

ಟೀಮ್ ಕಥಾ ವಿಭಾಗದಲ್ಲಿ ಪ್ರಥಮ ಸ್ಥಾನ, ಕಥಾ ವಿಭಾಗದಲ್ಲಿ ದ್ವಿತೀಯ ಹಾಗೂ ಕುಮಿತೆ ವಿಭಾಗದಲ್ಲಿ ತೃತೀಯ ಸ್ಥಾನ ಗಳಿಸಿ ಪದಕಗಳನ್ನು ತನ್ನದಾಗಿಸಿಕೊಂಡಿದ್ದಾನೆ.

ಮಡಿಕೇರಿ ಶಾಸ್ತ್ರೀ ನಗರದ ನಿವಾಸಿ ವಿ.ಆರ್.ಯೋಗೇಶ್ ಕುಮಾರ್ ಹಾಗೂ ರೇಖಾ ದಂಪತಿ ಪುತ್ರ ವಿ.ವೈ.ಮಿಲನ್ ಕುಮಾರ್, ನಗರದ ಸಂತ ಮೈಕಲರ ಶಾಲೆಯ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಈತ ವಿರಾಜಪೇಟೆಯ ಕರಾಟೆ ಶಿಕ್ಷಕ ಸೆನ್ಸಾಯಿ ಎಂ.ಬಿ. ಚಂದ್ರನ್ ಅವರಲ್ಲಿ ತರಬೇತಿ ಪಡೆಯುತ್ತಿದ್ದಾನೆ.

ಮಡಿಕೇರಿಯಲ್ಲಿ ಪರಿಸರ ಜಾಗೃತಿ...



ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮಡಿಕೇರಿ ಘಟಕ ಹಾಗೂ ವಿಶ್ವಕರ್ಮ ಸಂಗಡಿಗರ ವತಿಯಿಂದ ಮಡಿಕೇರಿ ವಿಶ್ವಕರ್ಮ ಸಮುದಾಯ ಜಾಗದಲ್ಲಿ ಗಿಡ ನೆಟ್ಟು ಪರಿಸರ ಜಾಗೃತಿ ಮೂಡಿಸಲಾಯಿತು.

ಇಂದು ನೆಲಜಿ ಇಗ್ಗುತಪ್ಪ ಕೈಲ್ ಉತ್ಸವ

ನಾಪೋಕ್ಲು: ಜಿಲ್ಲೆಯ ಪ್ರಮುಖ ಉತ್ಸವಗಳಲ್ಲಿ ಒಂದಾದ ಕೈಲ್ ಉತ್ಸವ ಆ.26ರಂದು ನೆಲಜಿ ಗ್ರಾಮದ ಶ್ರೀ ಇಗ್ಗುತಪ್ಪ ದೇವಸ್ಥಾನದಲ್ಲಿ ನಡೆಯಲಿದೆ. ಉತ್ಸವದ ಅಂಗವಾಗಿ ತುಲಾಭಾರ ಸೇವೆ, ಎತ್ತೊಪೋರಾಟ, ಮಹಾಪೂಜೆ, ದೇವರ ನೃತ್ಯ ಬಲಿ ಹಾಗೂ ಅನ್ನಸಂತರ್ಪಣೆ ನಡೆಯಲಿದೆ. ಹೆಚ್ಚಿನ ಭಕ್ತರು ಉತ್ಸವದಲ್ಲಿ ಭಾಗವಹಿಸಬೇಕು. ಮಾಹಿತಿಗಾಗಿ ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಮುಂಡಂಡ ಎಂ.ನಾಣಯ್ಯ(9341421666) ಅಥವಾ ಕಾರ್ಯದರ್ಶಿ ಮುಕ್ಕಾಟಿರ ಎಂ.ವಿನಯ್(9449554997) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರಕಾಶ ಭವನದಲ್ಲಿ ಸ್ಮೃತಿ ದಿನಾಚರಣೆ



ಚಾಮರಾಜನಗರದಲ್ಲಿ ಬ್ರಹ್ಮಾಕುಮಾರಿ ಪ್ರಕಾಶ್ ಮಣೀಜಿ ಅವರ ಸ್ಮೃತಿ ದಿನ ಆಚರಿಸಲಾಯಿತು.

ಚಾಮರಾಜನಗರ, 25–ಭಾರತ ಆಧ್ಯಾತ್ಮಿಕ ರಾಷ್ಟ್ರ, ಈ ಆಧ್ಯಾತ್ಮಿಕ ಜ್ಞಾನವನ್ನು ವಿಶ್ವದ ನೂರೆಂಭತ್ತು ದೇಶಗಳಿಗೆ ತಲುಪಿಸಿದ ಖ್ಯಾತಿ ಡಾಕ್ಟರ್ ರಾಜಯೋಗಿನಿ ದಾದಿ ಪ್ರಕಾಶ್ ಮಣೀಜಿ ಅವರಿಗೆ ಸಲ್ಲುತ್ತದೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ರಾಜಯೋಗಿನಿ ದಾನೇಶ್ವರಿಜೀ ಹೇಳಿದರು.

ನಗರದ ಪ್ರಕಾಶ ಭವನದಲ್ಲಿ ಏರ್ಪಡಿಸಿದ್ದ ಡಾಕ್ಟರ್ ರಾಜಯೋಗಿನಿ ಬ್ರಹ್ಮಾಕುಮಾರಿ ಪ್ರಕಾಶ್ ಮಣೀಜಿ ಅವರ 17ನೇ ಸ್ಮೃತಿ (ವಿಶ್ವ ಬಂಧುತ್ವ) ದಿನಾಚರಣೆಯಲ್ಲಿ ಮಾತನಾಡಿದ ಅವರು, ದಾದೀಜಿಯವರ ನಿಸ್ವಾರ್ಥ ಪ್ರೀತಿ, ಸ್ನೇಹ ಹಾಗೂ ಭಾಗುವಿಕೆಯ ಶಕ್ತಿಯಿಂದ 60 ಸಾವಿರಕ್ಕೂ ಹೆಚ್ಚು ಸಹೋದರಿಯರು ವಿಶ್ವಕಲ್ಯಾಣ ಕಾರ್ಯದಲ್ಲಿ ತೊಡಗಿಸಲು ಪ್ರೇರಣೆಯಾಗಿದೆ ಎಂದರು.

ಅವರ ಮಾತೃಪೂರ್ಣ ಶಕ್ತಿ ಈ ಸಂಸ್ಥೆಯನ್ನು ಮಹಿಳೆಯರೇ ನಡೆಸುವಂತೆ ಆಧ್ಯಾತ್ಮಿಕ ಸಬಲೀಕರಣಗೊಳಿಸಿದೆ. ಅವರು ವಿಶ್ವ ಮಾತೃ ಹೃದಯಿ ಆಗಿರುವ ಕಾರಣ ಇಂದಿನ ದಿನವನ್ನು ವಿಶ್ವ ಬಂಧುತ್ವ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಿ.ಕೆ.ಆರಾಧ್ಯ ಪುಷ್ಪಶೇಖರ, ಮೂರ್ತಿ, ನಾಗರಾಜು, ಶ್ರೀನಿವಾಸ್, ಸುಂದರ್, ಮರಗತಮ್ಮ, ಆಶಾ, ಗೀತಾ, ಸುನಿತಾ, ಲಕ್ಷ್ಮಿ, ನರಸಿಂಹ, ಪ್ರಸಾದ್ ಹಾಜರಿದ್ದರು.

ರೈತರ ಜಮೀನಿಗೆ ಕಾಲುವೆ ಹೂಳು

• ಭತ್ತದ ನಾಟಿಗೆ ತೊಂದರೆ • ಸಣ್ಣ ನೀರಾವರಿ ಇಲಾಖೆ ವಿರುದ್ಧ ಕೃಷಿಕರ ಆಕ್ರೋಶ



ಮದ್ದೂರು ಗ್ರಾಮದಲ್ಲಿ ಕಾಲುವೆ ಹೂಳನ್ನು ಕೃಷಿ ಜಮೀನಿಗೆ ಸುರಿದಿರುವುದು.

ಯಳಂದೂರು, ಆ.25–ತಾಲೂಕಿನ ಮದ್ದೂರು ಗ್ರಾಮದಲ್ಲಿ ಸಣ್ಣ ನೀರಾವರಿ ಇಲಾಖೆ ವತಿಯಿಂದ ಕಬಿನಿ ಕಾಲುವೆಯಲ್ಲಿ ಹೂಳನ್ನು ತೆಗೆದು ವ್ಯವಸಾಯ ಜಮೀನಿಗೆ ಸುರಿದಿರುವುದರಿಂದ ರೈತರು ತೊಂದರೆ ಅನುಭವಿಸುವಂತಾಗಿದೆ.

ಕಬಿನಿ ಕಾಲುವೆಯಲ್ಲಿ ಬೆಳೆದಿದ್ದ ಮುಳ್ಳಿನ ಗಿಡ, ಬಳ್ಳಿಗಳು ಹಾಗೂ ಪೊದೆಗಳನ್ನು ಜೆಸಿಬಿ ಮೂಲಕ ತೆಗೆದು ಪಕ್ಕದಲ್ಲಿರುವ ರೈತರ ಜಮೀನಿಗೆ ಹಾಕಲಾಗಿದೆ. ಭತ್ತವನ್ನು ಬಿತ್ತಲು ರೈತರು ಈಗಾಗಲೇ ಜಮೀನನ್ನು ಹಸನುಗೊಳಿಸುತ್ತಿದ್ದಾರೆ. ತಮ್ಮ ಜಮೀನಿಗೆ ನೀರನ್ನು ಕಟ್ಟಿದ್ದಾರೆ. ಕೆಲವೆಡೆ ಭತ್ತ ಬಿತ್ತನೆ ಮಾಡಲಾಗಿದೆ. ಈಗ ಜಮೀನಿಗೆ ಹೂಳು ಸುರಿದಿರುವುದರಿಂದ ವ್ಯವಸಾಯಕ್ಕೆ ತೊಂದರೆಯಾಗುತ್ತಿದೆ.

ನೀರು ಬಿಟ್ಟ ಮೇಲೆ ಅಧಿಕಾರಿಗಳು ಕಾಲುವೆಯನ್ನು ಶುಚಿಗೊಳಿಸುತ್ತಿರುವ ಕ್ರಮಕ್ಕೆ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೂಡಲೇ ಕಾಲುವೆಯ ಅಕ್ಕಪಕ್ಕದ ಜಮೀನಿಗೆ ಹಾಕಿರುವ ಹೂಳನ್ನು ತೆಗೆದು ಕೃಷಿ ಅನುಕೂಲ ಮಾಡಿಕೊಡಬೇಕು. ಇಲ್ಲವಾದಲ್ಲಿ ಪ್ರತಿಭಟನೆ ನಡೆಸುವುದಾಗಿ ರೈತರಾದ ಮಂಜುನಾಥ್, ರಂಗಣ್ಣ, ಬಸವಲಿಂಗಮ್ಮ, ಸಿದ್ದನಂಜಮ್ಮ, ಪುಟ್ಟನಂಜಮ್ಮ, ಸಿದ್ದರಾಜು, ನಿಂಗರಾಜು ಎಚ್ಚರಿಸಿದ್ದಾರೆ.

> “ ಜೆಸಿಬಿ ಮೂಲಕ ಕಾಲುವೆ ಹೂಳನ್ನು ಎತ್ತಲಾಗಿದೆ. ಕೆಲ ರೈತರ ಜಮೀನಿನಲ್ಲಿ ಹೂಳು ಹಾಕಲಾಗಿದೆ ಎಂಬ ದೂರುಗಳು ಬಂದಿವೆ. ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ತೆರವುಗೊಳಿಸಲು ಕ್ರಮ ವಹಿಸಲಾಗುವುದು.
>
> –ರಮೇಶ್, ಎಇಇ,ನೀರಾವರಿ ಇಲಾಖೆ



ಬೇಗೂರು ಗ್ರಾಮದ ಸಮುದಾಯ ಆರೋಗ್ಯ ಕೇಂದ್ರಕ್ಕೆ ತೆರಳುವ ಜಾಗದಲ್ಲಿ ಮಳೆ ನೀರು ತುಂಬಿರುವುದು.

ಆರೋಗ್ಯ ಕೇಂದ್ರಕ್ಕೆ ತೆರಳಲು ಬೇಕಿದೆ ಉತ್ತಮ ರಸ್ತೆ

ಬೇಗೂರು, ಆ.25– ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಸಮುದಾಯ ಆರೋಗ್ಯ ಕೇಂದ್ರಕ್ಕೆ ತೆರಳಲು ರಸ್ತೆ ನಿರ್ಮಿಸದಿರುವುದರಿಂದ ರೋಗಿಗಳು ಮತ್ತು ಸಾರ್ವಜನಿಕರು ಪರದಾಡುವಂತಾಗಿದೆ.

ಮೈಸೂರು, ಎಚ್.ಡಿ.ಕೋಟೆ, ಗುಂಡ್ಲುಪೇಟೆ, ನಂಜನಗೂಡು ಹಾಗೂ ಕೇರಳ, ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಹೋಬಳಿ ಕೇಂದ್ರವಾಗಿದೆ ಬೇಗೂರು ಸರ್ಕಾರಿ ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಿದೆ. ಆದರೆ, ರಾಷ್ಟ್ರೀಯ ಹೆದ್ದಾರಿಯಿಂದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಹೋಗಿ ಬರಲು ಸೂಕ್ತ ರಸ್ತೆ ನಿರ್ಮಿಸಿಲ್ಲ.

ಜೊತೆಗೆ ಗ್ರಾಮದ ರಾಮಲಿಂಗೇಶ್ವರ ದೇವಾಲಯ, ಪಂಚಲಿಂಗೇಶ್ವರಸ್ವಾಮಿ ದೇವಾಲಯ ಹಾಗೂ ರುದ್ರಭೂಮಿಗೂ ಸಂಚರಿಸುವ ರಸ್ತೆಗಳಲ್ಲಿ ಮಳೆಗಾಲದಲ್ಲಿ ನೀರು ತುಂಬಿಕೊಂಡರೆ, ಬೇಸಿಗೆಯಲ್ಲಿ ವಾಹನಗಳ ಧೂಳಿನ ಸ್ನಾನವಾಗುತ್ತದೆ. ಇನ್ನೂ ಮಳೆಗಾಲದಲ್ಲಿ ಇಡೀ ರಸ್ತೆ ಕೆಸರುಗದ್ದೆಯಾಗುತ್ತದೆ. ಆದರೂ ಜನಪ್ರತಿನಿಧಿಗಳು ಅಧಿಕಾರಿಗಳು ಈ ರಸ್ತೆಗಳ ಅಭಿವೃದ್ಧಿಗೆ ಗಮನ ಹರಿಸುತ್ತಿಲ್ಲ.

ರಸ್ತೆಗಳ ಎರಡು ಬದಿಯಲ್ಲಿ ಗಿಡಗಂಟಿಗಳು ಸಹ ಬೆಳೆದಿದ್ದು, ಕೊಳಚೆ ನೀರಿನಿಂದ ಸೊಳ್ಳೆ, ನೊಣ, ವಿಷ ಜಂತುಗಳ ಆವಾಸ ಸ್ಥಾನವಾಗಿದೆ. ಈ ಭಾಗದ ಸ್ಥಳೀಯ ಜನಪ್ರತಿನಿಧಿಗಳ ಬೇಜವಾಬ್ದಾರಿತನಕ್ಕೆ ಇದು ಸಾಕ್ಷಿಯಾಗಿದೆ.

> “ ರಸ್ತೆಗಳ ಅಭಿವೃದ್ಧಿಗೆ ಶಾಸಕರ ಗಮನಕ್ಕೆ ತರಲಾಗಿದೆ. ಸಮುದಾಯ ಆರೋಗ್ಯ ಕೇಂದ್ರಕ್ಕೆ ಹೆದ್ದಾರಿಯಿಂದ ಆಸ್ಪತ್ರೆವರೆಗೆ ಉತ್ತಮ ರಸ್ತೆ ನಿರ್ಮಾಣ ಮಾಡಲಾಗುವುದು.
>
> –ಅಲೀಂ ಪಾಷ, ತಾಲೂಕು ಆರೋಗ್ಯಾಧಿಕಾರಿ

ಬಸವೇಶ್ವರ ಪ್ರತಿಮೆ ಕಾಮಗಾರಿ ಸ್ಥಗಿತಗೊಳಿಸಲು ಆಗ್ರಹ


ಚಾಮರಾಜನಗರ, ಆ.25–ನಗರದ ಜಿಲ್ಲಾಡಳಿತ ಭವನದ ಮುಂಭಾಗದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರುಗಡೆ ನಿರ್ಮಿಸುತ್ತಿರುವ ಬಸವೇಶ್ವರರ ರಾಜಪ್ರಭುತ್ವ ಸಂಕೇತವುಳ್ಳ ಪ್ರತಿಮೆ ಕಾಮಗಾರಿ ಸ್ಥಗಿತಗೊಳಿಸಿ, ಸ್ಥಳಾಂತರಗೊಳಿಸಬೇಕು ಎಂದು ಡಾ.ಬಿ.ಆರ್.ಅಂಬೇಡ್ಕರ್ ಪೀಪಲ್ಸ್ ಪಾರ್ಟಿ ಯುವ ಘಟಕದ ರಾಜ್ಯಾಧ್ಯಕ್ಷ ಸಿ.ಎಂ. ಕೃಷ್ಣ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ವೋಚ್ಚ ನ್ಯಾಯಾಲಯದ ಆದೇಶ ಮತ್ತು ರಾಜ್ಯ ಸರ್ಕಾರದ ಸುತ್ತೋಲೆ ಮತ್ತು ನಿರ್ದೇಶನವನ್ನು ಜಿಲ್ಲಾಡಳಿತ ಸ್ಪಷ್ಟವಾಗಿ ಉಲ್ಲಂಘಿಸಿರುವುದು ಅಕ್ಷಮ್ಯ ಅಪರಾಧ ಎಂದರು.

ಬಸವೇಶ್ವರರ ನಿರ್ಮಾಣ ಕಾಮಗಾರಿಯಿಂದ ಮುಂದಿನ ದಿನಗಳಲ್ಲಿ ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗುವ ಗುಣಲಕ್ಷಣಗಳು ಗೋಚರಿಸುತ್ತಿದೆ. ಆದ್ದರಿಂದ ಜಿಲ್ಲಾಡಳಿತ ಎಚ್ಚೆತ್ತುಕೊಂಡು ಕಾಮಗಾರಿ ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ, ಮುಖಂಡರಾದ ಸೋಮಸುಂದರ್, ಅಂಬರೀಶ್, ನಾಗೇಶ್ ಹಾಜರಿದ್ದರು.

ಶಾರ್ಟ್ ಸರ್ಕ್ಯೂಟ್‌ನಿಂದ 4–5 ಎಕರೆ ಕಬ್ಬು ನಾಶ



ಚಿಕ್ಕಾಟ್ಟಿ ಗ್ರಾಮದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಕಬ್ಬು ಸುಟ್ಟುಹೋಗಿರುವುದು.

ಬೇಗೂರು: ಸಮೀಪದ ಚಿಕ್ಕಾಟ್ಟಿ ಗ್ರಾಮದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಭಾನುವಾರ 4–5 ಎಕರೆ ಕಬ್ಬಿನ ಬೆಳೆ ಸುಟ್ಟು ಹೋಗಿದೆ.ಗ್ರಾಮದ ರೈತರಾದ ಅಂದೇನೇಗೌಡ ಮತ್ತು ಸಿ.ಬಿ.ಬೀರೇಗೌಡ ಅವರಿಗೆ ಸೇರಿದ ಸುಮಾರು ನಾಲ್ಕೈದು ಎಕರೆ ಕಬ್ಬಿನ ಗದ್ದೆ ಬೆಂಕಿಯಲ್ಲಿ ಸುಟ್ಟು ಹೋಗಿದೆ.

ಈ ಇಬ್ಬರು ರೈತರು ಬೆಳಗ್ಗೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಟ್ರಾನ್ಸ್‌ಫಾರಂನಿಂದ ಬೆಂಕಿಯ ಕಿಡಿ ಕಾಣಿಸಿಕೊಂಡಿದೆ. ತಕ್ಷಣ ಗುಂಡ್ಲುಪೇಟೆ ಅಗ್ನಿಶಾಮಕ ದಳಕ್ಕೆ ವಿಷಯ ತಿಳಿಸಿದ್ದಾರೆ. ಆದರೆ, ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸುವಷ್ಟರಲ್ಲಿ ಕಬ್ಬು ಬೆಂಕಿಗಾಹುತಿಯಾಗಿದೆ. ನಂತರ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದರು.

ಜಿಲ್ಲೆಯ ಜಾನಪದ ಮಹಾಕಾವ್ಯಗಳು ವಿಶ್ವದಲ್ಲೇ ಶ್ರೇಷ್ಠ

ಮೈವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಎನ್.ಕೆ.ಲೋಲಾಕ್ಷಿ ಅಭಿಮತ

ಚಾಮರಾಜನಗರ, ಆ.25–ಜಿಲ್ಲೆಯಲ್ಲಿ ಜಾನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದೆ. ಇಲ್ಲಿನ ನೈಸರ್ಗಿಕ ಸಂಪತ್ತು ಮತ್ತು ಜಾನಪದ ಮಹಾಕಾವ್ಯಗಳು ವಿಶ್ವದಲ್ಲೇ ಶ್ರೇಷ್ಠವಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಎನ್.ಕೆ.ಲೋಲಾಕ್ಷಿ ಅಭಿಪ್ರಾಯಪಟ್ಟರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕರ್ನಾಟಕ ರಂಗ ಪರಿಷತ್ತು, ರಂಗವಾಹಿನಿ, ಚೇತನ ಕಲಾವಾಹಿನಿ ವತಿಯಿಂದ ನಡೆದ ವಿಶ್ವ ಜಾನಪದ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಜಾನಪದ ಎಂದರೆ ಒಂದು ಪ್ರದೇಶದಲ್ಲಿ ಪರಂಪರೆ ಮತ್ತು ಸಂಸ್ಕೃತಿಯಿಂದ ಸಂಘಟಿತರಾಗಿ ಬದುಕುತ್ತಿರುವ ಜನ ಸಮುದಾಯ. ಆದ್ದರಿಂದ ನಮ್ಮ ನೆಲಮೂಲ ಸಂಸ್ಕೃತಿಯ ಜಾನಪದ ಕಲೆಗಳನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು.

ಜಾನಪದ ಗಾಯಕ ಡಾ.ಅಪ್ಪಗೆರೆ ತಿಮ್ಮರಾಜು ಮಾತನಾಡಿ, ಜಾನಪದ ಕಲೆಗಳ ತವರೂರು ಚಾಮರಾಜನಗರದಲ್ಲಿ ಜಾನಪದ ಲೋಕ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಬೇಕು. ಆ ಮೂಲಕ ಜಾನಪದ ಕಲೆಗಳ ಅಧ್ಯಯನಕ್ಕೆ ಕೇಂದ್ರವಾಗುತ್ತದೆ. ಇಂದಿನ ಯುವ ಸಮುದಾಯಕ್ಕೆ ಜಾನಪದ ಕಲೆಗಳ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಂಗ ಪರಿಷತ್ ಜಿಲ್ಲಾಧ್ಯಕ್ಷ ಸಿ.ಎಂ.ನರಸಿಂಹ ಮೂರ್ತಿ, ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ.ಎನ್.ಮಹದೇವಸ್ವಾಮಿ, ರೋಟರಿ ಸಂಸ್ಥೆ ಅಧ್ಯಕ್ಷ ಎನ್.ನಾಗರಾಜು, ಕನ್ನಡ ವಿಭಾಗದ ಮುಖ್ಯಸ್ಥರಾದ ವರಪ್ರಸಾದ್, ರೂಪಶ್ರೀ ಹಾಜರಿದ್ದರು.



ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಜಾನಪದ ದಿನಾಚರಣೆಯಲ್ಲಿ ಎನ್.ಕೆ.ಲೋಲಾಕ್ಷಿ ಹಾಗೂ ಡಾ.ಅಪ್ಪಗೆರೆ ತಿಮ್ಮರಾಜು ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಮಿತ್ರ

ಒಂದನೇ ಪುಟದಿಂದ

ತೆರವಿಗೆ ಸರ್ಕಾರದ ಆದೇಶ

ರಾಜ್ಯದ ಶಿರೂರು ಬಳಿ ಸಂಭವಿಸಿದ ಗುಡ್ಡ ಕುಸಿತದಲ್ಲಿ 11 ಅಮೂಲ್ಯ ಜೀವಗಳು ಬಲಿಯಾಗಿದ್ದರೆ, ನೆರೆ ರಾಜ್ಯ ಕೇರಳದ ವಯನಾಡಿನಲ್ಲಿ ಸಂಭವಿಸಿರುವ ಗುಡ್ಡ ಕುಸಿತದಲ್ಲಿ 250 ಮುಗ್ಧ ಜನರು ಮೃತಪಟ್ಟಿದ್ದಾರೆ. 200ಕ್ಕೂ ಹೆಚ್ಚು ಜನರು ಕಣ್ಮರೆಯಾಗಿರುವುದು ಅತ್ಯಂತ ನೋವಿನ ಸಂಗತಿ. ಈ ದುರಂತಗಳು ನಮಗೆ ಎಚ್ಚರಿಕೆಯ ಗಂಟೆಯಾಗಿವೆ. ಪಶ್ಚಿಮಘಟ್ಟದಲ್ಲಿ 2015 ರಿಂದೀಚೆಗೆ ಆಗಿರುವ ಎಲ್ಲ ಅರಣ್ಯ ಒತ್ತುವರಿ ತೆರವುಗೊಳಿಸಲು ತಕ್ಷಣವೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಒಂದು ತಿಂಗಳೊಳಗೆ ಕೈಗೊಂಡ ಕ್ರಮದ ವಿವರದೊಂದಿಗೆ ಕಡತದಲ್ಲಿ ವರದಿ ಸಲ್ಲಿಸಬೇಕು ಎಂದು ಸಚಿವ ಈಶ್ವರ್ ಖಂಡ್ರೆ ಸೂಚಿಸಿದ್ದರು. ಗಿರಿ ಮತ್ತು ಘಟ್ಟ ಪ್ರದೇಶದಲ್ಲಿ ವಿಪರೀತವಾಗಿ ವಾಹನಗಳ ಸಂಚಾರದಿಂದಲೂ ಅಪಾಯ ಎದುರಾಗುತ್ತಿದೆ. ವಾರಾಂತ್ಯದಲ್ಲಿ ಪ್ರವಾಸ, ಚಾರಣದ ಹೆಸರಲ್ಲಿ ಗಿರಿ ಮತ್ತು ಕಾನನ ಪ್ರದೇಶಕ್ಕೆ ಸಾವಿರಾರು ಸಂಖ್ಯೆಯಲ್ಲಿ ಜನರು ಬರುವುದೂ ಇಂತಹ ದುರಂತಗಳಿಗೆ ಪೂರಕವಾಗಿದೆ.

ಈ ಹಿನ್ನೆಲೆಯಲ್ಲಿ ಚಿಕ್ಕಮಗಳೂರು, ಶಿವಮೊಗ್ಗ, ಮೈಸೂರು, ಚಾಮರಾಜಗರ, ಬೆಳಗಾವಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಕೊಡಗು, ಹಾಸನ ಸೇರಿದಂತೆ ರಾಜ್ಯದ ಪಶ್ಚಿಮಘಟ್ಟದಲ್ಲಿ 2015ರಿಂದೀಚೆಗೆ ಪಶ್ಚಿಮ ಘಟ್ಟದ ಎಲ್ಲ ಗಿರಿ ಪ್ರದೇಶಗಳಲ್ಲಿ ಅನಧಿಕೃತವಾಗಿ ಮತ್ತು ಅರಣ್ಯ ಪ್ರದೇಶ ಒತ್ತುವರಿ ಮಾಡಿ ನಿರ್ಮಿಸಲಾಗಿರುವ ಬಡಾವಣೆ, ತೋಟ, ಹೋಂ ಸ್ಟೇ ಮತ್ತು ರೆಸಾರ್ಟ್‌ಗಳ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಲು ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ.

ಮೊದಲ ದಿನದ ತಾಲೀಮು ಯಶಸ್ವಿ

ಭೀಮ, ಗೋಪಿ, ಧನಂಜಯ, ರೋಹಿತ, ಲಕ್ಷ್ಮೀ, ವರಲಕ್ಷ್ಮೀ ಮತ್ತು ಏಕಲವ್ಯ ಆನೆಗಳು ಜಂಬೂಸವಾರಿ ಮಾರ್ಗದಲ್ಲಿ ಹೆಜ್ಜೆ ಹಾಕಿದವು.

ರಾಜಮಾರ್ಗದಲ್ಲಿ ಭಕ್ತಿ ಸುಧೆ: ಈ ವರ್ಷದಲ್ಲಿ ಇದೇ ಮೊದಲ ಬಾರಿಗೆ ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಗಜಪಡೆ ಹೆಜ್ಜೆ ಹಾಕಿದ್ದರಿಂದ ಮಾರ್ಗದುದ್ದಕ್ಕೂ ಭಕ್ತಿಯ ಸುಧೆ ಕಂಡು ಬಂದಿತು. ಕೆ.ಆರ್.ವೃತ್ತಕ್ಕೆ ಬರುತ್ತಿದ್ದಂತೆ ಸಯ್ಯಾಜಿರಾವ್ ರಸ್ತೆಯ ಎರಡೂ ಬದಿಯಲ್ಲೂ ಹೂವು, ಹಣ್ಣು ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಗಳು ಗಜಪಡೆಗೆ ಹೂವು, ಹಣ್ಣು ನೀಡಿ ಕೈ ಮುಗಿದು ನಮಿಸಿದರು. ಅಲ್ಲದೆ, ಮಾರ್ಗದಲ್ಲಿ ವಾಹನ ಸವಾರರು ಆನೆಗಳಿಗೆ ಕೈ ಮುಗಿಯುತ್ತಿದ್ದ ದೃಶ್ಯ ಕಂಡು ಬಂದಿತು. ರಾಜಪಥದಲ್ಲಿ ಆನೆಗಳು ದಸರಾ ಕಳೆಕಟ್ಟುವಂತೆ ಮಾಡಿದವು. ನೂರಾರು ಸಾರ್ವಜನಿಕರು ಆನೆಗಳನ್ನು ಕಣ್ತುಂಬಿ ಕೊಂಡರು. ಗಜಪಯಣದಲ್ಲಿ ದಾರಿಹೋಕರ ಚಿತ್ತ ಸಹ ಆನೆಗಳ ಮೇಲೆಯೇ ನೆಟ್ಟಿತ್ತು.

ತಾಲೀಮಿನ ವೇಳೆ ಸಾರ್ವಜನಿಕರು ಆನೆಗಳ ಬಳಿ ನುಸುಳದಂತೆ ಎಚ್ಚರಿಕೆ ವಹಿಸಲಾಗಿತ್ತು. ಆನೆಗಳ ಮುಂದೆ ಹಾಗೂ ಹಿಂದೆ ಪೊಲೀಸ್ ಬೆಂಗಾವಲು ವಾಹನ ತೆರಳುವ ವ್ಯವಸ್ಥೆ ಮಾಡಲಾಗಿತ್ತು. ಅರಣ್ಯ ಸಿಬ್ಬಂದಿ, ಆನೆಗಳ ಉಸ್ತುವಾರಿ ಸಿಬ್ಬಂದಿ, ಆನೆಯ ಪಕ್ಕದಲ್ಲೇ ಸಾಗುವ ಮೂಲಕ ಅಪರಿಚಿತರು ಆನೆಗಳ ಬಳಿ ಬರದಂತೆ ನೋಡಿ ಕೊಂಡರು. ತಾಲೀಮು ಮುಗಿದ ಬಳಿಕ ಬನ್ನಿಮಂಟಪದ ಮೈದಾನದಲ್ಲಿ ಕೆಲ ಕಾಲ ವಿರಮಿಸಿದ ಆನೆಗಳು ಮತ್ತೆ ಅದೇ ಮಾರ್ಗದಲ್ಲಿ ಸಾಗಿ ಅರಮನೆ ತಲುಪಿದವು.

ಕಂಜನ್ ಆನೆಗೆ ವಿಶ್ರಾಂತಿ: ಅನಾರೋಗ್ಯದಿಂದಾಗಿ ಕಾಲು ನೋವಿನ ಬಾಧೆಗೆ ಒಳಗಾಗಿ ರುವ ಕಂಜನ್ ಆನೆಗೆ ಇಂದು ವಿಶ್ರಾಂತಿ ನೀಡಲಾಗಿತ್ತು. ಶನಿವಾರ ತೂಕ ಮಾಡಿಸಲು ಕರೆದೊಯ್ಯುವಾಗ ಕಂಜನ್ ಆನೆ ಕುಂಟಲಾರಂಭಿಸಿತ್ತು. ಅದನ್ನು ಸೂಕ್ಷ್ಮವಾಗಿ ಗಮನಿಸಿ ದಾಗ ಕಂಜನ್ ಆನೆಗೆ ಹೊಟ್ಟೆಯಲ್ಲಿ ಸಮಸ್ಯೆ ಕಂಡು ಬಂದಿತ್ತು. ಈ ಹಿನ್ನೆಲೆಯಲ್ಲಿ ಇಂದು ನಡೆದ ಮೊದಲ ತಾಲೀಮಿನಿಂದ ಅದಕ್ಕೆ ವಿಶ್ರಾಂತಿ ನೀಡಲಾಗಿತ್ತು.

ಬಿಲ್ ಕ್ಲೇಮ್ ಮಾಡಿಕೊಂಡ ಶಾಸಕರು

ಪರಿಷತ್ ಸದಸ್ಯರು ಹಾಗೂ ಶಾಸಕರು ಲಕ್ಷ ಲಕ್ಷ ಹಣವನ್ನು ಕ್ಲೇಮ್ ಮಾಡಿಕೊಂಡಿದ್ದಾರೆ. ಈ ಬಗ್ಗೆ ನೈಜ ಹೋರಾಟಗಾರರ ವೇದಿಕೆಯಿಂದ ಮಾಹಿತಿ ಬಹಿರಂಗವಾಗಿದೆ. ಹೋರಾಟಗಾರರ ವೇದಿಕೆಯ ಎಚ್.ವಿ.ವೆಂಕಟೇಶ್ ಈ ಕುರಿತು ಆರ್‌ಟಿಐ ಮಾಹಿತಿ ಕೇಳಿದ್ದರು. ಅದರಂತೆ ಬಿಜೆಪಿ ಎಂಎಲ್‌ಸಿ ಭಾರತಿ ಶೆಟ್ಟಿ ಒಂದೇ ವರ್ಷದಲ್ಲಿ ದಾಖಲೆಯ 48.70 ಲಕ್ಷ ರೂಪಾಯಿ ಕ್ಲೇಮ್ ಮಾಡಿಸಿಕೊಂಡಿದ್ದಾರೆ. ಅತಿ ಹೆಚ್ಚು ಹಣ ಕ್ಲೇಮ್ ಮಾಡಿದ ವಿಧಾನ ಪರಿಷತ್ ಸದಸ್ಯೆ ಇವರಾಗಿದ್ದಾರೆ.

ಕೋಟ್ಯಧಿಪತಿ ಸಿ.ಪಿ.ಯೋಗೇಶ್ವರ್ 2ನೇ ಸ್ಥಾನದಲ್ಲಿದ್ದಾರೆ. ತಮ್ಮ ಆರೋಗ್ಯಕ್ಕಾಗಿ ಅವರು ಸರ್ಕಾರಿದಂದ 39.64 ಲಕ್ಷ ರೂಪಾಯಿ ಕ್ಲೇಮ್ ಮಾಡಿಸಿಕೊಂಡಿದ್ದಾರೆ. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ತಮ್ಮ ಚನ್ನರಾಜ್ ಹಟ್ಟಿಹೊಳಿ ಮೂರನೇ ಸ್ಥಾನದಲ್ಲಿದ್ದು, ಅಕ್ಕ ಸಚಿವರಾಗಿದ್ದರೂ ಇವರು ಆರೋಗ್ಯಕ್ಕಾಗಿ 17.03 ಲಕ್ಷ ರೂಪಾಯಿ ಬಿಲ್ ಮಾಡಿದ್ದಾರೆ. ಗೋವಿಂದರಾಜು ಕೂಡ ಅತಿ ಹೆಚ್ಚು ಕ್ಲೇಮ್ ಮಾಡಿದ ವ್ಯಕ್ತಿಯಾಗಿದ್ದು, ಒಂದೇ ವರ್ಷದಲ್ಲಿ ಆರೋಗ್ಯಕ್ಕಾಗಿ 7.26 ಲಕ್ಷ ರೂಪಾಯಿ ಸರ್ಕಾರದ ಹಣವನ್ನು ಅವರು ಖರ್ಚು ಮಾಡಿದ್ದಾರೆ. ವಿದಾನಪರಿಷತ್ ಸದಸ್ಯ ಮಧು ಮಾದೇಗೌಡ 2.46 ಲಕ್ಷ, ಹಿರಿಯ ಶಾಸಕ ಲಕ್ಷ್ಮಣ್ ಸವದಿಯಿಂದ ಕೂಡ ಸರ್ಕಾರದ ಹಣವನ್ನು ಆರೋಗ್ಯಕ್ಕಾಗಿ ಖರ್ಚು ಮಾಡಿದ್ದಾರೆ. ಸರ್ಕಾರದಿಂದ ಅವರು 2.41 ಲಕ್ಷ ರೂಪಾಯಿ ಕ್ಲೇಮ್ ಮಾಡಿದ್ದರೆ, ಟಿ.ಎ.ಶರವಣ ಕೂಡ 2.14 ರೂಪಾಯಿ ಹಣ ಕ್ಲೇಮ್ ಮಾಡಿದ್ದಾರೆ.

ಯುವಕರೇ ರಾಜಕೀಯಕ್ಕೆ ಬನ್ನಿ

ಸಮಾಜದ ಎಲ್ಲಾ ವರ್ಗದ ಜನ ಭಾಗವಹಿಸಿದ್ದರು. ಅದೇ ಮನೋಭಾವವನ್ನು ನಾವು ವಿಕಸಿತ ಭಾರತದ ಕಲ್ಪನೆಯನ್ನು ಸಾಕಾರಗೊಳಿಸಲು ಪುನರುಜ್ಜೀವನಗೊಳಿಸ ಬೇಕಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. 113ನೇ ಕಂತಿನ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೊಡ್ಡ ಸಂಖ್ಯೆಯಲ್ಲಿ ಯುವಜನರು ರಾಜಕೀಯಕ್ಕೆ ಸೇರಲು ಸಿದ್ಧವಿದ್ದಾರೆ. ಅವರಿಗೆ ಸರಿಯಾದ ಅವಕಾಶ ಹಾಗೂ ಮಾರ್ಗದರ್ಶನದ ಅಗತ್ಯವಿದೆ ಎಂದು ಹೇಳಿದರು. ಭಾರತ ಚಂದ್ರನ ಮೇಲೆ ಕಾಲಿಟ್ಟ ನೆನಪಿಗಾಗಿ ಆಗಸ್ಟ್ 23ರಂದು ಆಚರಿಸಿದ ರಾಷ್ಟ್ರೀಯ ಬಾಹ್ಯಾಕಾಶ ದಿನದ ಕುರಿತು ಪ್ರಧಾನಿ ನರೇಂದ್ರ ಮೋದಿ ಉಲ್ಲೇಖಿಸಿದರು. ಬಾಹ್ಯಾಕಾಶ ಸ್ಟಾರ್ಟ್‌ಅಪ್‌ಗಳನ್ನು ಮುನ್ನಡೆಸುತ್ತಿರುವ ಹಲವು ಯುವ ಉದ್ಯಮಿಗಳ ಕೆಲಸವನ್ನು ಹಾಗೂ ದೇಶದಲ್ಲಿ ಪ್ರಗತಿ ಕಾಣುತ್ತಿರುವ ಬಾಹ್ಯಾಕಾಶ ವ್ಯವಸ್ಥೆಯನ್ನು ಅವರು ಶ್ಲಾಘಿಸಿದರು.

ಜಿಂದಾಲ್‌ಗೆ ಮಾರಾಟ ಮಾಡಿದ್ದಾರೆ

ಭೂಮಿ ಮಾರಾಟ ಮಾಡುವ ಮುನ್ನ ವಿಸ್ತೃತವಾಗಿ ಚರ್ಚೆ ಮಾಡದೇ ದರ ನಿರ್ಧರಿಸಿರು ವುದು ಹಲವಾರು ಅನುಮಾನಗಳಿಗೆ ಕಾರಣವಾಗಿದೆ ಎಂದರು. ಸರ್ಕಾರದಿಂದ ಮಾಡಲಾಗಿ ರುವ ಈ ಜನವಿರೋಧಿ ನೀತಿ ಬಗ್ಗೆ ಸಿದ್ದರಾಮಯ್ಯ ಅವರು ಮಾತನಾಡಬೇಕು. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂ. ನಷ್ಟ ಆಗುತ್ತದೆ. ಇವರು ತಮ್ಮ 14 ಸೈಟ್‌ಗೆ 62 ಕೋಟಿ ರೂ. ಕೇಳುತ್ತಾರೆ. ಆದರೆ, 3667ನ ಎಕರೆ ಫಲವತ್ತಾದ ಗಣಿ ಭೂಮಿಯನ್ನು ಒಟ್ಟಾರೆ 52 ಕೋಟಿ ರೂ.ಗೆ ಮಾರಾಟ ಮಾಡಿದ್ದಾರೆ ಇದ್ಯಾವ ನ್ಯಾಯ? ಎಂದು ಪ್ರಶ್ನಿಸಿದ ಅವರು, ಈ ವಿಚಾರದಲ್ಲಿ ತರಾತುರಿ ಬೇಡ, ಸರ್ಕಾರದ ಆಸ್ತಿ ಜನರ ಆಸ್ತಿಯಾಗಿದೆ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದಿಟ್ಟು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿದ್ದರೂ ಇಂತಹ ನಿರ್ಧಾರ ತೆಗೆದುಕೊಂಡಿರುವುದಕ್ಕೆ ಸಿಎಂ ಸಿದ್ದರಾಮಯ್ಯ ಉತ್ತರಿಸಬೇಕು ಎಂದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೆಲಿಕಾಪ್ಟರ್‌ನಲ್ಲಿ ಬಂದು ಮುಡಾ ಸೈಟಿಗೆ ಸಂಬಂಧಿಸಿದ ಎಲ್ಲಾ ಫೈಲ್‌ಗಳನ್ನು ತಗೊಂಡು ಹೋಗಿದ್ದಾರೆ. ಮುಡಾಗೆ ಇಷ್ಟೊಂದು ಸೆಕ್ಯುರಿಟಿ ಯಾಕೆ? ಮುಡಾಗೆ ಪ್ರತಿ ತಿಂಗಳು 5 ಕೋಟಿ ರೂ. ಸಂಬಳ ಖರ್ಚು ವೆಚ್ಚಕ್ಕೆ ಬೇಕು. ಎರಡು ತಿಂಗಳಿಂದ 10 ಕೋಟಿ ರೂ. ಖರ್ಚಾಗಿದೆ. ಏನೂ ಕೆಲಸ ಮುಡಾದಿಂದ ನಡೆಯುತ್ತಿಲ್ಲ. ಸಿದ್ದರಾಮಯ್ಯ ಅವರು ಮುಡಾ ಹಗರಣಕ್ಕಾಗಿ ಒನ್ ಮ್ಯಾನ್ ಕಮಿಷನ್ ಮಾಡಿದ್ದಾರೆ. ಒನ್ ಮ್ಯಾನ್ ಕಮಿಷನ್ ಕುಮಾರಕೃಪದಿಂದ ಆಪರೇಟ್ ಆಗುತ್ತಿದೆ. ಒನ್ ಮ್ಯಾನ್ ಕಮಿಷನ್‌ಗಾಗಿಯೇ ಮೇಜು ಖುರ್ಚಿ ಅಂತಾ 1.5 ಕೋಟಿ ಖರ್ಚು ಆಗಿದೆ. ಇನ್ನು ಸಿದ್ದರಾಮಯ್ಯ ರೀಡು ವಿಚಾರದಲ್ಲಿ ಕೆಂಪಣ್ಣ ಆಯೋಗದ ವರದಿ ಬಿಡುಗಡೆ ಮಾಡಿಬೇಕು. ಕೆಂಪಣ್ಣ ವರದಿ ಬಿಡುಗಡೆಯಾದರೆ, ಸಿದ್ದರಾಮಯ್ಯ ಪಂಚೆ ಶರ್ಟು ಎಲ್ಲ ಮಸಿ ಆಗೋದು ಗ್ಯಾರಂಟಿ ಎಂದು ವಾಗ್ದಾಳಿ ಮಾಡಿದರು. ಸಿಎಂ ವಿರುದ್ಧ ಪ್ರಾಸಿಕೂಷನ್‌ಗೆ ಅನುಮತಿ ನೀಡಿದ್ದನ್ನು ಸಾಹಿತಿಗಳು ಖಂಡಿಸಿರುವುದನ್ನು ಉಲ್ಲೇಖಿಸಿ ಮಾತನಾಡಿದ ಅವರು, ಇವರೆಲ್ಲಾ ಸರ್ಕಾರಿ ಸಾಹಿತಿಗಳು, ಸರ್ಕಾರದ ಮರ್ಜಿಯಲ್ಲಿ ಇರುವವರು ಎಂದರಲ್ಲದೇ ಚಿಂತಕರು ತಪ್ಪನ್ನು ತಪ್ಪು ಎಂದೇ ಹೇಳಬೇಕು ಎಂದರು.

ಶಾಸಕರಿಗೆ 100 ಕೋಟಿ ಆಫರ್

ಆಪರೇಷನ್ ಕಮಲ ಮೂಲಕ ಕಾಂಗ್ರೆಸ್ ಸರ್ಕಾರವನ್ನು ಕೆಡವಲು ನಮ್ಮ ಶಾಸಕರಿಗೆ ಈ ಹಿಂದೆ 50 ಕೋಟಿ ಆಫರ್ ನೀಡಿದ್ದರು. ಅದು ವಿಫಲವಾದ ಕಾರಣ ಇದೀಗ ಮೊತ್ತವನ್ನು ನೂರು ಕೋಟಿಗೆ ಹೆಚ್ಚಿಸಿದ್ದಾರೆ. ಆದರೂ ಅವರ ಪ್ರಯತ್ನ ವಿಫಲವಾಗುತ್ತದೆ. ನಮ್ಮ ಸರ್ಕಾರ ಬಂಡೆಯಂತೆ ಗಟ್ಟಿಯಾಗಿದೆ. ಅಲುಗಾಡಿಸಲು ಆಗಲ್ಲ. ಕಾಂಗ್ರೆಸ್ ಐದು ವರ್ಷ ಅಧಿಕಾರದಲ್ಲಿರುತ್ತೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾರೆ ಎಂದರು.

ಮುಖ್ಯಮಂತ್ರಿ ಬದಲಾವಣೆ ಬಗ್ಗೆ ನಾನು ಮಾತನಾಡುವುದಿಲ್ಲ. ಸಿಎಂ ಸ್ಟ್ರಾಂಗ್ ಇದ್ದಾರೆ, ಅವರ ಪರ ನಾವೆಲ್ಲರೂ ಇದ್ದೇವೆ. ರಾಜ್ಯಪಾಲರ ನಡೆ ವಿರುದ್ಧ 136 ಶಾಸಕರು ಒಗ್ಗಟ್ಟಾಗಿ ಹೋರಾಟ ಮಾಡುತ್ತಿದ್ದೇವೆ. ಮುಖ್ಯಮಂತ್ರಿಗಳನ್ನು ಇಕ್ಕಟ್ಟಿಗೆ ಸಿಲುಕಿಸಲು ಆಟವಾಡುತ್ತಿದ್ದಾರೆ. ಪಾದಯಾತ್ರೆ ವಿಚಾರದಲ್ಲಿ ಬಿಜೆಪಿಯಲ್ಲೇ ಒಡಕು ಉಂಟಾಗಿದೆ. ಬಿಎಸ್ ಯಡಿಯೂರಪ್ಪ ಬಿ.ವೈ.ವಿಜಯೇಂದ್ರ, ಬಸನಗೌಡ ಪಾಟೀಲ್ ಯತ್ನಾಳ್, ಹೆಚ್.ಡಿ.ಕುಮಾರಸ್ವಾಮಿ ನಡುವೆ ಕಿತ್ತಾಟವಿದೆ ಎಂದು ತಿಳಿಸಿದರು.

ರಾಜ್ಯಪಾಲರ ಕ್ರಮ ಸಂವಿಧಾನ ಬಾಹಿರ: ರಾಜ್ಯಪಾಲರು ದೆಹಲಿಗೆ ಹೋದಾಗ ಅಮಿತ್ ಷಾ, ಕುಮಾರಸ್ವಾಮಿ, ದೇವೇಗೌಡ ಅವರನ್ನು ಭೇಟಿಯಾದರು. ಮರುದಿನ ಬೆಳಿಗ್ಗೆ ಬಂದು ಮುಖ್ಯಮಂತ್ರಿಗಳ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿದ್ದಾರೆ. ಇದು ಸಂವಿಧಾನ ಬಾಹಿರವಾಗಿದೆ. ರಾಜ್ಯಪಾಲರು ಕಾನೂನು ಬಾಹಿರವಾಗಿ ನಡೆದು ಕೊಂಡಿದ್ದಾರೆ. ಅವರ ನಡೆ ವಿರುದ್ಧ ನಾವಿದ್ದೇವೆ. 136 ಸೀಟ್ ಗೆದ್ದಿದ್ದೇವೆ ಅದಕ್ಕೆ ಬಿಜೆಪಿ ಕಾಂಗ್ರೆಸ್ ವಿರುದ್ಧ ಷಡ್ಯಂತ್ರ ಮಾಡುತ್ತಿದೆ ಎಂದು ವಾಗ್ದಾಳಿ ಮಾಡಿದರು.

ಸಂಸ್ಕಾರವಿಲ್ಲದ ಶಿಕ್ಷಣ, ವ್ಯಕ್ತಿಯನ್ನು ಸಮಾಜ ಗುರುತಿಸದು

ಗುರುವಂದನಾ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಡಾ. ಪಿ.ಕೆ.ರಾಜಶೇಖರ್ ಅಭಿಮತ



ಗುರುವಂದನಾ ಹಾಗೂ ಸ್ನೇಹ ಮಿಲನ ಕಾರ್ಯಕ್ರಮವನ್ನು ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಹಾಗೂ ಜಾನಪದ ವಿದ್ವಾಂಸ ಪಿ.ಕೆ.ರಾಜಶೇಖರ್ ಉದ್ಘಾಟಿಸಿದರು.

ಪಿರಿಯಾಪಟ್ಟಣ, ಆ.25– ತಮಗೆ ವಿದ್ಯೆ ಕಲಿಸಿದ ಗುರುಗಳನ್ನು ಒಂದೇ ಕಡೆ ಸೇರಿಸಿ ಗೌರವ ಸಲ್ಲಿಸುವ ಒಂದು ಅದ್ಭುತ ಕ್ಷಣಕ್ಕೆ ಇಂದು ಪಿರಿಯಾಪಟ್ಟಣದ ಡಿಪಿಬಿಎಸ್ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣ ಸಾಕ್ಷಿಯಾಯಿತು.

ಡಿಪಿಬಿಎಸ್ ಪದವಿಪೂರ್ವ ಕಾಲೇಜಿನಲ್ಲಿ 1980 ರಿಂದ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಗುರುವಂದನಾ ಹಾಗೂ ಸ್ನೇಹ ಮಿಲನ ಕಾರ್ಯಕ್ರಮವನ್ನು ನಿವೃತ್ತ ಕನ್ನಡ ಪ್ರಾಧ್ಯಾಪಕರು ಹಾಗೂ ಜಾನಪದ ವಿದ್ವಾಂಸರಾದ ಪಿ.ಕೆ.ರಾಜಶೇಖರ್ ಉದ್ಘಾಟಿಸಿ ಮಾತನಾಡುತ್ತಾ, ಗುರು ಮತ್ತು ಶಿಷ್ಯರ ನಡುವೆ ಅವಿನಾಭಾವ ಸಂಬಂಧ ವಿದೆ, ಹೀಗಾಗಿ ಪುರಾಣ ಪುಣ್ಯಗಳ ಕಾಲ ದಿಂದಲೂ ಅದನ್ನು ವಿವಿಧ ರೀತಿಯಲ್ಲಿ ವಿಶ್ಲೇಷಿಸಲಾಗುತ್ತಿದೆ, ಇದಕ್ಕೆ ಪೂರಕ ವೆಂಬಂತೆ ಇತ್ತೀಚೆಗೆ ವಿದ್ಯಾರ್ಥಿಗಳು ಗುರುವಂದನೆ ಸಲ್ಲಿಸುವ ಮೂಲಕ ಮತ್ತೊಂದು ವಿಶೇಷ ಅರ್ಥ ನೀಡುತ್ತಿರು ವುದು ಸಂತಸದ ವಿಷಯ ಎಂದರು.

ದೇಶದ ಪ್ರಗತಿಗೆ ಶಿಕ್ಷಣವೇ ಆಧಾರ ಸ್ತಂಭವಾಗಿದೆ ಯಾರೂ ಶಿಕ್ಷಣದಿಂದ ವಂಚಿತ ರಾಗಬಾರದು. ಉನ್ನತ ಶಿಕ್ಷಣದಿಂದ ದೊಡ್ಡ ಹುದ್ದೆಗಳು ಗಿಟ್ಟಿಸಿಕೊಳ್ಳಬಹುದು. ಎಲ್ಲದ ಕ್ಕಿಂತ ಪ್ರಮುಖವಾಗಿ ಇಲ್ಲಿ ಸಂಸ್ಕಾರ ಬಹು ಮುಖ್ಯವಾದ ಪಾತ್ರ ವಹಿಸು ತ್ತದೆ. ಸಂಸ್ಕಾರ ಇಲ್ಲದ ಹುದ್ದೆ ಹಾಗೂ ವ್ಯಕ್ತಿಯನ್ನು ಸಮಾಜ ಎಂದಿಗೂ ಗುರುತಿಸುವುದಿಲ್ಲ. ಆದ್ದರಿಂದ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಅಳವಡಿಸಿಕೊಳ್ಳ ಬೇಕು. ಇದು ಅತಿ ಮುಖ್ಯವಾದದ್ದು. ಜೊತೆಗೆ ಈ ಕಾಲೇಜಿನ ಅನೇಕ ವಿದ್ಯಾರ್ಥಿಗಳು ಇಂದು ಉನ್ನತ ಮಟ್ಟದಲ್ಲಿ ಬೆಳೆದಿದ್ದೀರಿ. ಸಮಾಜದಲ್ಲಿ ಇಂದು ಅನೇಕ ರೀತಿಯ ಸಾಮಾಜಿಕ ಕಳಕಳಿಯುಳ್ಳ ಸಮಾಜ ಮುಖಿ ಕಾರ್ಯಕ್ರಮಗಳಿದ್ದು ಅವುಗಳನ್ನು ಗುರುತಿಸಿ ಆದಷ್ಟು ಸಮಾಜಮುಖಿ ಕಾರ್ಯಗಳಿಗೆ ನಿಮ್ಮನ್ನು ನೀವು ತೊಡಗಿಸಿ ಕೊಂಡಾಗ ಮಾತ್ರ ನೀವು ಮಾಡಿದ ಶಿಕ್ಷಣ ನೀವು ಸಮಾಜಕ್ಕೆ ಹಾಗೂ ಗುರು ಗಳಿಗೆ, ವಿದ್ಯೆ ನೀಡಿದ ಸಂಸ್ಥೆಗೆ ನೀಡುವ ನಿಜವಾದ ಕೊಡುಗೆ ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಹಿರಿಯ ವಿದ್ಯಾರ್ಥಿ ಬಳಗದ ಅಧ್ಯಕ್ಷ ಹೇಮಂತ್ ಕುಮಾರ್ ಹಾಗೂ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಪಿ.ಜಿ. ಮೋಹನ್ ಕುಮಾರ್ ಅವರುಗಳು ಸಭೆ ಯನ್ನು ಉದ್ದೇಶಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ನೂತನವಾಗಿ ಆರಂಭಗೊಂಡಿದ್ದ ಕಂಪ್ಯೂಟರ್ ಶಿಕ್ಷಣ ವಿಭಾಗಕ್ಕೆ ಹಿರಿಯ ವಿದ್ಯಾರ್ಥಿ ಬಳಗದ ವತಿಯಿಂದ ಒಟ್ಟು 1,50,000 ಮೌಲ್ಯದ ಆರು ಕಂಪ್ಯೂಟರ್‌ಗಳನ್ನು ಉಡುಗೊರೆ ಯಾಗಿ ನೀಡಲಾಯಿತು. ಸಮಾರಂಭದಲ್ಲಿ ಇದೇ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ನಿವೃತ್ತ ರಾದ ಪ್ರಾಂಶುಪಾಲರು ಹಾಗೂ ಉಪನ್ಯಾಸಕ ರುಗಳಾದ ಡಿ.ವಿ.ಮೋಹನ್, ಎಸ್.ದೇವ ರಾಜ್, ನರಸಿಂಹಮೂರ್ತಿ, ಶೇಖರ ಗೌಡ, ನರಸಿಂಹಮೂರ್ತಿ, ಶಿವಣ್ಣ ತೋಟಗಿ, ವತ್ಸಲ, ಜಯಪ್ರಕಾಶ್, ಚಂದ್ರೇಗೌಡ, ಗೋಪಾಲ್, ರಾಮಚಂದ್ರ, ಜವರಪ್ಪ, ನಾಗರಾಜೇಗೌಡ ಅವರುಗಳನ್ನು ಸನ್ಮಾನಿಸ ಲಾಯಿತು. ಸಮಾರಂಭದಲ್ಲಿ ಹಿರಿಯ ಗೆಳೆಯರ ಬಳಗದ ಹೇಮಂತ್ ಕುಮಾರ್, ಮೋಹನ್ ಕುಮಾರ್, ಎಸ್.ಜೆ.ಸುರೇಶ, ಹೊಸಳ್ಳಿ ವೆಂಕಟೇಶ್, ಮಧು ಆಚಾರ್ಯ, ಬಲರಾಮ್ ಸಿಂಗ್, ಎಂ.ಜೆ.ನಾಯಕ್. ಬಿ.ಎನ್.ರಮೇಶ್, ಮೊಹಮ್ಮದ್ ಶಫಿ, ದೇವಯ್ಯ, ಪಾಂಡು, ಸಿ.ಎನ್.ವಿಜಯ್, ನಟರಾಜ್, ಬಸವರಾಜ್, ಮಂಜುನಾಥ್, ಪಿ.ಕೆ ಶ್ರೀಧರ್, ಮಂಜು ಕುಮಾರ್, ನಂಜ ರಾಜ, ಅಫ್ರೋಜ್ ಪಾಷಾ, ವೀರೇಶ್ ಸೇರಿ ದಂತೆ ನೂರಾರು ವಿದ್ಯಾರ್ಥಿಗಳು ಭಾಗವಹಿಸಿ ದ್ದರು. ಪಟ್ಟಣದ ಪ್ರೌಢಶಾಲೆ ಆವರಣ ದಿಂದ ಆಹ್ವಾನಿತ ಗುರುಗಳನ್ನು ಮೆರವಣಿಗೆಯ ಮೂಲಕ ಕಾರ್ಯಕ್ರಮ ನಡೆಯುವ ಡಿ.ಬಿ.ಪಿ. ಎಸ್. ಕಾಲೇಜಿನ ಆವರಣಕ್ಕೆ ಕರೆತಲಾಯಿತು

ಈ ವಿಶೇಷ ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳು ಶಿಕ್ಷಕರು, ಸ್ನೇಹಿತರ, ಜೊತೆ ತಮ್ಮ ಸ್ನೇಹ ಮಿಲನದಲ್ಲಿ ನಗುತ್ತಾ ತಮ್ಮ ತಮ್ಮ ಬದುಕಿನ ಬಗ್ಗೆ ಹಂಚಿಕೊಂಡರು. ಇನ್ನೂ ವಿದ್ಯಾರ್ಥಿಗಳ ಬಗ್ಗೆ ಶಿಕ್ಷಕರು ಎಳೆ ಎಳೆಯಾಗಿ ಮೆಲುಕು ಹಾಕಿದರು.

ಸಂಭ್ರಮದ ಶ್ರೀನಿವಾಸ ಕಲ್ಯಾಣೋತ್ಸವ

ದೇವರಿಗೆ ಸ್ವರ್ಣಲೇಪಿತ ಕವಚ ಸಮರ್ಪಣೆ



ನಂಜನಗೂಡು: ದಕ್ಷಿಣ ಕಾಶಿ ನಂಜನ ಗೂಡಿನ ಚಾಮುಂಡಿ ಟೌನ್‌ಶಿಪ್‌ನಲ್ಲಿ ರುವ ಶ್ರೀ ಶ್ರೀನಿವಾಸ ಪೆರುಮಾಳ್ ದೇವ ಸ್ಥಾನದಲ್ಲಿ ನೂರಾರು ಭಕ್ತರ ಸಮ್ಮುಖ ದಲ್ಲಿ ಸಂಭ್ರಮದ ಶ್ರೀನಿವಾಸ ಕಲ್ಯಾಣೋ ತ್ಸವ ಜರುಗಿತು. ಬೆಳಗ್ಗೆ ಪ್ರೊ.ಡಾ.ಭಾಷ್ಯಂ ಸ್ವಾಮೀಜಿಗಳ ನೇತೃತ್ವದಲ್ಲಿ ನಡೆದ ಕಲ್ಯಾ ಣೋತ್ಸವದಲ್ಲಿ ವಿವಿಧ ವಿಶೇಷ ಪೂಜಾ ಕೈಂಕರ್ಯಗಳು ನಡೆಯಿತು.

ಇದೇ ವೇಳೆ ಟೌನ್‌ಶಿಪ್ ಹಾಗೂ ದುರ್ಗಾ ಏಜೆನ್ಸಿ ಮುಖ್ಯಸ್ಥರಾದ ತಿರುಮಲೈ ಸ್ವಾಮಿ ತಂಬು ಅವರು, ದೇವರಿಗೆ ಸ್ವರ್ಣ ಲೇಪಿತ ಕವಚವನ್ನು ಕೊಡುಗೆಯಾಗಿ ಸಮರ್ಪಿಸಿ, ಕುಟುಂಬ ಸಮೇತ ಪೂಜಾ ಕಾರ್ಯದಲ್ಲಿ ಪಾಲ್ಗೊಂಡರು. ಅಲ್ಲದೇ ನೂರಾರು ಭಕ್ತರು ಕಲ್ಯಾಣೋತ್ಸವನ್ನು ಕಣ್ತುಂಬಿಕೊಂಡು ದೇವರ ಕೃಪೆಗೆ ಪಾತ್ರರಾದರು. ಪೂಜೆಯಲ್ಲಿ ಪಾಲ್ಗೊಂಡ ಭಕ್ತಾದಿಗಳಿಗೆ ದೇವಾಲಯದಲ್ಲಿ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ದೇವಾಲಯದ ಎನ್.ಶ್ರೀನಿವಾಸನ್ ಸೇರಿದಂತೆ ಇನ್ನಿತರರು ಈ ವೇಳೆ ಉಪಸ್ಥಿತ ರಿದ್ದು, ಕಲ್ಯಾಣೋತ್ಸವದ ಸಕಲ ಸಿದ್ಧತೆ ಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.

ಮೇಘಾಲಯ ರಾಜ್ಯಪಾಲರಿಗೆ ಸನ್ಮಾನ...



ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರನ್ನು ತಿ.ನರಸೀಪುರದ ಬಿಜೆಪಿ ಎಸ್ಸಿ ಮೋರ್ಚ ಮಾಜಿ ಅಧ್ಯಕ್ಷ ಚೌಹಳ್ಳಿ ಸಿದ್ದರಾಜು ಸನ್ಮಾನಿಸಿ ಅಭಿನಂದಿಸಿದರು. ಮುಖಂಡರು ಹಾಗೂ ಕಾರ್ಯಕರ್ತರು, ಮಾಜಿ ಜಿ ಪಂ ಸದಸ್ಯ ಮೂಗೂರು ಎಂ.ಆರ್.ಸೋಮಣ್ಣ, ಅರವಿಂದ್ ಮತ್ತಿತರಿದ್ದಾರೆ.

ಸಿಎಂ ವಿರುದ್ಧ ಬಿಜೆಪಿಯವರಿಂದ ದ್ವೇಷದ ರಾಜಕಾರಣ

ವರುಣ ಆ.25– ಬಿಜೆಪಿಯವರು ದುರುದ್ದೇಶ ಪೂರ್ವಕವಾಗಿ ಹಾಗೂ ದ್ವೇಷದ ರಾಜಕಾರಣ ಮಾಡುವಲ್ಲಿ ನಿಪುಣರಾಗಿದ್ದಾರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನಿಷ್ಪಕ್ಷಪಾತವಾಗಿ ರಾಜಕಾರಣ ಮಾಡಿದರೂ ಸುಖಾಸುಮ್ಮನೆ ಮುಡಾ ವಿಚಾರದಲ್ಲಿ ಆರೋಪ ಮಾಡುತ್ತಿದ್ದಾರೆ ಎಂದು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಕಾಂಗ್ರೆಸ್ ಮುಖಂಡ ಕೃಷ್ಣಮೂರ್ತಿ ವಾಗ್ದಾಳಿ ನಡೆಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಡವರ, ದೀನ–ದಲಿತರ, ಹಿಂದುಳಿದವರ ಪರ ಹೋರಾಟ ಮಾಡಿಕೊಂಡು ಬಂದ ಸಿದ್ದರಾಮಯ್ಯ ನವರು ತಮ್ಮ ರಾಜಕೀಯ ಜೀವನದಲ್ಲಿ ಯಾವ ಸಣ್ಣ ಲೋಪವನ್ನೂ ಮಾಡದೇ ಸ್ವಚ್ಛ ಆಡಳಿತ ನೀಡಿದ್ದಾರೆ. ಇದು ಇಡೀ ರಾಜ್ಯದ ಜನತೆಗೆ ತಿಳಿದ ವಿಷಯ ವಾಗಿದೆ ಎಂದರು. ನಾಡಿಗೆ ಉಚಿತ ವಿದ್ಯುತ್, ಮಹಿಳೆಯರಿಗೆ ಭಾಗ್ಯಲಕ್ಷ್ಮಿ ಯೋಜನೆ, ಸರ್ಕಾರಿ ಬಸ್‌ನಲ್ಲಿ ಉಚಿತ ಪ್ರಯಾಣ ಇದೆಲ್ಲವೂ ಸಿದ್ದ ರಾಮಯ್ಯ ಅವರ ಮಹೋನ್ನತ ಯೋಜನೆಗಳು, ಬಿಜೆಪಿ ಈ ಯೋಜನೆಗಳನ್ನು ನೀಡಲು ಅವರ ರಾಜಕೀಯ ಅಂತ್ಯದ ದಿನಗಳವರೆಗೂ ಸಾಧ್ಯವಾಗ ಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಎದುರಿಸಲು ಸಾಧ್ಯವಾಗದ ಬಿಜೆಪಿಗರು ವಾಮಮಾರ್ಗ ಅನುಸರಿಸಿ ನಿಷ್ಠಾವಂತ ರಾಜಕಾರಣಿ ವಿರುದ್ಧ ಅಪಪ್ರಚಾರ ಮಾಡುತ್ತಿರು ವುದು ಅವರ ಹೇಡಿತನವನ್ನು ತೋರಿಸುತ್ತದೆ ಎಂದರು.

ಸಿದ್ದರಾಮಯ್ಯ ಅವರು ಕೂಡ ವಕೀಲರಾಗಿ ಕಾನೂನುಬದ್ಧವಾಗಿ ವ್ಯವಹರಿಸಿರುತ್ತಾರೆಯೇ ಹೊರತು ಯಾವುದೇ ಲೋಪ ಬರುವಂತಹ ಕೆಲಸ ಮಾಡಿಲ್ಲ. ಮಾಡುವುದೂ ಇಲ್ಲ. ಬಿಜೆಪಿ ಈಗಾಗಲೇ ನೆಲ ಕಚ್ಚಿರುವುದರಿಂದ ಅವರ ಪರಿಸ್ಥಿತಿ ಅಯೋಮಯವಾಗಿ ಸಿದ್ದರಾಮಯ್ಯನವರ ಮೇಲೆ ಆರೋಪ ಮಾಡಿಕೊಂಡು ತಿರುಗುತ್ತಿದೆ ಎಂದರು.

ಹೋಬಳಿ ಮಟ್ಟದಿಂದ ತಾಲೂಕು ಮಟ್ಟಕ್ಕೆ ಆಯ್ಕೆ


ಪ್ರಶಸ್ತಿ ಪತ್ರದೊಂದಿಗೆ ಹೋಬಳಿ ಮಟ್ಟದಿಂದ ತಾಲೂಕು ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳು.



ಸರಗೂರು, ಆ.25–ಆಗತ್ತೂರು ಶಾಲೆಯ ಬಾಲಕಿ ಯರ ಮಕ್ಕಳು ಹೋಬಳಿ ಮಟ್ಟದಿಂದ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದು, ಶಾಲಾ ಶಿಕ್ಷಕರು ಮಕ್ಕಳನ್ನು ಅಭಿನಂದಿಸಿದ್ದಾರೆ.

ಸರಗೂರು ತಾಲೂಕಿನ ದಡದಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ನಡೆಸಲಾದ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಆಗತ್ತೂರು ಶಾಲಾ ಮಕ್ಕಳು ಉತ್ತಮ ಸಾಧನೆ ಮಾಡಿದ್ದು, ಬಾಲಕಿಯರ ವಿಭಾಗದಲ್ಲಿ ಖೋ–ಖೋ, ಕಬಡ್ಡಿ ಎರಡು ಪಂದ್ಯ ದಲ್ಲಿ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಕ್ರೀಡಾಕೂಟದಲ್ಲಿ ಉತ್ತಮವಾಗಿ ಆಟವಾಡಿ ಎರಡು ಪಂದ್ಯದಲ್ಲಿ ಪ್ರಥಮ ಸ್ಥಾನ ತಂದು ಕೊಟ್ಟ ಮಕ್ಕಳಿಗೆ ಶಾಲಾ ಮುಖ್ಯಶಿಕ್ಷರಾದ ಸಿದ್ದರಾಜು, ದೈಹಿಕ ಶಿಕ್ಷಕರಾದ ಬಂಗಾರಯ್ಯ, ಸಹ ಶಿಕ್ಷರಾದ ಜಯರಾಮ್, ಲಕ್ಷ್ಮಿ, ಸಿಂಪಲ್ ಕುಮಾರಿ, ಸರಸ್ವತಿ, ಸುಮಿತ್ರ, ಇವರು ಅಭಿನಂದನೆ ಸಲ್ಲಿಸಿದ್ದಾರೆ.

ಶ್ರೀಗಳಿಂದ ಆಶೀರ್ವಾದ...



ಸುತ್ತೂರಿನ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೇ ಜಯಂತಿ ಮಹೋತ್ಸವದ ಹಿನ್ನೆಲೆಯಲ್ಲಿ ನಂಜನಗೂಡು ಕ್ಷೇತ್ರದ ಶಾಸಕರಾದ ದರ್ಶನ್ ಧ್ರುವನಾರಾಯಣ್ ಅವರು ಮೈಸೂರಿನ ಸುತ್ತೂರು ಮಠಕ್ಕೆ ಭೇಟಿ ನೀಡಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳ ಆಶೀರ್ವಾದ ಪಡೆದರು.

ಅರಕೆರೆ ಬಳಿ ನಾಲೆಯಲ್ಲಿ ಅಪರಿಚಿತನ ಶವ ಪತ್ತೆ

ಕೆ.ಆರ್.ನಗರ, ಆ.25– ಪಟ್ಟಣದ ಹೊರವಲಯ ಅರಕೆರೆ ಬಳಿಯ ಚಾಮರಾಜ ಬಲದಂಡೆಯ ನಾಲೆಯಲ್ಲಿ 35 ರಿಂದ 40 ವರ್ಷದ ಅಪರಿಚಿತ ಗಂಡಸಿನ ಮೃತದೇಹ ಪತ್ತೆಯಾಗಿದೆ. ಈ ಸಂಬಂದ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ವ್ಯಕ್ತಿಯ ಮುಖ ಗುರ್ತಿಸಲು ಸಾಧ್ಯವಾಗದಷ್ಟು ವಿರೂಪವಾಗಿದೆ. ನಾಲಿಗೆಯು ತೆರೆದಿದ್ದು, ನೀರಿನ ಜಲಚರ ಪ್ರಾಣಿಗಳು ಅಲ್ಲಲ್ಲಿ ತಿಂದಿರುವ ಲಕ್ಷಣಗಳಿವೆ. ಮೃತನ ಮೈ ಮೇಲೆ ನೇರಳೆ ಮತ್ತು ಕಪ್ಪು ಮಿಶ್ರಿತ ಚೌಕವುಳ್ಳ ತುಂಬುತೋಳಿನ ಶರ್ಟ್, ಕಪ್ಪು ಬಣ್ಣದ ಬಟ್ಟೆ ಪ್ಯಾಂಟ್ ಮತ್ತು ಕಪ್ಪು ಬಣ್ಣದ ಅಂಡರ್‌ವೇರ್ ಧರಿಸಿದ್ದು, ಬಲದ ಕೈನಲ್ಲಿ CB ಚಂದ್ರಿಕ ಎಂದು ಹಾಗೂ ಎಡ ಕೈನಲ್ಲಿ ಪದ್ಮ YJM ಎಂಬ ಹಸಿರು ಹಚ್ಚೆ ಗುರುತು ಇದೆ.

ವಾರಸುದಾರರು ಕೆ.ಆರ್.ನಗರ ಪೊಲೀಸ್ ಠಾಣೆ 08223– 263666, 9480805036 ಮೈಸೂರು ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ–0821–2418612 ಮಾಹಿತಿ ನೀಡಲು ಕೋರಿದೆ.

ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ...



ತಗಡೂರಿನ ಡಿ.ಕೆ.ಹುಂಡಿ ಹಾಗೂ ಬಸವನಗುಡಿ ಬಳಿ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯಿಂದ ನೂತನವಾಗಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನಂಜನಗೂಡು ತಾಲೂಕು ದಂಡಾಧಿಕಾರಿ, ಜಿಲ್ಲಾ ಆರೋಗ್ಯ ಅಧಿಕಾರಿ, ತಾಲೂಕು ಇಓಗಳು, ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಅಧಿಕಾರಿಗಳು, ತಗಡೂರು ಗ್ರಾಪಂ ಅಧ್ಯಕ್ಷೆ ಚಂದ್ರಾವತಿ ಬಸವರಾಜು, ಉಪಾಧ್ಯಕ್ಷ ಗುರುಮಲ್ಲೇಶ್, ಪಂಚಾಯಿತಿ ಸದಸ್ಯರುಗಳು, ಅಭಿವೃದ್ಧಿ ಅಧಿಕಾರಿ ಬಸವಣ್ಣ, ಪ್ರಸಾದ್ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಹಾಜರಿದ್ದರು.

ನಿವ್ವಳ ಲಾಭದಲ್ಲಿ ಜಿನ್ನಹಳ್ಳಿ ಹಾಲು ಉತ್ಪಾದಕರ ಸಂಘ

ಹೆಚ್.ಡಿ.ಕೋಟೆ, ಆ.25– ಸಹಕಾರ ಸಂಘವು ಉತ್ತಮ ಸ್ಥಿತಿಯಲ್ಲಿದ್ದು, ನಿಮ್ಮಗಳ ಸಹಕಾರದಿಂದ ಈ ಸಾಲಿನಲ್ಲಿ 75 ಸಾವಿರ ರೂಗಳ ನಿವ್ವಳ ಲಾಭವನ್ನು ಗಳಿಸಿದೆ ಎಂದು ಜಿನ್ನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ ತಿಳಿಸಿದರು.

ತಾಲೂಕಿನ ಜಿನ್ನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ 2023–24ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಹೈನುಗಾರಿಕೆ ರೈತರ ಉಪಕಸುಬಾಗಿದ್ದು, ರೈತರ ಕುಟುಂಬದ ನಿರ್ವಹಣೆಗೆ ಹೈನುಗಾರಿಕೆ ಬಹಳ ಉಪಯುಕ್ತವಾಗಿದೆ. ಪ್ರತಿಯೊಬ್ಬರೂ ಸಹ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.



ಹೆಚ್.ಡಿ.ಕೋಟೆ ತಾಲೂಕಿನ ಜಿನ್ನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ ಮಾತನಾಡುತ್ತಿರುವುದು.

ಕಳಪೆ ಹಾಲನ್ನು ತಂದು ಸಂಘದ ಹೆಸರನ್ನು ಕೆಡಿಸುವ ಬದಲು ಉತ್ತಮ ಗುಣಮಟ್ಟದ ಹಾಲನ್ನು ಸಹಕಾರ ಸಂಘದಲ್ಲಿ ಹಾಕುವುದರ ಮುಖಾಂತರ ಉತ್ತಮ ಬೆಲೆಯನ್ನು ಪಡೆದುಕೊಳ್ಳಬಹುದು. ಇದರ ನಿರ್ವಹಣೆಗೆ ಸಂಬಂಧಪಟ್ಟ ವೈದ್ಯರನ್ನು ಪ್ರತಿ 15 ದಿನಕ್ಕೊಮ್ಮೆ ಗ್ರಾಮಕ್ಕೆ ಭೇಟಿ ನೀಡುವಂತೆ ತಿಳಿಸುತ್ತೇವೆ. ನಮ್ಮ ಸಂಘವನ್ನು ಬಾಡಿಗೆ ಮನೆಯಲ್ಲಿ ನಡೆಸುತ್ತಿದ್ದು, ಸ್ವಂತ ಕಟ್ಟಡದ ಅವಶ್ಯಕತೆ ಇರುವುದರಿಂದ ಮುಂದಿನ ವಾರ್ಷಿಕ ಸಭೆಯ ಒಳಗೆ ನಿಮ್ಮಗಳ ಸಹಕಾರ, ಗ್ರಾಮಸ್ಥರ ಸಹಕಾರದಿಂದ ನಮ್ಮ ಆಡಳಿತ ಮಂಡಳಿಯು ಒಕ್ಕೂಟದ ಸಂಬಂಧಪಟ್ಟ ನಿರ್ದೇಶಕರು ಹಾಗೂ ಶಾಸಕರನ್ನು ಭೇಟಿ ಮಾಡಿ ಸರ್ಕಾರದ ಅನುದಾನವನ್ನು ತಂದು ಸ್ವಂತ ಕಟ್ಟಡವನ್ನು ಮಾಡುತ್ತೇವೆ ಎಂದು ತಿಳಿಸಿದರು. ಸಂಘದ ಮೇಲ್ವಿಚಾರಕರಾದ ಯೋಗೇಶ್ ಸಭೆಯಲ್ಲಿ ವಾರ್ಷಿಕ ವರದಿಯನ್ನು ಓದಿದರು. ಇದೇ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಮರಳೂರು ನಾಯಕ, ನಿರ್ದೇ ಶಕರುಗಳಾದ ಸಿದ್ದನಾಯಕ, ಚಿಕ್ಕಣ್ಣ ನಾಯಕ, ರಾಜ ನಾಯಕ, ನಾಗರಾಜು, ಚಿಕ್ಕಣ್ಣ, ನಟರಾಜು, ಕಮಲಮ್ಮ, ಲಿಂಗರಾಜು, ಕೃಷ್ಣ, ನಾಗೇಂದ್ರ, ಕಾರ್ಯ ನಿರ್ವಹಣಾ ಧಿಕಾರಿಯದ ವಿಜಯ್ ಕುಮಾರ್, ಪರೀಕ್ಷಕರಾದ ಪವನ್ ಕುಮಾರ್, ಹಾಗೂ ಉತ್ಪಾದಕರು ಹಾಜರಿದ್ದರು.

ಶಿವಮ್ಮ ನಿಧನ



ತಿ.ನರಸೀಪುರ, ಆ.25– ಹಿರಿಯ ಬಿಜೆಪಿ ಮುಖಂಡ, ಡಣಾನಾಯಕನ ಪುರ ಡೈರಿ ಅಧ್ಯಕ್ಷ ಡಿ.ಎಲ್.ಮಹ ದೇವಪ್ಪ ಅವರ ಮಾತೃಶ್ರೀ ಶಿವಮ್ಮ (95) ಭಾನುವಾರ ನಿಧನರಾದರು.

ಮೃತರು ಇಬ್ಬರು ಪುತ್ರರು, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 2.30ಕ್ಕೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಅಂತಿಮ ದರ್ಶನ ಪಡೆದ ಕಿರಗಸೂರು ಗ್ರಾಪಂ ಸದಸ್ಯ ಮಹದೇವಸ್ವಾಮಿ, ವರುಣ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ವೆಂಕಟರ ಮಣ ಶೆಟ್ಟಿ ಸಂತಾಪ ಸೂಚಿಸಿದ್ದಾರೆ.

ಮಲೆ ಮಹದೇಶ್ವರ, ಮಂಟೇಸ್ವಾಮಿ ಮಹಾಕಾವ್ಯಗಳನ್ನು ಇಂಗ್ಲಿಷ್, ಹಿಂದಿ ಭಾಷೆಗೆ ಅನುವಾದಿಸಬೇಕು

ಕವಿ ಹೆಚ್.ಎಸ್.ಶಿವಪ್ರಕಾಶ್ ಅಭಿಮತ



ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ನಡೆದ 'ಪರಂ ಜ್ಯೋತಿ ಮಂಟೇಸ್ವಾಮಿ ಒಂದು ಮರುದರ್ಶನ' ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಉದ್ಘಾಟಿಸಿದರು.

ಮೈಸೂರು,ಆ.25(ಎಂಟಿವೈ)– ಮಲೆ ಮಹದೇಶ್ವರ, ಮಂಟೇಸ್ವಾಮಿ ಮಹಾಕಾವ್ಯಗಳನ್ನು ಇಂಗ್ಲಿಷ್, ಹಿಂದಿಗೆ ಅನುವಾದಿಸಿ ಜಗತ್ತಿಗೆ ಪರಿಚಯಿಸುವ ಅಗತ್ಯವಿದೆ ಎಂದು ಕವಿ ಎಚ್.ಎಸ್. ಶಿವಪ್ರಕಾಶ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಬೋಧಿವೃಕ್ಷ ಸೊಸೈಟಿ ಫಾರ್ ಡೆವಲಪ್‌ಮೆಂಟ್, ಕರ್ನಾಟಕ ಜಾನಪದ ಅಕಾಡೆಮಿ, ಮೈಸೂರು ವಿವಿ ಸಮಾಜ ಕಾರ್ಯ ವಿಭಾಗ, ಆಕಾಶವಾಣಿ ಮೈಸೂರು ಸಹಯೋಗದಲ್ಲಿ 'ಪರಂ ಜ್ಯೋತಿ ಮಂಟೇಸ್ವಾಮಿ ಒಂದು ಮರುದರ್ಶನ' ರಾಷ್ಟ್ರೀಯ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಲೆ ಮಹದೇಶ್ವರ, ಮಂಟೇಸ್ವಾಮಿ ಮಹಾಕಾವ್ಯಗಳ ಅನುವಾದಕ್ಕೆ ಸರ್ಕಾರ ವಿದ್ವಾಂಸರ ತಂಡ ರಚಿಸಬೇಕು. ಅದಕ್ಕಾಗಿ ವಿಶೇಷ ಅನುದಾನ ಕೊಡಬೇಕು. ವಿನಾಶದ ಅಂಚಿನಲ್ಲಿರುವ ಕಾವ್ಯಗಳನ್ನು ಪುನರುಜ್ಜೀವನಗೊಳಿಸಬೇಕು. ನಾವು ಉಳಿಯಬೇಕಾದರೆ ಮಂಟೇಸ್ವಾಮಿ ಪರಂಪರೆ ಉಳಿಯಬೇಕು. ಶಿಕ್ಷಣ ವ್ಯವಸ್ಥೆ ಮತ್ತು ಚರಿತ್ರೆಯಲ್ಲಿ ಹಿಡಿದ ತಪ್ಪು ದಾರಿಗಳ ಪರಿಣಾಮ ನಮ್ಮ ಪರಂಪರೆಯನ್ನು ಮರೆಯುವಂತಾಯಿತು ಎಂದು ವಿಷಾದಿಸಿದರು.

ನಮ್ಮ ದೇಶದಲ್ಲಿ 3 ಧಾರ್ಮಿಕ ಪರಂಪರೆಗಳಿವೆ. ಅವುಗಳಲ್ಲಿ ಮೊದಲನೆಯದು ಸಮಣ, ಬೌದ್ಧ, ಜೈನ ಇವುಗಳು ವೈರಾಗ್ಯ, ಲೋಕಪರವಾದವು. ಎರಡನೆಯದು ಆಚಾರ್ಯ ಪರಂಪರೆ ವೈದಿಕ, ಆಗಮ– ಜಾತಿ, ಕುಲ, ಮೇಲು ಕೀಳು ಇದೆ. ಮೂರನೆಯದು ಗುರು ಪರಂಪರೆ. ಇಲ್ಲಿ ಜಾತಿ, ಕುಲ, ವಿಧಿ ನಿಯಮಗಳಿಲ್ಲ. ಸರ್ವರನ್ನೂ ಸ್ವೀಕರಿಸುತ್ತದೆ. ಭಾರತದಲ್ಲಿ ಎರಡು ಗುರು ಪರಂಪರೆಗಳಿವೆ. ಉತ್ತರದಲ್ಲಿ ರವಿದಾಸ ಪರಂಪರೆ. ಕರ್ನಾಟಕದಲ್ಲಿ ಮಂಟೇಸ್ವಾಮಿ, ಮಹದೇಶ್ವರ ಮುಖ್ಯಧಾರೆಗಳಿವೆ. ಇವು ಕೊಡೇಕಲ್ಲು ಪರಂಪರೆಯಿಂದ ಬಂದ ಪ್ರವಾಹಗಳಾಗಿವೆ. ಶರಣ ಪರಂಪರೆ ನಿಜವಾದ ಪರಂಪರೆ ಎಂದು ತಿಳಿಸಿದರು.

ಮಂಟೇಸ್ವಾಮಿ, ಮಹದೇಶ್ವರ ಕಾವ್ಯಗಳು ಬುಡಕಟ್ಟು ಕಾವ್ಯವಲ್ಲ. ಈ ಪರಂಪರೆಗಳು ವಿಶಾಲ ಲೋಕ ದೃಷ್ಟಿಯುಳ್ಳ ಪರಂಪರೆಗಳಾಗಿವೆ. ಇವುಗಳಲ್ಲಿ ಪುರಾಣ, ಕಾವ್ಯ, ಮೂಢನಂಬಿಕೆ ಹುಟ್ಟಿದರೂ ಲೋಕ ಕಾರುಣ್ಯದಿಂದ ತುಂಬಿ ತುಳುಕುತ್ತಿದೆ. ಕೊಡೇಕಲ್ಲು, ಕಪ್ಪಡಿ, ಚಿಕ್ಕಲ್ಲೂರು ಜಾತ್ರೆಗಳಲ್ಲಿ ಜನರು ಮಹಾ ಪರಂಪರೆಯಲ್ಲಿ ಬದುಕಿ ಸಂಭ್ರಮಿಸುತ್ತಿದ್ದಾರೆ ಎಂದರು.

ಸಾಹಿತಿ ಬಂಜಗೆರೆ ಜಯಪ್ರಕಾಶ್ ಮಾತನಾಡಿ, ಕವಿ ಹೆಚ್.ಎಸ್. ಶಿವಪ್ರಕಾಶ್ ಅವರು ಮಂಟೇಸ್ವಾಮಿ ನಾಟಕ ಬರೆದು, ದೇವನೂರ ಮಹಾದೇವ ಅವರು ತಮ್ಮ ಕಾದಂಬರಿಯನ್ನು ಮಲೆಯ ಮಹದೇಶ್ವರಗೆ ಅರ್ಪಿಸಿ ಶೈಕ್ಷಣಿಕ ವಲಯಕ್ಕೆ ಅರಿವು ಮೂಡಿಸಿದರು. ದೇವನೂರರು, ದೇವನಾದ ಮಹದೇಶ್ವರರನ್ನು ನೆಲಕ್ಕೆ ತಂದರು. ಹಾಗೇ ತನ್ನ ಪೂರ್ವಿಕ ದೇವರಾಗಿದ್ದ ಎಂಬುದನ್ನು ರೂಪಿಸಿದರು. ನಾವು ಆಧುನಿಕರ ಭ್ರಮೆಯಲ್ಲಿ ಮುಳುಗದೇ ಆಧುನಿಕೋತ್ತರವಾದ ಹಿಮ್ಮುಖ ಚಲನೆಯಲ್ಲಿ ಬಹಳ ಎಚ್ಚರದಿಂದ ನಮ್ಮ ಸಂಸ್ಕೃತಿಯನ್ನು ಮರುರೂಪಿಸಬೇಕಿದೆ. ಅನಿಷ್ಟಗಳನ್ನು ತೊಡೆದು ಭವಿಷ್ಯದ ಕಡೆ ಸಾಗಬೇಕು. ಬೆನ್ನ ಹಿಂದೆ ಮಂಟೇಸ್ವಾಮಿ, ಕಣ್ಮುಂದೆ ಅಂಬೇಡ್ಕರ್ ಇರಿಸಿಕೊಳ್ಳಬೇಕು ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಬಸವೇಶ್ವರ, ಮಹದೇಶ್ವರ, ಮಂಟೇಸ್ವಾಮಿ ಹಾಗೂ ರಾಚಪ್ಪಾಜಿ ಗರ್ಭಗುಡಿಯಲ್ಲಿದ್ದ ದೇವರನ್ನು ಜನರ ಬಳಿಗೆ ತಂದರು. ಜಾತಿ ವ್ಯವಸ್ಥೆಯಲ್ಲಿ ಮೇಲ್ವರ್ಗದವರು ಮಾತ್ರ ಓದುತ್ತಿದ್ದರು. ಶಾಸ್ತ್ರ ಕಂದಾಚಾರದ ನಡುವೆ ವೈದಿಕ ಪರಂಪರೆ ಶೂದ್ರ ಸಮುದಾಯವನ್ನು ಗರ್ಭಗುಡಿ ಮಾತ್ರವಲ್ಲದೆ ದೇವಾಲಯದ ಆವರಣಕ್ಕೂ ಸೇರಿಸುತ್ತಿರಲಿಲ್ಲ. ಇಂತಹ ಸಮಯದಲ್ಲಿ ಮಹದೇಶ್ವರರು, ಮಂಟೇಸ್ವಾಮಿ, ರಾಚಪ್ಪಾಜಿ, ಚೆನ್ನಾಜಮ್ಮ ಜನರೊಂದಿಗೆ ಬೆರೆತು ಆಧ್ಯಾತ್ಮಿಕ ಜ್ಞಾನ ಕೊಟ್ಟರು. ಚಾಮರಾಜನಗರ ಕೊಳ್ಳೇಗಾಲ ಭಾಗದಿಂದ ಬಂದ ಮಹದೇಶ್ವರ, ಮಂಟೇಸ್ವಾಮಿ, ರಾಚಪ್ಪಾಜಿ, ಚೆನ್ನಾಜಮ್ಮ ಅವರ ಬಗ್ಗೆ ಹೆಚ್ಚು ತಿಳಿದುಕೊಳ್ಳುವ ಕೆಲಸ ಈ ಭಾಗದಲ್ಲಿ ಆಗುತ್ತಿಲ್ಲ. ಇವರ ಬಗ್ಗೆ ಹೆಚ್ಚು ತಿಳಿದುಕೊಂಡು ನಮ್ಮ ಸಂಸ್ಕೃತಿ ಪರಂಪರೆ ಉಳಿಸಿ ಬೆಳೆಸುವ ಕೆಲಸ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಈ ಹಿಂದೆ ಹೇಳುವವರು ಎನ್ನುವುದನ್ನು ಯಳವರು ಎಂದು ಮಾಡಿದರು. ಮಹನೀಯರ ಸಂದೇಶವನ್ನು ಮನೆ ಮನೆ ತಲುಪಿಸುವ ಶರಣರನ್ನು ಭಿಕ್ಷುಕರನ್ನಾಗಿ ಮಾಡಿದರು. ಇತ್ತೀಚಿನ ರಾಜಕಾರಣಿಗಳಲ್ಲಿ ಹಲವರು ಯಾವುದಾರೂ ಸಮಾರಂಭಕ್ಕೆ ಬರಬೇಕಾದರೆ ಸಭೆಯಲ್ಲಿ ಜನ ತುಂಬಿದ್ದಾರಾ ಎಂದು ಕೇಳುವ ಪರಿಸ್ಥಿತಿ ಇದೆ ಆದರೆ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಮಂಟೇಸ್ವಾಮಿ, ಮಹದೇಶ್ವರ, ರಾಚಪ್ಪಾಜಿ ಕಾರ್ಯಕ್ರಮ ಎಂದೊಡನೆ ಸಮಾಜಕ್ಕೆ ಉತ್ತಮ ಸಂದೇಶ ಸಾರುವ ಕಾರ್ಯಕ್ರಮ ಎಂದು ತಿಳಿದುಕೊಂಡು ಬಂದಿದ್ದಾರೆ. ಅವರಲ್ಲಿ ಶರಣರ ಗುಣ ಕಾಣಬಹುದು ಎಂದರು.

ಕಾರ್ಯಕ್ರಮದಲ್ಲಿ ಕಪ್ಪಡಿ ಕ್ಷೇತ್ರದ ಮಠಾಧಿಪತಿ ಎಂ.ಎಲ್.ಶ್ರೀಕಂಠ ಸಿದ್ದಲಿಂಗ ರಾಜೇ ಅರಸ್ ಮತ್ತು ಕೊಡೇಕಲ್ಲು ಬಸವ ಪೀಠಾಧಿಪತಿ ವೃಷಭೇಂದ್ರ ಅಪ್ಪನವರು ಸಾನ್ನಿಧ್ಯ ವಹಿಸಿದ್ದರು. ಚಿಂತಕ ಡಾ. ಮಹಾದೇವ ಶಂಕನಪುರ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಆಕಾಶವಾಣಿ ಮೈಸೂರು ನಿಲಯದ ಮುಖ್ಯಸ್ಥ ಉಮೇಶ್ ಎಸ್.ಎಸ್, ಮೈಸೂರು ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಚಂದ್ರಮೌಳಿ, ಬೋಧಿ ಪ್ರಕಾಶನದ ಅಧ್ಯಕ್ಷ ಸತೀಶ್ ಚಂದ್ರ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಡಾ. ಉಮೇಶ್, ಡಾ.ಮೈಸೂರು ಗುರುರಾಜ್ ಉಪಸ್ಥಿತದ್ದರು.

ರಾಜ್ಯಪಾಲರ ನಡೆ ಖಂಡಿಸಿ ಅಹೋರಾತ್ರಿ ಪ್ರತಿಭಟನಾ ಧರಣಿ ಮುಕ್ತಾಯ ; ಇ–ಮೇಲ್ ಚಳವಳಿ ನಡೆಸಲು ನಿರ್ಣಯ

ಮೈಸೂರು,ಆ.25(ಪಿಎಂ)– ಮೈಸೂರಿನ ಚಿಕ್ಕ ಗಡಿಯಾರ ವೃತ್ತದಲ್ಲಿ ವಿವಿಧ ಜನಪರ, ಪ್ರಗತಿಪರ ಸಂಘಟನೆಗಳು ಕರ್ನಾಟಕ ಜನರಂಗ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ರಾಜ್ಯಪಾಲರ ನಡೆ ಖಂಡಿಸಿ 'ರಾಜ್ಯಪಾಲರ ನಡೆಗೆ ನುಡಿ ಖಂಡನೆ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಅಹೋರಾತ್ರಿ ಪ್ರತಿಭಟನಾ ಧರಣಿಯು ಭಾನುವಾರ ಸಂಜೆ ಮುಕ್ತಾಯ ಕಂಡಿತು.

ರಾಜ್ಯಪಾಲರ ರಾಜೀನಾಮೆಗೆ ಒತ್ತಾಯಿಸುವ ಅಥವಾ ರಾಜ್ಯಪಾಲರನ್ನು ವಾಪಸು ಕರೆಸಿಕೊಳ್ಳುವಂತೆ ರಾಷ್ಟ್ರಪತಿಗಳಿಗೆ ಇ–ಮೇಲ್ ರವಾನಿಸುವ ಚಳವಳಿ ರೂಪಿಸಲು ನಿರ್ಣಯ ಕೈಗೊಳ್ಳಲಾಯಿತು. ಅಸಂವಿಧಾನಿಕ ನಡೆ ಅನುಸರಿಸುತ್ತಿರುವ ಕರ್ನಾಟಕದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರೇ ಸಂವಿಧಾನಕ್ಕೆ ಗೌರವ ನೀಡಿ ಅದರ ನಿಯಮಗಳಿಗೆ ತಕ್ಕಂತೆ ನಡೆದುಕೊಳ್ಳುವ ಇಚ್ಛೆ ನಿಮಗೆ ಇಲ್ಲದಿದ್ದರೆ ಗೌರವಯುತವಾಗಿ ನಿಮ್ಮ ಸ್ಥಾನವನ್ನು ಬಿಟ್ಟು ಹೊರಗೆ ಹೋಗಿ ಎಂಬ ಆಗ್ರಹ ಕೇಳಿ ಬಂದಿತು.

ಇದಕ್ಕೂ ಮುನ್ನ ಉಪನ್ಯಾಸ, ಕವಿಗೋಷ್ಠಿ, ಪ್ರಜಾಪ್ರಭುತ್ವ ಮತ್ತು ಸಂವಿಧಾನ ರಕ್ಷಣೆ ಕುರಿತ ಚಿತ್ರ ರಚನಾ ಕಾರ್ಯಕ್ರಮಗಳು ನಡೆದವು. ಇದೇ ವೇಳೆ ನಡೆದ ಕವಿಗೋಷ್ಠಿಯಲ್ಲಿ ಡಾ.ದಿನಮಣಿ, ಕೃಷ್ಣಜನಮನ, ಜಿ.ಪಿ.ಬಸವರಾಜು, ಶಂಕರ ಮತ್ತಿತರರು ಪ್ರಜಾತಂತ್ರ ಹಾಗೂ ಸಮಕಾಲೀನ ಸಮಸ್ಯೆಗಳನ್ನು ಕವಿತೆಯಾಗಿಸಿದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ವಿಶ್ರಾಂತ ಕುಲಪತಿ ಡಾ.ಸಬೀಹಾ ಭೂಮಿಗೌಡ, ಕರ್ನಾಟಕ ಜನರಂಗದ ಸಂಚಾಲಕ ಹಾಗೂ ಹಿರಿಯ ಪತ್ರಕರ್ತ ಟಿ.ಗುರುರಾಜ್ ಸೇರಿದಂತೆ ಮೊದಲಾದವರು ಅಹೋರಾತ್ರಿ ಪ್ರತಿಭಟನಾ ಧರಣಿಯ ಮುಕ್ತಾಯದಲ್ಲಿ ಹಾಜರಿದ್ದರು.

ಎಸ್‌ಸಿ–ಎಸ್‌ಟಿ ಹಿತರಕ್ಷಣಾ ಸಭೆ



ಮೈಸೂರು ತಾಲೂಕು ಜಯಪುರ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಪ್ರಕಾಶ್ ಎತ್ತಿನಮನಿ ನೇತೃತ್ವದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಹಿತರಕ್ಷಣಾ ಸಮಿತಿ ಸಭೆ ನಡೆಯಿತು. ಎಸ್‌ಸಿ–ಎಸ್‌ಟಿ ಸಮುದಾಯದ ಮುಖಂಡರು, ಕ್ರೈಂ ವಿಭಾಗ ಪಿಎಸ್‌ಐ ಹೇಮಲತಾ ಮತ್ತು ಠಾಣಾ ಸಿಬ್ಬಂದಿ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಎಗ್ಗಿಲ್ಲದೆ ನಡೆಯುತ್ತಿದೆ ಕೊಲೆ, ಸುಲಿಗೆ, ಲವ್ ಜಿಹಾದ್

ಬಿಜೆಪಿ ರಾಜ್ಯ ವಕ್ತಾರ ಅಶ್ವಥ್ ನಾರಾಯಣ್ ಆರೋಪ



ಮೈಸೂರು, ಆ.25(ಬಿಎಲ್‌ಯು)– ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದ್ದು, ಕೊಲೆ, ಸುಲಿಗೆ, ಲವ್ ಜಿಹಾದ್ ನಂತಹ ಪ್ರಕರಣಗಳು ನಡೆಯುತ್ತಿದೆ ಎಂದು ಬಿಜೆಪಿ ರಾಜ್ಯ ವಕ್ತಾರ ಅಶ್ವಥ್ ನಾರಾಯಣ್ ಆರೋಪಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ಗೃಹ ಸಚಿವ ಡಾ.ಪರಮೇಶ್ವರ್ ಅವರನ್ನು ಕೇಳಿದರೆ, ಇದೆಲ್ಲಾ ಸಾಮಾನ್ಯವಾಗಿ ನಡೆಯುತ್ತಿರುತ್ತದೆ ಎಂದು ಉಡಾಫೆಯಿಂದ ಉತ್ತರ ನೀಡುತ್ತಾರೆ ಎಂದು ಕಿಡಿಕಾರಿದರು.

ಡಾ.ಪರಮೇಶ್ವರ್ ಅವರ ಈ ಹೇಳಿಕೆಯಿಂದ ಕಾನೂನು ವಿರೋಧಿ ಕೃತ್ಯ ನಡೆಸುವರಿಗೆ ಉತ್ತೇಜನ ದೊರಕಿದಂತಾಗುತ್ತದೆ. ಕೊಲೆಗಾರರು, ದುಷ್ಕರ್ಮಿಗಳು ಯಾವುದೇ ಭಯವಿಲ್ಲದೆ ಓಡಾಡುತ್ತಾರೆ. ಈ ಹಿನ್ನೆಲೆ ತಮ್ಮ ಕರ್ತವ್ಯ ನಿರ್ವಹಿಸಲು ವಿಫಲರಾಗಿರುವ ಡಾ.ಪರಮೇಶ್ವರ್ ಗೃಹ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಬೇಕು ಎಂದು ಆಗ್ರಹಿಸಿದರು.

ರಾಜ್ಯದ ಪ್ರತಿಯೊಂದು ಇಲಾಖೆಯಲ್ಲೂ ಅವ್ಯವಸ್ಥೆ ತಾಂಡವಾಡುತ್ತಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳು ದೊರೆಯುತ್ತಿಲ್ಲ. ಇದರಿಂದ ಹೊರಗಡೆಯಿಂದ ಔಷಧಿ ತರುವಂತೆ ವೈದ್ಯರು ಹೇಳುತ್ತಾರೆ. ಆರ್ಥಿಕವಾಗಿ ಶಕ್ತಿ ಇಲ್ಲದ ಬಡ ಜನರು ಇದರಿಂದ ತೊಂದರೆ ಅನುಭವಿಸುತ್ತಿದ್ದಾರೆ ಎಂದು ದೂರಿದರು.

ಶಿಕ್ಷಕರು ಹಾಗೂ ಆಂಬ್ಯುಲೆನ್ಸ್ ಚಾಲಕರಿಗೆ ವೇತನ ನೀಡದೆ ಸತಾಯಿಸುತ್ತಿದ್ದಾರೆ. ಇಷ್ಟೆಲ್ಲಾ ಅವ್ಯವಸ್ಥೆ ಇದ್ದರೂ ಇದನ್ನು ಮರೆಮಾಚುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅಹಿಂದ ಹೆಸರಿನ ರಕ್ಷಣೆ ಪಡೆಯುತ್ತಿದ್ದಾರೆ ಎಂದು ಅಶ್ವಥ್ ನಾರಾಯಣ್ ಆರೋಪಿಸಿದರು.

ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಡಿಫೆಕ್ಟಿವ್ ನಂಬರ್ ಪ್ಲೇಟ್ ವಾಹನಗಳ ವಿರುದ್ಧ ಪೊಲೀಸರ ಕಾರ್ಯಾಚರಣೆ: ರಾಜ್ಯದಲ್ಲಿ ಮೈಸೂರಿಗೆ 2ನೇ ಸ್ಥಾನ, 22 ದಿನದಲ್ಲಿ 634 ಪ್ರಕರಣ ದಾಖಲು

ಮೈಸೂರು, ಆ.25(ಬಿಎಲ್‌ಯು)– ದೋಷಪೂರಿತ ನೋಂದಣಿ ಫಲಕ (ಡಿಫೆಕ್ಟಿವ್ ನಂಬರ್ ಪ್ಲೇಟ್) ವಿರುವ ವಾಹನಗಳ ವಿರುದ್ಧ ಕಾರ್ಯಾಚರಣೆ ಆರಂಭಿಸಿರುವ ಪೊಲೀಸರು 22 ದಿನಗಳ ಅವಧಿಯಲ್ಲಿ ರಾಜ್ಯದಲ್ಲಿ 19 ಸಾವಿರ ಪ್ರಕರಣ ದಾಖಲಿಸಿದ್ದು, ಮೈಸೂರು ಎರಡನೇ ಸ್ಥಾನದಲ್ಲಿದೆ.

ದೋಷಪೂರಿತ ನೋಂದಣಿ ಫಲಕವಿರುವ ವಾಹನಗಳ ವಿರುದ್ಧ ಪೊಲೀಸ್ ಇಲಾಖೆ ಆಗಸ್ಟ್ 1 ರಿಂದ ಕಾರ್ಯಾಚರಣೆ ಆರಂಭಿಸಿದೆ. ಈ ತನಕ ಅಂದರೆ 22 ದಿನದಲ್ಲಿ 19,448 ಪ್ರಕರಣ ದಾಖಲಿಸಲಾಗಿದೆ.

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಅತಿ ಹೆಚ್ಚು ಪ್ರಕರಣ ದಾಖಲಾಗಿದ್ದು, ದೋಷಪೂರಿತ ನೋಂದಣಿ ಫಲಕವಿರುವ 9,684 ಪ್ರಕರಣ ದಾಖಲಿಸಲಾಗಿದೆ. ಮೈಸೂರಿನಲ್ಲಿ 634 ಪ್ರಕರಣ ದಾಖಲಿಸಿದ್ದು, ಎರಡನೇ ಸ್ಥಾನದಲ್ಲಿದೆ.

ಮೈಸೂರು ಜಿಲ್ಲೆಯಲ್ಲಿ 38, ಮಂಡ್ಯ ಜಿಲ್ಲೆಯಲ್ಲಿ 47, ಹಾಸನ ಜಿಲ್ಲೆಯಲ್ಲಿ 186, ಚಾಮರಾಜನಗರ ಜಿಲ್ಲೆಯಲ್ಲಿ 275 ಹಾಗೂ ಕೊಡಗು ಜಿಲ್ಲೆಯಲ್ಲಿ 21 ಪ್ರಕರಣ ದಾಖಲಿಸಲಾಗಿದೆ.

ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಅಂಕಿ ಅಂಶ ಸಹಿತ ಮಾಹಿತಿ ನೀಡಿರುವ ರಾಜ್ಯ ಸಂಚಾರ ಮತ್ತು ರಸ್ತೆ ಸುರಕ್ಷತಾ ಎಡಿಜಿಪಿ ಅಲೋಕ್ ಕುಮಾರ್, ದೋಷಪೂರಿತ ನೋಂದಣಿ ಫಲಕವಿದ್ದರೆ ಅಪರಾಧ ಕೃತ್ಯ ಎಸಗಲು ಹಾಗೂ ಅಪಘಾತ ಪ್ರಕರಣಗಳಿಂದ ಪಾರಾಗಲು ಸಹಾಯವಾಗುತ್ತದೆ. ಈ ಹಿನ್ನೆಲೆ ದೋಷಪೂರಿತ ನೋಂದಣಿ ಫಲಕವಿರುವ ವಾಹನಗಳನ್ನು ಪತ್ತೆಹಂಚಿ ಪ್ರಕರಣ ದಾಖಲಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ರಸ್ತೆ ಸುರಕ್ಷತೆ ಹಾಗೂ ಸಂಚಾರ ನಿರ್ವಹಣೆಗೆ ವಾಹನಗಳ ಸಂಖ್ಯೆಗಳು ನಿರ್ಣಾಯಕವಾಗಿರುತ್ತದೆ. ಅಪರಾಧ ಕೃತ್ಯಗಳನ್ನು ಪತ್ತೆ ಹಚ್ಚಲು, ಅಪಘಾತಗಳು ಸಂಭವಿಸಿದಾಗ ವಾಹನಗಳನ್ನು ಗುರುತಿಸಲು ವಾಹನಗಳ ಸಂಖ್ಯೆ ಮುಖ್ಯವಾಗಿರುತ್ತದೆ. ಈ ಹಿನ್ನೆಲೆ ಪೊಲೀಸ್ ಇಲಾಖೆ ದೋಷಪೂರಿತ ನೋಂದಣಿ ಫಲಕವಿರುವ ವಾಹನಗಳ ವಿರುದ್ಧ ಕಾರ್ಯಾಚರಣೆ ಕೈಗೊಂಡಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಎಐ ಕ್ಯಾಮರಾಗಳಿಂದ ಪಾರಾಗಲು ವಾಹನ ಸವಾರರ ಕಳ್ಳಾಟ!

ಬಾಪುಲಿಂಗರಾಜ್ ಅರಸ್

ಮೈಸೂರು, ಆ.25– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಎಐ ಕ್ಯಾಮರಾಗಳನ್ನು ಅಳವಡಿಸಿ, ಪೊಲೀಸರು ಅತೀ ವೇಗದ ವಾಹನಗಳಿಗೆ ದಂಡಾಸ್ತ್ರ ಪ್ರಯೋಗಿಸುತ್ತಿದ್ದಾರೆ. ಆದರೆ, ದಂಡದಿಂದ ಪಾರಾಗಲು ವಾಹನ ಸವಾರರು ಆ್ಯಪ್ ಬಳಕೆ ಮಾಡಿ, ಚಾಲಾಕಿತನ ಮೆರೆಯುತ್ತಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅತೀ ವೇಗದ ವಾಹನ ಚಾಲನೆಯಿಂದ ನೂರಾರು ಜನರು ಸಾವನ್ನಪ್ಪಿದ್ದಾರೆ. ನಿಗದಿತ ವೇಗದಲ್ಲಿ ವಾಹನ ಚಾಲನೆ ಮಾಡದಿರುವುದೇ ಅವಘಡಗಳಿಗೆ ಕಾರಣವಾಗಿತ್ತು.

ಈ ಹಿನ್ನೆಲೆ ಎಕ್ಸ್‌ಪ್ರೆಸ್ ವೇನಲ್ಲಿ ಪೊಲೀಸರು ಎಐ ಕ್ಯಾಮರಾಗಳನ್ನು ಅಳವಡಿಸಿದ್ದಾರೆ. ವಾಹನಗಳಿಗೆ 80 ಕಿಲೋ ಮೀಟರ್ ವೇಗ ಮಿತಿ ನಿಗದಿ ಮಾಡಲಾಗಿದೆ. ಜೊತೆಗೆ ಲೇನ್‌ಗಳನ್ನು ಬಿಟ್ಟು ಅಡ್ಡಾದಿಡ್ಡಿಯಾಗಿ ವಾಹನಗಳನ್ನು ಚಾಲನೆ ಮಾಡುವಂತಿಲ್ಲ. 80 ಕಿಲೋ ಮೀಟರ್‌ಗೂ ಮೀರಿ ವಾಹನ ಚಾಲನೆ ಮಾಡುವ ಹಾಗೂ ಲೇನ್‌ಗಳನ್ನು ಬದಲಿಸುವ ವಾಹನಗಳನ್ನು ಎಐ ಕ್ಯಾಮರಾಗಳು ಗುರುತಿಸಲಿವೆ.

ಅಲ್ಲದೆ ಆಗಸ್ಟ್ 1 ರಿಂದ ಜಾರಿಗೆ ಬಂದಿರುವ ಹೊಸ ಸಂಚಾರ ನಿಯಮದ ಪ್ರಕಾರ 130 ಕಿಲೋಮೀಟರ್‌ಗೂ ಮೀರಿ ವಾಹನ ಚಲಾಯಿಸುವ ವಾಹನ ಸವಾರರ ವಿರುದ್ಧ ಎಫ್‌ಐಆರ್ ದಾಖಲಿಸಲಾಗುತ್ತಿದೆ.

ಅತೀ ವೇಗದ ವಾಹನ ಸವಾರರನ್ನು ಗುರುತಿಸಲು ಪೊಲೀಸರು ಚಾಪೆ ಕೆಳಗೆ ನುಗ್ಗಿದರೆ, ಪೊಲೀಸರಿಗೆ ಸಿಕ್ಕಿ ಬೀಳದಂತೆ ವಾಹನ ಸವಾರರು ರಂಗೋಲಿ ಕೆಳಗೆ ನುಗ್ಗುತ್ತಿದ್ದಾರೆ.

ಹೌದು, ಪೊಲೀಸರು ವಿಧಿಸುವ ದಂಡದಿಂದ ಪಾರಾಗಲು ಚಾಲಾಕಿ ವಾಹನ ಸವಾರರು ಎಐ ಕ್ಯಾಮರಾಗಳಿಗೇ ಸೆಡ್ಡು ಹೊಡೆದಿದ್ದಾರೆ. ಅತಿ ವೇಗದ ವಾಹನ ಗುರುತಿಸಲು ಪೊಲೀಸರು ಹೇಗೆ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿದ್ದಾರೊ ಅದೇ ರೀತಿ ವಾಹನ ಸವಾರರು ಕೂಡ ಎಐ ಕ್ಯಾಮರಾಗಳಲ್ಲಿ ಸೆರೆಯಾಗದಂತೆ ಅತ್ಯಾಧುನಿಕ ತಂತ್ರಜ್ಞಾನದ ಮೊರೆ ಹೋಗಿದ್ದಾರೆ.



> ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸದ್ಯ 60 ಕ್ಯಾಮರಾ ಅಳವಡಿಸಿದ್ದು, ಇದು 100ರ ಗಡಿ ದಾಟಲಿದೆ. ಆಗ ಒಂದು ಕ್ಯಾಮರಾಗೂ ಮತ್ತೊಂದು ಕ್ಯಾಮರಾಗೂ ಅಂತರ ಕಡಿಮೆ ಇರುತ್ತದೆ. ಆಗ ಹೆಜ್ಜೆ ಹೆಜ್ಜೆಗೂ ಎಐ ಕ್ಯಾಮರಾಗಳಿರುವುದರಿಂದ ವಾಹನ ಸವಾರರಿಗೆ ರ್‍ಯಾಡರ್ ಸ್ಪೀಡ್ ಕ್ಯಾಮರಾ ಡಿಟೆಕ್ಟರ್ ಆ್ಯಪ್ ಬಳಕೆಗೆ ಬರುವುದಿಲ್ಲ.

ಬುದ್ಧಿವಂತ ಕೆಲವು ವಾಹನ ಸವಾರರು ರ್‍ಯಾಡರ್ ಸ್ಪೀಡ್ ಕ್ಯಾಮರಾ ಡಿಟೆಕ್ಟರ್ ಆ್ಯಪ್ ಬಳಸುತ್ತಿದ್ದಾರೆ. ಎಕ್ಸ್‌ಪ್ರೆಸ್ ವೇನಲ್ಲಿ ಯಾವ ಸ್ಥಳದಲ್ಲಿ ಕ್ಯಾಮರಾ ಇದೆ ಎಂಬುದು ಈ ಆ್ಯಪ್‌ನಿಂದ ತಿಳಿಯುತ್ತದೆ. ಕ್ಯಾಮರಾ ಸಮೀಪ ಇರುವಾಗ ನಿಧಾನವಾಗಿ 80 ಕಿಲೋಮೀಟರ್‌ಗೂ ಕಡಿಮೆ ವೇಗದಲ್ಲಿ ವಾಹನ ಚಾಲನೆ ಮಾಡುವ ಸವಾರರು ಕ್ಯಾಮರಾದಿಂದ ಸ್ವಲ್ಪ ದೂರ ಸರಿದ ಮೇಲೆ ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದಾರೆ ಎನ್ನಲಾಗಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ 60 ಕ್ಯಾಮರಾಗಳನ್ನು ಅಳವಡಿಸಲಾಗಿದೆ. 80 ಕಿಲೋಮೀಟರ್‌ಗೂ ಮೀರಿದ ವಾಹನ ಚಾಲನೆ ಮಾಡುವ ಹಾಗೂ ಲೇನ್‌ಗಳನ್ನು ಬದಲಾಯಿಸುವ ಸವಾರರಿಗೆ 1,000 ರೂಪಾಯಿ ದಂಡ ವಿಧಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ದಂಡದಿಂದ ಪಾರಾಗಲು ಚಾಲಾಕಿ ವಾಹನ ಸವಾರರು ಆಧುನಿಕ ಆ್ಯಪ್ ಬಳಸುತ್ತಿದ್ದಾರೆ.

ಚಾಲಾಕಿ ವಾಹನ ಸವಾರರು ಕಳ್ಳಾಟದ ಪ್ರತಿಕ್ರಿಯೆ ನೀಡಿರುವ ಸಂಚಾರ ಮತ್ತು ರಸ್ತೆ ಸುರಕ್ಷತಾ ಎಡಿಜಿಪಿ ಅಲೋಕ್ ಕುಮಾರ್, ಒಂದು ವಾಹನ ಎಕ್ಸ್‌ಪ್ರೆಸ್ ವೇನಲ್ಲಿ ಸಾಗಿದ ಸಂದರ್ಭದಲ್ಲಿ ಒಟ್ಟು ಸರಾಸರಿ ವೇಗವನ್ನು ಕ್ಯಾಮರಾದಿಂದ ಕಂಡು ಹಿಡಿಯಬಹುದು. ಇದರಿಂದ ವಾಹನ ಸವಾರರು ಬಳಸುವ ಆ್ಯಪ್ ಅಷ್ಟಾಗಿ ಬಳಕೆ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.



ಎಕ್ಸ್‌ಪ್ರೆಸ್ ವೇನಲ್ಲಿ ನಿಗದಿಗಿಂತ ಹೆಚ್ಚು ವೇಗದಲ್ಲಿ ವಾಹನ ಚಾಲನೆ ಮಾಡುವ ವಾಹನ ಸವಾರರ ಇ–ಮೇಲ್ ಹಾಗೂ ಎಸ್‌ಎಂಎಸ್‌ನಿಂದ ಮಾಹಿತಿ ಬರುತ್ತದೆ. ಆದರೆ ಆ್ಯಪ್ ಬಳಸಿ ಕಳ್ಳಾಟದಿಂದ ವೇಗವಾಗಿ ಸಾಗುತ್ತಿರುವ ವಾಹನ ಸವಾರರಿಗೆ ಈ ತನಕ ನೋಟಿಸ್ ಕೂಡ ಬಂದಿಲ್ಲ.

ಆಧುನಿಕ ತಂತ್ರಜ್ಞಾನ ಬಳಸಿ ಸಂಚಾರ ನಿಯಮ ಉಲ್ಲಂಘಿಸುವ ಪ್ರಕರಣಗಳು ಪೊಲೀಸರಿಗೆ ತಲೆನೋವಾಗಿದೆ. ಕಾನೂನು ಮಾತ್ರವಲ್ಲದೆ ತಂತ್ರಜ್ಞಾನಕ್ಕೆ ಕೂಡ ಸಿಕ್ಕಿ ಬೀಳದಂತೆ ಪಾರಾಗಲು ಹಲವು ದಾರಿಗಳಿವೆ ಎಂಬುದು ಇದರಿಂದ ಸ್ಪಷ್ಟವಾಗಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಎಐ ಕ್ಯಾಮರಾ ಅಳವಡಿಸಿದ ನಂತರ ದಂಡಕ್ಕೆ ಹೆದರಿದ ವಾಹನ ಸವಾರರು ವೇಗದ ಮಿತಿ ಕಡಿಮೆಗೊಳಿಸಿದ್ದಾರೆ. ಇದರಿಂದ ಅಪಘಾತಗಳ ಸಂಖ್ಯೆ ಕೂಡ ಕಡಿಮೆಯಾಗುತ್ತಿದೆ. ಆದರೆ ಕೆಲವು ಚಾಲಾಕಿ ವಾಹನ ಸವಾರರಿಂದ ಮಾತ್ರ ಸಂಚಾರ ನಿಯಮಗಳ ಉಲ್ಲಂಘನೆಯಾಗುತ್ತಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಮಿ. ಬಚ್ಚನ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಭೀಮಾ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ತಂಗಾಲಾನ್ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಗೌರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ತಾಜ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಹೆರಾಲ್ಡ್ ಅಂಡ್ ದಿ ಪರ್ಪಲ್ ಕ್ರಯಾನ್ (ಇಂ): ಬೆ.11ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.1ಕ್ಕೆ, ಸಂ.4.05ಕ್ಕೆ, ಸ್ತ್ರೀ 2 (ಹಿಂ): ರಾ.7.10ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಬೆ.10.45ಕ್ಕೆ, ಹೆರಾಲ್ಡ್ ಅಂಡ್ ದಿ ಪರ್ಪಲ್ ಕ್ರಯಾನ್ (ಇಂ): ಮ.2.10ಕ್ಕೆ, ಪೌಡರ್ (ಕ): ಸಂ.4.30ಕ್ಕೆ, ರಾ.7.15ಕ್ಕೆ, ವಾಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ರಾ.10ಕ್ಕೆ.
ಸ್ಕ್ರೀನ್ 3	ಏಲಿಯನ್ ರೊಮುಲಸ್ (ಇಂ): ಬೆ.10.55ಕ್ಕೆ, ಸಂ.4.50ಕ್ಕೆ, ರಾ.7.30ಕ್ಕೆ, ತಂಗಲಾನ್ (ತ): ಮ.1.25ಕ್ಕೆ, ಭೀಮಾ (ಕ): ರಾ.10ಕ್ಕೆ.
ಸ್ಕ್ರೀನ್ 4	ಸ್ತ್ರೀ 2 (ಹಿಂ): ಬೆ.10.20ಕ್ಕೆ, ಸಂ.4.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಕೃಷ್ಣಂ ಪ್ರಣಯ ಸಖಿ (ತ): ರಾ.7.05ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಭೀಮಾ (ಕ): ಬೆ.10.50ಕ್ಕೆ, ಪೌಡರ್ (ಕ): ಮ.1.45ಕ್ಕೆ, ಸಂ.4.20ಕ್ಕೆ, ಘೂಟೇಜ್ (ಮ): ಸಂ.6.55ಕ್ಕೆ, ನುನಕ್ಕುಝಿ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.12.25ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.50ಕ್ಕೆ.
ಸ್ಕ್ರೀನ್ 3	ಸ್ತ್ರೀ 2 (ಹಿಂ): ಬೆ.10ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಹಂಟ್ (ಮ): ರಾ.9.40ಕ್ಕೆ.
ಸ್ಕ್ರೀನ್ 4	ಕೃಷ್ಣಂ ಪ್ರಣಯ ಸಖಿ (ಕ): ಬೆ.10.20ಕ್ಕೆ, ಭೀಮಾ (ಕ): ಮ.1.25ಕ್ಕೆ, ಸಂ.6.35ಕ್ಕೆ, ಹಂಟ್ (ಮ): ಸಂ.4.20ಕ್ಕೆ, ಸ್ತ್ರೀ 2 (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್


PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಣೆ



ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಉತ್ಸವವನ್ನು ಅದ್ದೂರಿಯಾಗಿ ನೆರವೇರಿಸಲಾಯಿತು. ಸಂಸದರೂ ಆದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಎಂಎಲ್‌ಸಿ ಗೋ.ಮಧುಸೂದನ್ ಮತ್ತಿತರರಿದ್ದರು.

ಮೈಸೂರು, ಆ.25(ಎಂಕೆ)– ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ದಿವ್ಯರೂಪ ಕಲ್ಯಾಣ ಮಂಟಪದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಉತ್ಸವವನ್ನು ಅದ್ದೂರಿಯಾಗಿ ನೆರವೇರಿಸಲಾಯಿತು.

ಉತ್ಸವಕ್ಕೆ ಚಾಲನೆ ನೀಡಿದ ಸಂಸದರೂ ಆದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಭಾರತೀಯ ಕಲೆ–ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ನಾವೆಲ್ಲರೂ ಒಂದಾಗಿ ಕೆಲಸ ಮಾಡಬೇಕು. ಮೈಸೂರು ಅರಮನೆ ದಸರಾ ಉತ್ಸವದ ನಂತರ ಅದ್ದೂರಿಯಾಗಿ ನಡೆಸುವ ಉತ್ಸವ ಎಂದರೆ ಶ್ರೀಕೃಷ್ಣ ಜನ್ಮಾಷ್ಟಮಿಯಾಗಿದೆ. ಅರಮನೆ ಆವರಣದಲ್ಲಿ ಕೃಷ್ಣನ ರಥೋತ್ಸವ ನಡೆಯಲಿದೆ. ಹಾಗೆಯೇ ಮೈಸೂರಿನೆಲ್ಲೆಡೆ ಭಗವಾನ್ ಶ್ರೀಕೃಷ್ಣರ ಸ್ಮರಣೆಯಾಗಬೇಕು ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಮಾತನಾಡಿ, ಶ್ರೀ ಕೃಷ್ಣ ಜನ್ಮಾಷ್ಟಮಿ ಉತ್ಸವಕ್ಕೆ ಯದು ವಂಶದ ಅರಸರೇ ಬಂದಿರುವುದು ನಮ್ಮೆಲ್ಲರ ಸೌಭಾಗ್ಯವಾಗಿದೆ. ರಾಜವಂಶಸ್ಥರಾದರೂ ಸಾಮಾನ್ಯರೊಂದಿಗೆ ಬೆರೆತು ಮೈಸೂರನ್ನು ಅಭಿವೃದ್ಧಿಯತ್ತಾ ಕೊಂಡೊಯ್ಯುವ ಭರವಸೆ ನೀಡಿದ್ದಾರೆ. ಅವರನ್ನು ಗೆಲ್ಲಿಸಿದಕ್ಕೂ ಸಾರ್ಥಕ ಭಾವ ಮೂಡುತ್ತಿದೆ ಎಂದರು.

ಇದಕ್ಕೂ ಮುನ್ನ ಭಕ್ತ ಪ್ರಹ್ಲಾದ ನಾಟಕ ಪ್ರದರ್ಶನ, ಶ್ರೀ ಕೃಷ್ಣನ ಕುರಿತ 'ನೃತ್ಯ ನಾಟಕ' ಭರತನಾಟ್ಯ ಪ್ರದರ್ಶನ ನೀಡಲಾಯಿತು. ಬಳಿಕ ಶ್ರೀಕೃಷ್ಣನ ಕುರಿತು ಕೇನ್ಸ್ ತಂತ್ರಜ್ಞಾನದ ಸಿಇಓ ರಾಜೇಶ್ ಶರ್ಮ ಉಪನ್ಯಾಸ ನೀಡಿದರು. ನೂರಾರು ಮಂದಿ ಶ್ರೀಕೃಷ್ಣ ಭಕ್ತರು ಉತ್ಸವದಲ್ಲಿ ಭಾಗಿಯಾಗಿದ್ದರು.

ಸಿದ್ದರಾಮಯ್ಯ ತೇಜೋವಧೆ ಖಂಡಿಸಿ ರಾಜಭವನ ಚಲೋಗೆ ಮೈಸೂರಿಂದ 25 ಸಾವಿರ ಮಂದಿ



ಬೆಂಗಳೂರಿನಲ್ಲಿ ಆ.27ರಂದು ರಾಜಭವನ ಚಲೋ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಭಾನುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಕರ್ನಾಟಕ ಪ್ರದೇಶ ಕುರುಬ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಬಿ.ಸುಬ್ರಮಣ್ಯ ಮಾತನಾಡಿದರು.

ಮೈಸೂರು, ಆ.25(ಎಸ್‌ಬಿಡಿ)– ಮುಖ್ಯಮಂತ್ರಿ ಸಿದ್ದರಾಮಯ್ಯನವರ ತೇಜೋವಧೆ ಖಂಡಿಸಿ ಆ.27ರಂದು ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವ ರಾಜಭವನ ಚಲೋ ಕಾರ್ಯಕ್ರಮದಲ್ಲಿ ಮೈಸೂರಿನಿಂದ 25 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವಂತೆ ಎಂದು ಕರ್ನಾಟಕ ಪ್ರದೇಶ ಕುರುಬ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಬಿ.ಸುಬ್ರಮಣ್ಯ ಮನವಿ ಮಾಡಿದರು.

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ, ದಲಿತ, ಹಿಂದುಳಿದ, ಆದಿವಾಸಿ, ಅಲೆಮಾರಿ, ಅಲ್ಪಸಂಖ್ಯಾತ ಮತ್ತು ಜನಪರ ಸಂಘಟನೆಗಳು, ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ, ಸಿದ್ದರಾಮಯ್ಯನವರ ಅಭಿಮಾನಿಗಳ ಬಳಗದ ಸಹಯೋಗದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಿಂದ ರಾಜಭವನ ಚಲೋ ನಡೆಸಲಿರುವ ಹಿನ್ನೆಲೆಯಲ್ಲಿ ಮೈಸೂರು ಸಿದ್ಧಾರ್ಥನಗರದ ಕನಕ ಭವನದಲ್ಲಿ ಭಾನುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಹಿಂದುಳಿದ ವರ್ಗಕ್ಕೆ ಸೇರಿದ ಸಿದ್ದರಾಮಯ್ಯನವರು ಮೊದಲ ಬಾರಿ ಮುಖ್ಯಮಂತ್ರಿಯಾದಾಗ ಐದು ವರ್ಷ ಪೂರ್ಣಾವಧಿ ಆಡಳಿತವನ್ನು ಯಶಸ್ವಿಯಾಗಿ ನಡೆಸಿದರು. ಇದೀಗ ಎರಡನೇ ಬಾರಿಯೂ ಉತ್ತಮ ಆಡಳಿತ ನೀಡುತ್ತಿರುವುದನ್ನು ಸಹಿಸಲಾರದೆ ವಿಪಕ್ಷದವರು ಅಪಪ್ರಚಾರ ಮಾಡುತ್ತಿದ್ದಾರೆ. ಅನಾವಶ್ಯಕವಾಗಿ ಸಿದ್ದರಾಮಯ್ಯನವರನ್ನು ಮುಡಾ ವಿಚಾರದಲ್ಲಿ ತಳಕು ಹಾಕಿದ್ದಾರೆ. ಕೊಟ್ಟ ಮಾತಿನಂತೆ ಐದು ಗ್ಯಾರಂಟಿಗಳನ್ನು ನೀಡಿದ್ದನ್ನು ಸಹಿಸಲಾರದೆ ಬಿಜೆಪಿ ಕೇಂದ್ರ ಸರ್ಕಾರವೂ ಸಿದ್ದರಾಮಯ್ಯನವರ ವಿರುದ್ಧ ಕುತಂತ್ರ ನಡೆಸುತ್ತಿದೆ ಎಂದು ಆರೋಪಿಸಿದರು.

ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಕೇಂದ್ರ ಸರ್ಕಾರ ಕೈಗೊಂಬೆಯಂತೆ ನಡೆಸಿಕೊಳ್ಳುತ್ತಿದೆ. ರಾಜಭವನವನ್ನು ರಾಜಕಾರಣದ ಕೇಂದ್ರ ಬಿಂದುವಾಗಿ ಮಾಡಿಕೊಳ್ಳಲಾಗಿದೆ. ಪ್ರಧಾನಿ ಮೋದಿ ಹಾಗೂ ಕೇಂದ್ರ ಸಚಿವ ಅಮಿತ್ ಷಾ ಅವರದ್ದೇ ಪ್ರತ್ಯೇಕ ಸಂವಿಧಾನ ಎನ್ನುವಂತಾಗಿದೆ. ರಾಜ್ಯಪಾಲರು ಒಂದು ಪಕ್ಷದ ಪರವಾಗಿ ನಿಂತಿರುವುದು ರಾಜ್ಯದಲ್ಲಿ ಅಶಾಂತಿ ಉಂಟಾಗಲು ಕಾರಣವಾಗಿದೆ. ಈ ಕೂಡಲೇ ಅವರನ್ನು ವಜಾ ಮಾಡಿ ರಾಜ್ಯದ ನೆಮ್ಮದಿ ಕಾಪಾಡುವಂತೆ ರಾಷ್ಟ್ರಪತಿಗಳನ್ನು ಆಗ್ರಹಿಸುವ ಉದ್ದೇಶದಿಂದ ರಾಜಭವನ ಚಲೋ ಹಮ್ಮಿಕೊಳ್ಳಲಾಗಿದೆ. ಸಿದ್ದರಾಮಯ್ಯನವರ ಅಭಿಮಾನಿಗಳು, ಶೋಷಿತ ಸಮುದಾಯ, ಅಹಿಂದ ವರ್ಗದವರು ಸೇರಿದಂತೆ ಮೈಸೂರಿನಿಂದ 25 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿ, ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಸಭೆಯಲ್ಲಿ ಮುಖಂಡರಾದ ರಾಮಸ್ವಾಮಿ, ಮಂಡ್ಯ ಕುರುಬರ ಸಂಘದ ಜಿಲ್ಲಾಧ್ಯಕ್ಷ ಸುರೇಶ್, ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ನಾಗಭೂಷಣ್, ಚಿಕ್ಕಣ್ಣ, ಅನಂತ್, ಬೀರಿಹುಂಡಿ ಬಸವಣ್ಣ, ಬಸವರಾಜ್, ಆನಂದ್, ಕೆಂಪಣ್ಣ ಸುನಿಲ್, ರಾಜು, ರವಿ, ಶಿವಪ್ಪ ಸುಧಾ, ಭಾಗ್ಯಮ್ಮ, ಕಲ್ಪನಾ ಮತ್ತಿತರರು ಭಾಗವಹಿಸಿದ್ದರು.



12ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 12 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ತಾಯಿ–ಗಿರಿಜಾ, ಅಣ್ಣ–ಆನಂದ, ಅಕ್ಕ–ಭಾವ, ಪೂರ್ಣಿಮಾ ರಾಧಾಕೃಷ್ಣ ಮತ್ತು ಶ್ರೀದೇವಿ ಮಲ್ಲಿಕಾರ್ಜುನ್

ಸೆಂಥಿಲ್ ಕುಮಾರ್ ಎನ್.

ಸುಯೋಗ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ರಾಷ್ಟ್ರೀಯ ಗ್ರಂಥಾಲಯ ದಿನಾಚರಣೆ



ಸುಯೋಗ ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ಗ್ರಂಥಾಲಯ ಹಾಗೂ ಮಾಹಿತಿ ತಂತ್ರಜ್ಞಾನದ ಪಿತಾಮಹ ದಿವಂಗತ ಡಾ.ಎಸ್.ಆರ್.ರಂಗನಾಥನ್ ಅವರ ಸ್ಮರಣಾರ್ಥ ರಾಷ್ಟ್ರೀಯ ಗ್ರಂಥಾಲಯ ದಿನ ಆಚರಿಸಲಾಯಿತು.

ಮೈಸೂರು,ಆ.25– ಸುಯೋಗ ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ಗ್ರಂಥಾಲಯ ಹಾಗೂ ಮಾಹಿತಿ ತಂತ್ರಜ್ಞಾನದ ಪಿತಾಮಹ ದಿವಂಗತ ಡಾ.ಎಸ್.ಆರ್.ರಂಗನಾಥನ್ ಅವರ ಸ್ಮರಣಾರ್ಥ ರಾಷ್ಟ್ರೀಯ ಗ್ರಂಥಾಲಯ ದಿನ ಆಚರಿಸಲಾಯಿತು.

ಕಾರ್ಯಕ್ರಮವನ್ನು ಎಸ್‌ಡಿಎಂಐ ಎಂಡಿ ಕಾಲೇಜಿನ ನಿವೃತ್ತ ಗ್ರಂಥಾಲಯ ಅಧಿಕಾರಿ ಡಾ.ಎಂ.ಬಿ.ಸುನಿಲ್ ಉದ್ಘಾಟಿಸಿ ಮಾತನಾಡಿ, ಸುಯೋಗ ನರ್ಸಿಂಗ್ ಶಿಕ್ಷಣ ಸಂಸ್ಥೆಯ ಗ್ರಂಥಾಲಯ ಹಾಗೂ ಮಾಹಿತಿ ತಂತ್ರಜ್ಞಾನವನ್ನು ಪ್ರತಿಯೊಬ್ಬ ವಿದ್ಯಾರ್ಥಿಯು ಸದುಪಯೋಗ ಪಡೆದು ಕೊಳ್ಳಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ನರ್ಸಿಂಗ್ ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳುವುದರೊಂದಿಗೆ ಓದುವ ಅಭಿರುಚಿ ಬೆಳೆಸಿಕೊಳ್ಳುವ ಮೂಲಕ ಗ್ರಂಥಾಲಯದಲ್ಲಿ ಹೆಚ್ಚು ಹೆಚ್ಚು ಕಾಲ ಕಳೆಯುವ ಮೂಲಕ ಅಧ್ಯಯನಶೀಲರಾಗಬೇಕೆಂದರು. ಸುಯೋಗ ಸಮೂಹ ಶಿಕ್ಷಣ ಸಂಸ್ಥೆಗಳ ಸಿಇಓ ಡಾ.ರಾಜೇಂದ್ರ ಪ್ರಸಾದ್, ಉಪಾಧ್ಯಕ್ಷೆ ಡಾ.ಸೀಮಾ ಯೋಗಣ್ಣ, ಟ್ರಸ್ಟಿ ಸುಧಾ ಯೋಗಣ್ಣ, ಕಾಲೇಜಿನ ಪ್ರಾಂಶುಪಾಲೆ ಶ್ರೀಮತಿ ನಾಗಮಣಿ, ಗ್ರಂಥಪಾಲಕ ನರಸಿಂಹಮೂರ್ತಿ ಮುಂತಾದವರು ಉಪಸ್ಥಿತರಿದ್ದರು.

14ನೇ ವರ್ಷದ ಪುಣ್ಯಸ್ಮರಣೆ




ಎಂ. ಸಿಂಚನ

ಜನನ: 31.08.2004 ಮರಣ: 26.08.2010

ನೀನು ನಮ್ಮನ್ನಗಲಿ ಇಂದಿಗೆ 14 ವರ್ಷವಾದರೂ ಸದಾ ನಿನ್ನ ಸವಿನೆನಪಿನಲ್ಲಿರುವ

ದುಃಖತಪ್ತರು: ತಂದೆ–ಸಿ. ಮಹೇಶ್‌ಗೌಡ, ತಾಯಿ– ಎಂ.ಎನ್. ಪವಿತ್ರ, ಅಕ್ಕ–ಎಂ. ಸಂಜನ, ಅಜ್ಜಿ, ಅತ್ತೆ, ಮಾವಂದಿರು ಹಾಗೂ ಕುಟುಂಬವರ್ಗ

ನಿಧನ



ಇವರು 25.8.2024ರಂದು ದೈವಾಧೀನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ದಿನಾಂಕ 26.08.2024 ರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮ ನಗುವನಹಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

—ಕುಟುಂಬವರ್ಗ

ಬಿ.ರಾಮಸ್ವಾಮಿ (92 years).

ಮಾಜಿ ಚೇರ್ಮನ್, ಮಾಜಿ ಭೂ ನ್ಯಾಯ ಮಂಡಳಿ ಸದಸ್ಯರು, ಮಾಜಿ ಅಧ್ಯಕ್ಷರು, ಟಿ.ಎ.ಪಿ.ಸಿ.ಎಂ.ಎಸ್, ಮಾಜಿ ತಾಲೂಕ್ ಕಾಂಗ್ರೆಸ್ ಅಧ್ಯಕ್ಷರು.

ಚಾಮರಾಜನಗರ ಜಿಲ್ಲಾ ಪಂಚಾಯಿತಿ

ಜಿಲ್ಲಾ ಆಡಳಿತ ಭವನ, ನೆಲ ಮಹಡಿ, ಚಾಮರಾಜನಗರ ಜಿಲ್ಲೆ–571313

ಇ–ಮೇಲ್: ceochanagar@gmail.com ದೂರವಾಣಿ ಸಂಖ್ಯೆ: 08226–224013

ಸಂ: ಜಿಪಂಚಾ/DRDA/NRLM/17/2024-25(E-37115) ದಿನಾಂಕ: 20.08.2024

ಸಂಜೀವಿನಿ–ಕೆಎಸ್‌ಆರ್‌ಎಲ್ ಪಿಎಸ್ ಎನ್‌ಆರ್‌ಎಲ್‌ಎಂ ಯೋಜನೆಯಡಿ ಜಿಲ್ಲಾ/ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕಗಳಿಗೆ ಮಂಜೂರಾಗಿರುವ ಹುದ್ದೆಗಳಿಗೆ ಅನುಗುಣವಾಗಿ ಸಿಬ್ಬಂದಿಗಳ ಸೇವೆಯನ್ನು E–Procurement ಮೂಲಕ ಪಡೆಯುವ ಬಗ್ಗೆ.

E-PROCUREMENT TENDER NOTIFICATION
(Website: www.kppp.karnataka.gov.in)

ಚಾಮರಾಜನಗರ ಜಿಲ್ಲಾ ಪಂಚಾಯಿತಿ / ತಾಲ್ಲೂಕು ಪಂಚಾಯಿತಿಗಳಲ್ಲಿ ಎನ್‌ಆರ್‌ಎಲ್‌ಎಂ ಯೋಜನೆಯಡಿ ಮಂಜೂರಾಗಿರುವ ವಿವಿಧ ಹುದ್ದೆಗಳಿಗೆ ಅನುಬಂಧ–1ರಲ್ಲಿ ವಿವರಿಸಿರುವಂತೆ ಸಿಬ್ಬಂದಿಗಳ ಸೇವೆಯನ್ನು ಮಾನ್ಯ ಅಭಿಯಾನ ನಿರ್ದೇಶಕರು ಸಂಜೀವಿನಿ–ಕೆ.ಎಸ್.ಆರ್.ಎಲ್.ಪಿ.ಎಸ್ ಬೆಂಗಳೂರು ರವರ ಪತ್ರ : ಸಂಖ್ಯೆ ಕೆ.ಎಸ್.ಆರ್.ಎಲ್.ಪಿ.ಎಸ್/ಪೊ/03/2020-21-21/08 ದಿನಾಂಕ: 01-10-2020 ರಲ್ಲಿ ತಿಳಿಸಿರುವಂತೆ ಎರಡು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಅಧಿನಿಯಮ (KTPP) 1999/2000ರ ಪ್ರಕಾರ E-Procurement ಟೆಂಡರ್ ಮೂಲಕ ಪಡೆಯುವ ಅವಶ್ಯಕತೆ ಇರುತ್ತದೆ. ಸದರಿಯವರುಗಳ ಸೇವೆಯನ್ನು ಸಹ E-Procurement ಟೆಂಡರ್ ಮೂಲಕ ಪಡೆಯಲು ಉದ್ದೇಶಿಸಿದೆ.

1	ಟೆಂಡರ್ ಪ್ರಕಟಣೆ ದಿನಾಂಕ.	ಸಂ:ಜಿಪಂಚಾ/ಡಿಆರ್‌ಡಿಎ/ಎನ್‌ಆರ್‌ಎಲ್‌ಎಂ ದಿನಾಂಕ: 22–08–2024
2	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ.	ದಿನಾಂಕ: 23–08–2024
3	Pre Bid Meeting	ಜಿಲ್ಲಾ ಪಂಚಾಯತ್ ಕಾರ್ಯಾಲಯ, ಚಾಮರಾಜನಗರ ಕೊಠಡಿ ಸಂಖ್ಯೆ:14, ದಿನಾಂಕ:29–08–2024, ಬೆಳಗ್ಗೆ 11.30 ಗಂಟೆಗೆ
4	ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ.	ದಿನಾಂಕ: 06–09–2024 ಸಂಜೆ 5.00 ಗಂಟೆಗೆ
5	ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ.	ಜಿಲ್ಲಾ ಪಂಚಾಯತ್ ಕಾರ್ಯಾಲಯ, ಚಾಮರಾಜನಗರ ದಿನಾಂಕ:10–09–2024. ಬೆಳಗ್ಗೆ 11.00 ಗಂಟೆಗೆ
6	ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ.	ಜಿಲ್ಲಾ ಪಂಚಾಯತ್ ಕಾರ್ಯಾಲಯ, ಚಾಮರಾಜನಗರ ಕೊಠಡಿ ಸಂಖ್ಯೆ 14, ದಿನಾಂಕ:12–09–2024 ಬೆಳಗ್ಗೆ 11.30 ಗಂಟೆಗೆ
7	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ.	ರೂ. 2,40,000/–
8	ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ. ದೂರವಾಣಿ ಸಂಖ್ಯೆ: 08226–224015

ಸಂ: ವಾಸಾಸಂಇ:ಚಾನಗರ:194:2024–25

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. ಜಿಲ್ಲಾ ಪಂಚಾಯತ್, ಚಾಮರಾಜನಗರ,

ಕೇಂದ್ರದಿಂದ 156 ಸಂಯೋಜನೆಯ ಔಷಧಗಳ ನಿಷೇಧ

ನವದೆಹಲಿ, ಆ.25– ಜ್ವರ ಮತ್ತು ನೆಗಡಿ ಸೇರಿದಂತೆ ನೋವು ನಿವಾರಕಗಳು, ಮಲ್ಟಿವಿಟಮಿನ್‌ಗಳು ಮತ್ತು ಆಂಟಿಬಯೋಟಿಕ್‌ಗಳಂತಹ 156 ಸಂಯೋಜನೆಯ ಔಷಧಗಳನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ.

ಅಮಿಲೇಸ್, ಪ್ರೋಟಿಯೇಸ್, ಗ್ಲುಕೋಅಮೈಲೇಸ್, ಪೆಕ್ಟಿನೇಸ್, ಆಲ್ಫಾ ಗ್ಯಾಲಕ್ಟೋಸಿಡೇಸ್, ಲ್ಯಾಕ್ಟೇಸ್, ಬೀಟಾ–ಗ್ಲುಕೋನೇಸ್, ಸೆಲ್ಯುಲೇಸ್, ಲಿಪೇಸ್, ಬ್ರೋಮೆಲೈನ್, ಕ್ಸೈಲಾನೇಸ್, ಮಾಲ್ಟಿಸೆಲ್ಯುಲೇಸ್, ಮ್ಯಾಲ್ಟಿಸೆಲ್ಯುಲೇಸ್ ಎಂಬ ಔಷಧದ ಫಿಕ್ಸೆಡ್ ಡೋಸ್ ಕಾಂಬಿನೇಶನ್ ಅನ್ನು ಬಳಸಲಾಗಿದೆ ಎಂದು ಆಗಸ್ಟ್ 21ರ ಗೆಜೆಟ್ ಅಧಿಸೂಚನೆಯಲ್ಲಿ ಸರ್ಕಾರ ತಿಳಿಸಿದೆ.

ಔಷಧಗಳ ತಾಂತ್ರಿಕ ಸಲಹಾ ಮಂಡಳಿಯ ಶಿಫಾರಸಿನ ಮೇರೆಗೆ ಕೇಂದ್ರ ಸರ್ಕಾರವು ಸಾರ್ವಜನಿಕರ ಹೆಚ್ಚಿನ ಹಿತದೃಷ್ಟಿಯಿಂದ ದೇಶಾದ್ಯಂತ ಆ ಔಷಧಗಳ ತಯಾರಿಕೆ, ಮಾರಾಟ ಮತ್ತು ಮಾನವ ಬಳಕೆಗಾಗಿ ವಿತರಿಸುವುದನ್ನು ತಕ್ಷಣವೇ ಜಾರಿಗೆ ಬರುವಂತೆ ನಿಷೇಧಿಸಿದೆ.

ಕೇಂದ್ರ ಸರ್ಕಾರವು ನೇಮಿಸಿದ ತಜ್ಞರ ಸಮಿತಿಯು ಈ ವಿಷಯವನ್ನು ಪರಿಶೀಲಿಸಿದ ನಂತರ ಸರ್ಕಾರದಿಂದ ಈ ಕ್ರಮವು ಬಂದಿದೆ ಮತ್ತು ತಜ್ಞರ ಸಮಿತಿಯು ಈ ಫಿಕ್ಸೆಡ್ ಡೋಸ್ ಸಂಯೋಜನೆಯ ಆಡಳಿತವನ್ನು ತರ್ಕಬದ್ಧವಲ್ಲದ ಎಂದು ಪರಿಗಣಿಸಿದೆ. ಔಷಧಗಳ ತಾಂತ್ರಿಕ ಸಲಹಾ ಮಂಡಳಿಯು ಈ ಎಫ್‌ಡಿಸಿಯನ್ನು ಪರಿಶೀಲಿಸಿದೆ ಮತ್ತು ಈ ಎಫ್‌ಡಿಸಿಯಲ್ಲಿ ಒಳಗೊಂಡಿರುವ ಪದಾರ್ಥಗಳಿಗೆ ಯಾವುದೇ ಚಿಕಿತ್ಸಕ ಸಮರ್ಥನೆ ಇಲ್ಲ. ಎಫ್‌ಡಿಸಿ ಮನುಷ್ಯರಿಗೆ ಅಪಾಯವನ್ನುಂಟುಮಾಡಬಹುದು. ಆದ್ದರಿಂದ ಹೆಚ್ಚಿನ ಸಾರ್ವಜನಿಕ ಹಿತಾಸಕ್ತಿಯಲ್ಲಿ, ತಯಾರಿಕೆಯನ್ನು ನಿಷೇಧಿಸುವುದು ಅವಶ್ಯಕ ಎಂದು ಅಧಿಸೂಚನೆಯನ್ನು ಓದಲಾಗಿದೆ.

ನಿಷೇಧಿತ ಔಷಧಿಗಳ ಪಟ್ಟಿಯು ಕೂದಲಿನ ಚಿಕಿತ್ಸೆಗಳು, ಆಂಟಿಪರಾಸಿಟಿಕ್, ತ್ವಚೆ, ಅಲರ್ಜಿ–ವಿರೋಧಿಗಳಿಗೆ ಬಳಸುವ ಔಷಧಿಗಳನ್ನೂ ಒಳಗೊಂಡಿದೆ. ಒಂದೇ ಮಾತ್ರೆಯಲ್ಲಿ ಒಂದಕ್ಕಿಂತ ಹೆಚ್ಚು ಔಷಧಿಗಳಲ್ಲಿ ಸಂಯೋಜಿಸಲ್ಪಟ್ಟ ಔಷಧಿಗಳು ಫಿಕ್ಸೆಡ್ ಡೋಸ್ ಸಂಯೋಜನೆಯ ಔಷಧಿಗಳನ್ನು ಕಾಕ್ಟೈಲ್ ಔಷಧಗಳು ಎಂದೂ ಕರೆಯುತ್ತಾರೆ.

ಸಾರ್ವಜನಿಕ ಪ್ರಕಟಣೆ

ಮೈಸೂರು ನಗರ ಸರಸ್ವತಿಪುರಂ 7ನೇ ಕ್ರಾಸ್, 8ನೇ ಮುಖ್ಯ ರಸ್ತೆ, ಮನೆ ನಂ. 30–1 ರಲ್ಲಿ ವಾಸುತ್ತಿರುವ ನಮ್ಮ ಕಕ್ಷಿದಾರರಾದ **(1) ಶ್ರೀ ವೀರಪ್ಪ. ವೈ,** ದಿವಂಗತ ಎಮ್.ವೈ. ಜಿತೇಂದ್ರಿಯಪ್ಪರವರ ಪುತ್ರ, 66 ವರ್ಷ **(2) ಶ್ರೀ ವೀರಭದ್ರ. ವೈ,** ದಿವಂಗತ ಎಮ್.ವೈ., ಜಿತೇಂದ್ರಿಯಪ್ಪರವರ ಪುತ್ರ, 62 ವರ್ಷ **(3) ಶ್ರೀ ಸಿದ್ದಲಿಂಗೇಶ್. ಎಸ್.ವೈ.,** ಶ್ರೀ. ಷಡಾಕ್ಷರಿ ರವರ ಪುತ್ರ, 44 ವರ್ಷ, ಇವರ ಸೂಚನೆ ಅನುಸಾರ ಸಾರ್ವಜನಿಕರಿಗೆ ಈ ಕೆಳಕಂಡಂತೆ ತಿಳಿಸಲಾಗಿದೆ.

ನಮ್ಮ ಕಕ್ಷಿದಾರರುಗಳ ಕುಟುಂಬದ ಮೂಲ ಸದಸ್ಯರಾದ ದಿವಂಗತ ಎಮ್.ವೈ. ಜಿತೇಂದ್ರಿಯಪ್ಪರವರು ಅವರ ಜೀವಿತ ಅವಧಿಯಲ್ಲಿ ಅನುಸೂಚಿಯಲ್ಲಿ ನಮೂದಿಸಿರುವ ಜಮೀನನ್ನು ಸ್ವತ್ತಿನ ಮಾಲೀಕರಾದ ಶ್ರೀ ಎನ್. ರಾಘವೇಂದ್ರ ಮೂರ್ತಿರವರಿಂದ ನೋಂದಾಯಿತ ಕ್ರಯ ಪತ್ರಗಳ ಮುಖೇನ 1994 ರಲ್ಲಿ ಒಟ್ಟು 10 ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ. ಆ ಸಮಯದಲ್ಲಿ ಶ್ರೀ ಎನ್. ರಾಘವೇಂದ್ರ ಮೂರ್ತಿರವರು ಒಟ್ಟು 20 ಎಕರೆ ಜಮೀನಿನ ಮಾಲೀಕರೆಂದು ಬಿಂಬಿಸಿದ್ದರು.

ಕ್ರಯ ಮಾಡಿ ಮೂರು ವರ್ಷಗಳ ನಂತರ ಈ ಮೇಲೆ ತಿಳಿಸಿದ ಶ್ರೀ ಎನ್. ರಾಘವೇಂದ್ರ ಮೂರ್ತಿರವರು ನಮ್ಮ ಕಕ್ಷಿದಾರರಿಗೆ ಸೇರಿದ 10 ಎಕರೆ ಜಮೀನಿನಲ್ಲಿ 1 ಎಕರೆ 14 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡು ಕಳ್ಳಿ ಬೇಲಿ ಹಾಕಿಕೊಂಡಿದ್ದರು. ಆ ನಂತರದಲ್ಲಿ ಸ್ವತ್ತಿನ ಅಳತೆ ಮಾಡಿಸಿದಾಗ ಶ್ರೀ ಎನ್. ರಾಘವೇಂದ್ರ ಮೂರ್ತಿರವರು ಕೇವಲ 18 ಎಕರೆ 15 ಗುಂಟೆ ಜಮೀನಿನ ಸ್ವಾಧೀನ ಹಾಗೂ ಅನುಭವದಲ್ಲಿದ್ದರೂ ನಮ್ಮ ಕಕ್ಷಿದಾರರ ಕುಟುಂಬಕ್ಕೆ ಮಾರಾಟ ಮಾಡುವ ಸಂದರ್ಭದಲ್ಲಿ 20 ಎಕರೆ ಜಮೀನಿನ ಸ್ವಾಧೀನದಲ್ಲಿರುವುದಾಗಿ ಸುಳ್ಳು ಮಾಹಿತಿಯನ್ನು ನೀಡಿರುತ್ತಾರೆ. ಈ ಹಿನ್ನಲೆಯಲ್ಲಿ ಸದರಿ ಒತ್ತುವರಿ ಮಾಡಿಕೊಂಡ 1 ಎಕರೆ 14 ಗುಂಟೆ ಜಮೀನನ್ನು ಸ್ವಾಧೀನಕೊಡಬೇಕೆಂದು ಕೋರಿ ನಮ್ಮ ಕಕ್ಷಿದಾರರು ಮೈಸೂರಿನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವಾ ಓ.ಎಸ್. ಸಂಖ್ಯೆ 1578/2006 ರಲ್ಲಿ ದಾವೆ ಹೂಡಿರುತ್ತಾರೆ. ಸದರಿ ದಾವೆಯು ಈಗ 7ನೇ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುತ್ತದೆ.

ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿದ್ದರೂ ಸಾರ್ವಜನಿಕರಿಗೆ ಸುಳ್ಳು ಮಾಹಿತಿಯನ್ನು ಬಿಂಬಿಸುವ ದುರುದ್ದೇಶದಿಂದ ಒತ್ತುವರಿ ಮಾಡಿಕೊಂಡು ಕಳ್ಳಿ ಬೇಲಿ ನಿರ್ಮಿಸಿದ್ದ ಜಾಗದಲ್ಲಿ ಕಾಂಪೌಂಡ್ ನಿರ್ಮಾಣ ಮಾಡುವುದರ ಜೊತೆಗೆ ನಮ್ಮ ಕಕ್ಷಿದಾರರಿಗೆ ಸೇರಿದ 1 ಎಕರೆ 14 ಗುಂಟೆ ಜಮೀನಿನ ಜೊತೆಗೆ ಶ್ರೀ ಎನ್. ರಾಘವೇಂದ್ರ ಮೂರ್ತಿರವರು ಅವರಿಗೆ ಸೇರಿದ ಉಳಿಕೆ ಜಮೀನಿನ ಕೆಲ ಭಾಗದಲ್ಲಿ ದುರುದ್ದೇಶದಿಂದ ರಿಯಲ್ ಎಸ್ಟೇಟ್ ನಿರ್ಮಾಣ ಕಾರ್ಯ ಕೈಗೊಳ್ಳುವುದರ ಜೊತೆಗೆ ಸ್ವತ್ತಿನ ಸ್ವರೂಪವನ್ನು ಬದಲಾಯಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಇದರ ಜೊತೆಗೆ ಕೇವಲ 8 ಎಕರೆ 15 ಗುಂಟೆ ಜಮೀನಿಗೆ ಮಾಲೀಕತ್ವ ಹೊಂದಿದ್ದರೂ ನಮ್ಮ ಕಕ್ಷಿದಾರರಿಗೆ ಸೇರಿದ 1 ಎಕರೆ 14 ಗುಂಟೆ ಜಮೀನನ್ನು ಸೇರಿಸಿಕೊಂಡು ಒಟ್ಟು 9 ಎಕರೆ 32 ಗುಂಟೆ ಜಮೀನಿಗೆ ಹಳೆ ಸರ್ವೆ ನಂ. 39ನ್ನು ಹೊಸ ಸರ್ವೆ ನಂ. 68 ಎಂದು ದುರಸ್ತಿ ಮಾಡಿಸಿಕೊಂಡಿರುತ್ತಾರೆ.

ಈ ಎಲ್ಲಾ ಕಾರಣದಿಂದ ಮೈಸೂರು ನಗರ, ಕುವೆಂಪುನಗರ, ಹುಡ್ಕೊ ಮನೆ 2ನೇ ಹಂತ, ಮನೆ ಸಂಖ್ಯೆ ಎಲ್–214, 807 ರಲ್ಲಿ ವಾಸವಾಗಿರುವ ಲೇಟ್ ಶ್ರೀ ನಾರಾಯಣ ರವರ ಪುತ್ರ, ಸುಮಾರು 72ರ ಪ್ರಾಯದ ಶ್ರೀ ಎನ್. ರಾಘವೇಂದ್ರ ಮೂರ್ತಿಯವರೊಂದಿಗೆ ಯಾರೂ ಸಹ ಯಾವುದೇ ರೀತಿಯ ವ್ಯವಹಾರ ಮಾಡಿ ಮೋಸ ಹೋಗಬಾರದೆಂದು ಈ ಸಾರ್ವಜನಿಕ ತಿಳುವಳಿಕೆ ಪತ್ರದ ಮೂಲಕ ಎಚ್ಚರಿಸಲಾಗಿದೆ.

ಈ ತಿಳುವಳಿಕೆ ಪತ್ರದ ಹೊರತಾಗಿಯೂ ಶ್ರೀ ಎನ್. ರಾಘವೇಂದ್ರ ಮೂರ್ತಿ ಅವರೊಂದಿಗೆ ವ್ಯವಹರಿಸಿದ್ದಲ್ಲಿ ಅಂತಹ ವ್ಯವಹಾರವು ನಮ್ಮ ಕಕ್ಷಿದಾರರ ಹಕ್ಕನ್ನು ಬಂಧಿಸುವುದಿಲ್ಲ ಎಂದು ಈ ಮೂಲಕ ಎಚ್ಚರಿಸಲಾಗಿದೆ.


ಅನುಸೂಚಿ

ಮೈಸೂರು ತಾಲ್ಲೂಕು ಕಸಬ ಹೋಬಳಿ ಚೌಡಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.39/ಎ ಮತ್ತು 39/ಬಿ ಯಲ್ಲಿ ಒಟ್ಟು 10 ಎಕರೆ ಜಮೀನು ಇದಕ್ಕೆ ಚೌತಪುರ್:

ಪೂರ್ವಕ್ಕೆ : ಶ್ರೀ ರಾಮು ಅವರ ಜಮೀನು
ಪಶ್ಚಿಮಕ್ಕೆ : ಮೈಸೂರು – ಹೆಚ್.ಡಿ. ಕೋಟೆ ರಸ್ತೆ
ಉತ್ತರಕ್ಕೆ : ಎಣ್ಣೆಹೊಳೆ
ದಕ್ಷಿಣಕ್ಕೆ : ಶ್ರೀ ರಾಘವೇಂದ್ರ ಮೂರ್ತಿರವರಿಗೆ ಉಳಿಕೆ 8 ಎಕರೆ 15 ಗುಂಟೆ ಜಮೀನು

ಪಿ.ಡಿ. ಮೇದಪ್ಪ
ನ್ಯಾಯವಾದಿ
ನಂ. 1432/ಎ, ಅಂಬಾಸುತ ಸದನ, ದೇವರಾಜ ಮೊಹಲ್ಲಾ, ಮೈಸೂರು

ಇಪಿಎಸ್–95 ಪಿಂಚಣಿದಾರರ ಸಭೆ



ಮೈಸೂರಿನ ನಟರಾಜ ಭವನದಲ್ಲಿ ನಡೆದ ಇಪಿಎಸ್–95 ಪಿಂಚಣಿದಾರರು ಸಭೆಯನ್ನು ಎನ್‌ಎಸಿ ರಾಷ್ಟ್ರೀಯ ಕಾರ್ಯದರ್ಶಿ ಮಂಜುನಾಥ್ ಚಿಂತಾಮಣಿ ಉದ್ಘಾಟಿಸಿದರು.

ಮೈಸೂರು, ಆ.25– ಮೈಸೂರಿನ ಶ್ರೀ ನಟರಾಜ ಭವನದಲ್ಲಿ ನಡೆದ ಎನ್‌ಎಸಿ ಸಭೆಯಲ್ಲಿ ಬೆಂಗಳೂರು, ಮಂಡ್ಯ, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ಇಪಿಎಸ್–95 ಪಿಂಚಣಿದಾರರ ಸಭೆ ನಡೆಯಿತು.

ಸಭೆಯಲ್ಲಿ ಎನ್‌ಎಸಿ ರಾಷ್ಟ್ರೀಯ ಕಾರ್ಯದರ್ಶಿ ಮಂಜುನಾಥ್ ಚಿಂತಾಮಣಿ ಮಾತನಾಡಿ, ಎನ್‌ಎಸಿ ಸಂಘದ ಉದ್ದೇಶ ಹಾಗೂ ಸಂಘಟನೆಯನ್ನು ಮೈಸೂರು ಭಾಗದಲ್ಲಿ ಬೆಳೆಸಲು ಕರೆ ನೀಡಿದರು.

ಎನ್‌ಎಸಿ ಬೇಡಿಕೆಗಳನ್ನು ಸರಕಾರ ಹಾಗೂ ಇಪಿಎಫ್‌ಓ ಇಬ್ಬರು ಇಪಿಎಸ್–95 ಪಿಂಚಣಿದಾರರಿಗೆ ವಂಚನೆ ಮಾಡುತ್ತಿದ್ದಾರೆ. ನಮ್ಮ ಹಣದಿಂದಲೇ ನಮಗೆ ಕನಿಷ್ಠ ಪಿಂಚಣಿ ಬರುವ ಹಾಗೆ ದಿಲ್ಲಿಯಲ್ಲಿ ರಾಷ್ಟ್ರೀಯ ನಾಯಕರು ಯೋಜನೆ ಮಾಡುತ್ತಿದ್ದಾರೆ. ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ಸಿಬ್ಬಂದಿಯಿಂದ ಸಂಘದ ಅಧ್ಯಕ್ಷರು ಹಾಗೂ ಎನ್‌ಎಸಿ ಸಂಘದ ಕಾನೂನು ಸಲಹೆಗಾರರಾದ ನಂಜುಂಡೇಗೌಡರು ಮಾತನಾಡಿ, ಕಾನೂನಿನ ಚೌಕಟ್ಟಿನಲ್ಲಿ ಇಪಿಎಫ್‌ಓ ಕೆಲಸ ಮಾಡದೆ, ಸುಪ್ರೀಂ ಕೋರ್ಟಿನ ತೀರ್ಪನ್ನು ಅನುಷ್ಠಾನಕ್ಕೆ ತರದೆ, ಪಿಂಚಣಿದಾರರಿಗೆ ಕಿರುಕುಳ ಕೊಡುತ್ತಿದ್ದಾರೆ. ಇದರ ಬಗ್ಗೆ ಸರಕಾರಕ್ಕೆ ಹಾಗೂ ಸುಪ್ರೀಂಕೋರ್ಟಿನ ಗಮನಕ್ಕೆ ತರಲಾಗುವುದು. ಹೆಚ್ಚುವರಿ ಪಿಂಚಣಿ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳಬೇಡಿ. ಸದ್ಯದಲ್ಲೇ ಎಲ್ಲರಿಗೂ ಹೆಚ್ಚುವರಿ ಪಿಂಚಣಿ ಸಿಗುತ್ತದೆ ಆದರೆ ಪಿಂಚಣಿದಾರ ಹಣ ಸಂದಾಯ ಮಾಡುವುದಕ್ಕಿಂತ ಮೊದಲು, ಸ್ವಲ್ಪ ಯೋಚನೆ ಮಾಡಿ ಹಣವನ್ನು ಸಂದಾಯ ಮಾಡುವುದು ಒಳ್ಳೆಯದು ಎಂದು ಸಲಹೆ ನೀಡಿದರು.

ಎನ್‌ಎಸಿ ರಾಷ್ಟ್ರೀಯ ಮುಖ್ಯ ಸಂಯೋಜಕ ರಮಾಕಾಂತ ನರಗುಂದ ಮಾತನಾಡಿ, ಕನಿಷ್ಠ ಪಿಂಚಣಿ ಸದ್ಯದಲ್ಲೇ ಇತ್ಯರ್ಥ ಆಗುವ ಲಕ್ಷಣಗಳು ಇವೆ, ರಾಷ್ಟ್ರೀಯ ಎನ್‌ಎಸಿ ನಾಯಕರು ಕಮಾಂಡರ್ ಅಶೋಕ್ ರಾವುತ್, ವೀರೇಂದ್ರ ಸಿಂಗ್ ಅವರು ಹಣಕಾಸು, ಶ್ರಮ ಮಂತ್ರಿಗಳು ಹಾಗೂ ಇಪಿಎಫ್‌ಓಗಳ ಮೇಲೆ ಹೆಚ್ಚು ಒತ್ತಡ ಹೇರಲಾಗಿದೆ. ಅವರು ಕರೆದ ಸಭೆಗೆ ಹೋಗಲು ಇತ್ಯರ್ಥ ಆಗುವುದಾದರೆ ಮಾತ್ರ ಬರುವುದಾಗಿ ತಿಳಿಸಿದರು. ಸದ್ಯದಲ್ಲಿ ಕೇಂದ್ರ ಸರಕಾರದ ಜೊತೆಗೆ ಮಾತುಕತೆಗೆ ದೆಹಲಿಗೆ ತೆರಳುವುದಾಗಿ ತಿಳಿಸಿದರು.

ನಾಮ್ಸನ ವಾಸು, ಸಕ್ಕರೆ ಫೆಡರೇಷನ್ ನಾಗರಾಜ್, ಕೆಎಸ್‌ಆರ್‌ಟಿಸಿ ಮಂಜುನಾಥ ಮಾತನಾಡಿ, ತಮ್ಮ ಸಹಕಾರ ಎನ್‌ಎಸಿಗೆ ಇರುತ್ತದೆ ಹಾಗೂ ನಮ್ಮ ಸಂಘರ್ಷ ಮುಂದುವರೆಸಲು ಕರೆ ನೀಡಿದರು. ಸುಬ್ಬಣ್ಣ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಷಡಕ್ಷರಿ ಅವರು ವಂದನಾರ್ಪಣೆ ಮಾಡಿದರು.

ನಾಡಿನ ಸಮಸ್ತ ಜನತೆಗೆ ಗೌರಿ ಗಣೇಶ ಹಾಗೂ ದಸರಾ ಹಬ್ಬದ ಶುಭಾಶಯಗಳು

ಶುಭಕೋರುವವರು



ತಾಯಿ ಲಕ್ಷ್ಮಮ್ಮ ಪಿ ಪಾಪಣ್ಣ

ಕೇರ್ಗಳ್ಳಿ ಜಯಪುರ, ಮೈಸೂರು